೧. (ಘ, ಚ, ಜ) ಗಳಲ್ಲಿಲ್ಲ. ೨. † ವೃಷಭಾಂಗನೆಂಬರಸ ಜ್ಯೋತಿರ್ಮಾಲೆ ಸ್ತ್ರೀ (ಜ). ೩. ಪ್ರಧಾನ ಶ್ರೇಷ್ಠಿಯಾತನ (ಘ, ಛ, ಜ). ೪. ನಿನ್ನ (ಕ, ಙ, ಗ). ೫. (ಘ, ಛ, ಜ) ಗಳಲ್ಲಿಲ್ಲ. ೬. ದನೊಂದು ರತ್ನ ಕಂಬಳಂ (ಘ, ಛ, ಜ). ೭. ಗಂ ಕಂಬಳಮಂ (ಘ, ಛ, ಜ). ೮. ಅವರು (ಘ, ಛ, ಜ). ೯. ಪೊಳಲಂ ಪೊಱಮಟ್ಟು ಪೋಪನನಾರಾಮಮೆಂದರ್ ಸುಕುಮಾರ ಸ್ವಾಮಿಯ ತಾಯ್ ಕೊಳ್ಗುಂ ಪೋಗಿಮೆನೆ ಪೋದಡೆ (ಘ, ಚ, ಛ).

ರತ್ನಕಂಬಳಂಗಳಂ ಕೊಂಡೋರೊಂದಜಕೊಳಂ ನಾಲ್ಕು ಖಂಡಮಾಗೆ ಮೂವ
ತ್ತೆರಡು ಖಂಡಂಗಳಂ ಮಾಡಿ ಮೂವತ್ತಿರ್ವರ್ ಸೊಸೆವಿರ್ಕಳ್ಗಿ ಪಚ್ಚುಗೊಟ್ಟೊಡ
ವರುಂ ತಂತಮ್ಮ ಕೆಪ್ಪುಗಳೊಳ್ ತಗುಳ್ಚಿವರೆಂಬ ಮಾತನರಸಂ ಕೇಳ್ದು ಜೋದ್ಯಂ
ಬಟ್ಟುವರ ವಿಭೂತಿಯುಂ ನೋಡಲ್ಸೆಸೆಂದು ಮನೆಗೆ ವಪ್ಪುದಂ ಯಶೋಭದ್ರೆ ಕೇಳ್ದರ
ಸರ್ ಬರ್ಪ ಬಟ್ಟೆಯೊಳಿಲ್ಲಂ ಪಂಚರತ್ನಂಗಳಿಂ ರಂಗವಲ್ಲಿಯನಿಕ್ಕಿ ನೇತ್ರವಸ್ತ್ರಮಂ
ದುಕೂಲ ಚೀನಾದಿ ದಿವ್ಯವಸ್ತ್ರಂಗಳಂ ಪಾಸಿ ಮಣಿಳಭದ್ರಳಿಮಪ್ಪ ಹೇಮಮುಕ್ತಾ
ಹಾರಂಗಳಿಂ ತೋರಣಂಗಟ್ಟಿಸಿಯರಸರ ಬರವಂ ಪಾರುತ್ತಿರೆ ನೃಪತಿಯುಂ ಬಂದು
ಸುರೇಂದ್ರ ಭವನೋಪಮಮಪ್ಪ ಪ್ರಾಸಾದಮಂ ಪೊಕ್ಕು ವಿಸ್ಮಯಚಿತ್ತನಾಗಿ ಸುರ
೧೦ ಲೋಕದೊಳ್ಕ ಪುಣ್ಯವಂತರ್ತಂಬೊಲಾಗಳ್ ಮಹಾವಿಭೂತಿಯಿಂ ಶಯ್ಯಾತಳ
ದೊಳಿರ್ದು ಸುಕುಮಾರನೆಲ್ಲಿದನೆಂದು ಜೆಸಗೊಂಡೊಡೆ ಸ್ವಾಮಿ ಆತಂ ಕರಂ ಸಾದು
ನಿಮ್ಮ ಬರಲ್ಮನಱಯಂ ಪ್ರಾಸಾದದ ಮೇಗಣ ನೆಲೆಯೊಳಿರ್ದನೆಂದೊಡರಸಂ
ಬಱಯನಟ್ಟಿಮೆನೆ ತಾಯ್ ಪ್ರೋಗ ಮಗನ ಅರಸರ್ ವಂದರ್ ಬಾರ್ಪೋಪಮೆನೆ
ಅರಸರೆಂಬೊರಾರೆನೆ ತಾಯಂವಳ್ ನಮ್ಮಿನಾಳ್ವೊರೆಂದೊಡೆ ನಮ್ಮನಾಳ್ವರು
ಮೊಳರಿ ಎಂದು ವಿಸ್ಮಯಂಬಟ್ಟು ತಾಯವಚನಮಂ ಮಾಕ್ಕೊಳಲಾಱದೆ ಬರ್ಪೊನಂ
ನರೇಶ್ವರಂ ಕಂಡು ಕಣ್ಣೆತ್ತ ಕಂಮಸಿಂದು ಪೆತ್ತೆನೆಂದು ಪ್ರತ್ಯಕ್ಷ ಕಾಮದೇವನನಪ್ಪಿ
ಂಗಕೊಳ್ಪಂತಪ್ಪಿಂಗಕೊಂಡು ಖಪ್ಪಶಯ್ಯಾತಳದ ಮೇಗೊಂಬಿಡಸಿರಿಸಿದಾಂಬಗಳ್
ಸ್ವಜನಪರಿಜನಂಗಳ್ ಸಿದ್ಧಾರ್ಥಂಗಳಂ ಮಾಂಗಲ್ಯಮೆಂದಿರ್ವರ್ಗ್ಗಂ ಸೇಸೆಂಯ
ನಿಕ್ಕಲಾಗಳಾಂಗ ಸಿದ್ಧಾರ್ಥಂಗಳ್ ಸುಕುಮಾರಸ್ವಾಮಿಯಾಸನಮನೊತ್ತೆ ಕಟೆ
೨೦ ೧೪[ವ] ಮನಲುಂಳಿಗಿಸುವುದುಮುಂ ಸೊಡರಂ ನೋಡಿದಾಗಳ್ ಕಣ್ಣೀರ್ಗಳ್ ಸುರಿವು
ದುಮುಂ ಕಂಡೀಗಳೀತಂಗೆಂಬ ಬಾತುಗಳೆಂದು ಬಗೆದಿಪ್ಪಿನಂಂಜ ಮಜ್ಜನಕ್ಕೆಟ್ಟಿನ್ನಿ
ಮೆಂದೊಡಂತೆ ಗೆಯ್ವೆಮೆಂದು ಮಜ್ಜನಂಗೊಂಂಡಮರ ಸನ್ನಿಭಂ ಮಣಿಕುಟ್ಟಿಮ
ಮಪ್ಪ ಬಾವಿಯಂ ಪೊಕ್ಕು ಮಿಂದಲ್ಲಿಯನಘ್ರ್ಯಮಪ್ಪ ತನ್ನ ಬೆರಲ ಮಾಣಿಕದುಂಗುರಂ
ಂಬಿಟ್ಟುದಂನಜಸಲ್ಪೋಡಿ ಭದ್ರಕದ್ವಾರದ ತೂಂತನುರ್ಚಿ ನೀರಂ ಕಳೆದಾಗಳಂ
ದ್ರನ ಭಂಡಾರಂ ತೆಜಕೆದಂತಪ್ಪ ೧೮ಲೇಸಪ್ಪ ೧೯ನಾನಾಮಣಿಯ ವಿಚಿತ್ರ ಭೂಷಣಂ
ಗಳಂ ಪಲವುಮಂ ಕಂಂಡು ಮಹಾಂಶ್ಚರ್ಯ ಭೂತನಾಗಿ ನೋಡುತ್ತಿರ್ಪನ್ನೆಗ
ಮಾರೊಗಿಸಲೆಟ್ಟಿನ್ನಿಮೆಂದಾಗಳ್ ಪರಿಂಯಯಿಂಣದ ಮೊದಲೊಳ್ ಸುಕುಮಾರಂ

---

೧. ಕೊಂಡು (ಘ,ಛ,ಜ). ೨. ಪಾಲಿಸಿದರ್ ಮತ್ತಮಿಂತೆಂದು ರತ್ನಕಂಬಳಂ ಸುಕುಮಾರ ಸ್ವಾಮಿಯು ತಾಯ್ ಲಕ್ಕೆದಿನಾರಂಗಳಂ ಕೊಟ್ಟುಕೊಂಡ ಮೂವತ್ತೆರಡು ಖಂಡಂ ಮಾಡಿ ಮೂವತ್ತಿ
೨೦ ರ್ವರ್ ಸೊಸೆವಿರ್ಕಳ್ಗೆ (ಖ). ಇದು ಪುನರುಕ್ತಿ. ೩. ಟ್ಟಿಯ ಚೀನದುಕೂಲಾದಿ (ಘ, ಛ) ಟ್ಟಿಯ ಚೀನದ ದುಗೂಲಾಂಬರಾದಿ (ಜ) ೪. ಗಣಿಸಿಬಪ್ಪ (ಘ, ಛ, ಜ) ೫. ಕಮುಂಪೊ (ಜ). ೬. ತನಂತೆ ನೋಡುತ್ತಿರ್ದರಸನಂ ಯಶೋಭದ್ರೆಯರ್ಗೊಂಡು (ಘ,ಚ,ಛ,ಜ). ೭. ಕುಳ್ಳಿರಿಸೆ (ಘ,ಚ,ಛ,ಜ) ೮. ವ(ಸ–ಖಿ) ೯. ಸರ್ಬಂಜೆರ್ ಬಾ (ಕಗ), ಸಂ ಕರಿದಪಂ (ಘ, ಚ, ಛ, ಜ). ೧೦. ನಿಮ್ಮ (ಕಗ). ೧೧. (ಜ)ದಲ್ಲಿಲ್ಲ. ೧೭. ಡರಿಸಿದನಾ (ಜ). ೧೩. ಗಳನಿಕ್ಕೆ(ಜ). ೧೪. ರಮನಲ್ಲಿ (ಕ,ಗ), ರಮನ(ಖಿ), ಯನಲು (ಘ,ಚ,ಛ,ಜ). ೧೫. ಬಾವ್ಯಾಂತನೆಂದಿರ್ವನ್ನೆಗಂ (ಘ,ಚ,ಛ,ಜ). ೧೬. ಡಡೆ (ಘ,ಚ,ಛ). ೧೭. ಪಿರ್ದುರ್ದೆ (ಕ,ಖಿ,ಗ), ಬಳ್ಳಿಡದ (ಘ,ಚ,ಛ,ಜ). ೧೮. ಲೋಲ (ಘ), (ಚ,ಛ,ಜ) ಗಳಲ್ಲಿಲ್ಲ. ೧೯. ಡಾ (ಖಿ,ಘ,ಚ,ಛ,ಜ). ೨೦. ಯುಂ (ಕ, ಖಿ, ಗ).

ಬೆರಸು ನಾನಾಪ್ರಕಾರದಿಸಿಯವಪ್ಪುಣಿಸುಗಳನುಣ್ಬಂ ಸುಕುಮಾರಸ್ವಾಮಿ
ಅರ್ಧಾಹಾರಮುಂ ನುಂಗುಗುಮರ್ಧಾಹಾರಮನುಗುಮುಮದಂ ನೋಡಿ ಇದುವು
೧ಮೊಂದು ಕುತ್ತ[ಂ]೧ ಆಹಾರದ ಮೇಗರುಚಿಯಿಂದು ಬಗೆದುಣಿಸು ಸಮೆದ
ಬಲಿಕ್ಕೆ ಗಂಧ ತಾಂಬೂಲ ಮಾಲ್ಯ ವಸ್ತ್ರಾಭರಣಂಗಳಂ ತಂದು ಕೊಟ್ಟಾಗವಂ
ತೊಟ್ಟುಟ್ಟು ಸನದನಂಗೊಂಡು 'ಸುಖಸಂಕಥಾ ಪ್ರಮೋದದಿಂದೊಡಗೆ ಯಶೋ
ಭದ್ರೆಯನರಸನಿಂತೆಂದು ಪೆಸಗೊಂಡನಬ್ಬಾ ಎಮ್ಮ ತಮ್ಮನ ಕಟಿಪ್ರದೇಶಭಾಗ
ಗಕ್ಕುಂ, ಕಣ್ಣು ನೀರ್ ಬರ್ಪುದಕ್ಕುಂ, ಬರುಜಿಗಮೇಕೆ, ಮರ್ದನಂ ಮಾಡಿಸಿದಿರಿಲ್ಲಿನೆ
ಸೇವಾ ಆತಂಗಿವು ಕುತ್ತಮುಬ್ಬಸ ಸೇಸಳಿಯಿಕ್ಕಿಳಿದ ಸೊರುಸಪಂಗಳೊತ್ತೆ
ಸೈರಿಸಲಾಱಂ ಮತ್ತೆ ಆಪಕಾಲಮುಂ ಮೂನೆಕದ ಜೆಳಗಿನೊಳಿರ್ಪುದಱಿಂದಂ ೧೦
ಸೊಡರ ಬೆಳಗಿಂಗೆ ಸೈರಿಸದೆ ಕಣ್ಣು ನೀರ್ ಬರ್ಪುದುಂ, ಮತ್ತಂ ಕ್ರಮಮಱಿಸಿಕೊಳ್ಳಲ
ಸೊಳ್ ವಾಸಿಸಿದಕ್ಕೆಯೊಳ್ ಪ್ರಕಾಸತ್ತೆಯಂ ನೀಸ್ಪುಂ ಬಂದೊಣಿ ಪೆರಸಿಯಟ್ಟುದು
ಕೂಬುಮಪ್ಪುದಱಿಂ ವಾಸಿಸಿದಕ್ಕೆಯೊಳು ಕೂಬುಂ ನುಸುಂಗುಗುಮಱಿದ ಕೂಬಿನ್ದು
ಗುಬ್ಬುಮದಱಿಂದೀತಂಗೀ ಯವಸ್ಥೆಗಳಾದುವೆನ್ನೆ, ಕೇಳ್ದು ವಿಸ್ಮಯಂ ಬಟ್ಟು, ಈತನ
ಕ್ಷಣಮಾತ್ರದ ಭೋಗಕ್ಕುಂ ಸುಖಕ್ಕುಂ ಎನ್ನೆಮ್ಮೆಲ್ಲಾ ಕಾಲಮರಸುತನಂಗೆಯ್ವಲ್ಲಿ
ಮೊಳಪ್ಪ ಭೋಗೋಪಭೋಗಂಗಳ್ ಪೊರೆಯಲ್ಲವಱಿಂದೀ ಲೋಕದೊಳೀತನೆ
ಸರಮಾರ್ಥಂ ಸುಖಿಯೆಂದೊಸೆದರಸನವಂತಿ ಸುಕುಮಾರನೆಂದು ಪೆಸರನಿಟ್ಟುಂ

ಯಶೋಭದ್ರೆಯುಮರಸನನೇಕ ವಸ್ತ್ರಾಭರಣಂಗಳಿಂದಂ ಪೂಜಿಸಿ ಕಱಿಸಿ
ಸೊಳಂತು ಸುಕುಮಾರ ಸ್ವಾಮಿಗೆ ಸುಖದಿಂದಂ ಕಾಲಂ ಸಲೆ ಮತ್ತೊಂದು ದಿವಸಂ
ಯಶೋಭದ್ರೆಯು ಭ್ರಾತೃವರಪ್ಪ ದಯಾಭದ್ರರೆಂಬ ರಿಸಿಯರ್ ಮುನ್ನಮವರ ೨೦
ನಕ್ಕದೆ ಸೂರದತ್ತಂ ಧರ್ಮಂಗೇಳ್ದು ವೈರಾಗ್ಯಮಾಗಿ ಪುತ್ರಮುಖಂಗಂಡು ತಪಂ
ಬಟ್ಟೊನಾತನ ಮಗನುಂ ರಿಸಿಯರಂ ಕಂಡಾಗಳ್ ತಪಂಬಡುಗುಮೆಂಬುದಂ
ಮುನ್ನೆ ನ್ಪೆಮಿತ್ತಿಕರಾದೇಶಂಗೆಯ್ದಿರ್ದರ್ ಮತ್ತಂ ದಯಾಭದ್ರರೆಂಬ ರಿಸಿಯರ್
ಗ್ರಾಮನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖಂಗಳಂ ವಿಹರಿ
ಸುತ್ತಂ ಬರ್ಪ ದಿವ್ಯಜ್ಞಾನಿಗಳ್ ಸುಕುಮಾರಸ್ವಾಮಿಗೆ ನಾಲ್ಕುತಿಂಗಳುಮ್ಮೆಂದು
ನಿವಸಮಾಯುಷ್ಯಪ್ರಮಾಣಮನಱಿದುಪಕಾರಾರ್ಥಮುಜ್ಜೈನಿಗೆ ವಂದು ಸುಕು
ಮಾರಸ್ವಾಮಿಯ ಮಾಡದ ಜಿನಜಿನಾಗಣ ನಂದನ ವನದೊಳಗಣ ಜಿನಾಲಯ
ಸೊಳಾಷಾಢಮಾಸದ ಚತುರ್ದಶಿಯ ದಿವಸದಂದು ಪಜಿಪ್ಪೊಚ್ಚುಗಂ ಬಂದು
ತೋಗುಗೊಂಡಿರ್ದರನ್ನೆಗಂ ವನಪಾಲಕರ್ ಪೋಗಿ ಯಶೋಭದ್ರೆಗೆ ರಿಸಿಯರ
ಬರವಂ ಪೇೞ್ದೊಡಾಕೆಯುಂ ಬಂದು ದೇವರುಮಂ ರಿಸಿಯರುಮಂ ಬಂದಿಸಿ ೩೦

---

೧. ಮೊಂದು ಕುತ್ತು (ಖ), ಮುಮೊಂದು ವ್ಯಾಧಿ (ಘ, ಚ, ಛ, ಜ). ೨. ದದೊಳಿರ್ದಾಗಳ್ (ಘ,ಚ,ಛ,). ೩. ಶದಶೋ (ಘ, ಚ, ಛ, ಜ). ೪. ಸಿಕ್ಕ (ಜ). ೫. ಸರ್ವಸ (ಘ, ಚ, ಛ, ಜ). ೬. ನಿಮ್ಮಡಿ (ಘ, ಚ, ಛ, ಜ). ೭. ನುಣ್ಣ (ಘ, ಜ). ೮. ತನ್ನ ಭರ್ತ್ಯರಂ (ಘ, ಚ, ಛ, ಜ). ೯. ಕ್ಷಣಮೆ (ಚ,ಜ). ೧೦. ಆಮೇಲ್ಗೆ (ಘ,ಛ,ಚ,ಜ). ೧೧. ಮೊದರಿಂದು (ಘ,ಚ,ಛ,ಜ). ೧೨. ಕೆಳ (ಖ). ೧೩. ದಲು ಪರೆವೊರ್ತ್ತ (ಟ), ದಂದು ಪರೆವತ್ತ (ಕ), ದೊಳು ಪರೆ ವೊತ್ತ (ಗ); ದೊಳ್ ಪರೆವೊಳ್ತು (ಘ, ಛ), ದೊಳ್ ಪರೆಸೊಳ್ತು (ಚ), ದೊಳು ಪಜಿಸೊಳ್ತು (ಜ).

ಭಟ್ಟಾರಾ ನೀಮಿಲ್ಲಿಗೇಕೆ ಬಂದಿರಿಲ್ಲಿಂದಂ ಪೊಱವೋಪಿಲೊಳ್ ಪೆಱವುಳಿ ಬಸದಿ ಯಿಲ್ಲಾ ಎಂದೊಡೆ ಭಟ್ಟಾರರೆಂದರಬ್ಬಾ ನಿಡುವಯಣಂ ಬಂದು ಸೇದೆಗಟ್ಟಿಂತಾ ನುಮಿಲ್ಲಿಗೆಯಾಸತ್ತು ಜೋಗಿನ ಪೊಟ್ಟಿಱೊಳೆಯ್ದಿ ಬಂದು ಜೋಗುಗೊಂಡಿರ್ದೆ ನೆಮೆತ್ತಲುಂ ಪೋಗಲಾಗದೆನೆ ಅಂತಪ್ಪೊಡೆ ಭಟಾರಾ ನಿಮ್ಮನೊಂದಂ ಬೇಡಿದಪ್ಪೆಂ ನಾಲ್ಕು ತಿಂಗಳುಮೇನುನುನೋದದೆ ಮೋನಂಗೊಂಡು ಬಸದಿಯಂಗಣದೊಳ್ ನಡಪಾಡದೊಳಗಣಡಂಗಿರ್ದು ಜೋಗು ನೆಱೆದಂದು ಬಿಜಯಂಗೆಯ್ಯಿಮೆಂದೊಡಂತೆಗೆಯ್ದೆಮೆಂದು ಭಟಾರರಿರ್ದರ್

ಮತ್ತಿತ್ತಲ್ ಸುಕುಮಾರಸ್ವಾಮಿಯುಂ ಸರ್ವತೋಭದ್ರನೆಂಬುತ್ತುಂಗ ೧೦ ವಿಚಿತ್ರಮಾಗಿರ್ದ ಪ್ರಾಸಾದದ ಮೇಳಿಗೇಱಿನೆಯ ನೆಲೆಯೊಳ್ ಕಾರ್ತಿಕ ಮಾಸದ ಪುಣ್ಣಮಿಯಂದು ಸುಖದಿಂದೆ ಮಲುಂದಿರ್ದನನ್ನೆಗಮಿತ್ತ ದಯಾಭದ್ರ ಭಟಾರರ್ಗೆ ಜೋಗು ನೆಱೆದು ಯಶೋಭದ್ರೆಯ ಬೇಡಿದ ಮೋನದ ದಿವಸದ ಪ್ರಮಾಣಾವಸಾನ ದೊಳ್ ಬೈಗಿರುಳಿನ ಪಂಚಮಹಾಶಬ್ದದ ಪೊಚ್ಚಿಱೊಳ್ ತ್ರಿಲೋಕ ಪ್ರಜ್ಞಪ್ತಿ ಯೆಂಬುದಂ ಮೃದು ಮಧುರ ಗಂಭೀರ ಸ್ವರದಿಂ ಭಟಾರರ್ ಪರಿವಡಿಗೆಯ್ದಾಗಳ್ ಅಧೋಲೋಕ ತಿರ್ಯಗ್ಲೋಕಂಗಳಿರ್ದ ಸ್ವರೂಪಮುಂ ಪ್ರಮಾಣಮುಮನೋದಿ ಊರ್ಧ್ವಲೋಕ ವ್ಯಾವರ್ಣನೆಯಂ ಪೇಬ್ಯಾಗಮಚ್ಯುತಕಲ್ಪದ ಪದ್ಮಗುಲ್ಮ ವಿಮಾನಮಂ ವ್ಯಾವರ್ಣಿಸುವುದಂ ಸುಕುಮಾರಸ್ವಾಮಿ ಕೇಳ್ದು ಜಾತಿಸ್ಮರನಾಗಿಯಾ ನಿಲ್ಲಿ ಪುಟ್ಟಿ[ದ್ದೆ]ನೆಂಬುದನಱಿದು ಅಹೋ ಸುರಲೋಕಸುಖಮೆಂಬಮ್ಮತ ಸಮು ದ್ರದ ನೀರೆಲ್ಲಮಂ ಕುಡಿದು ತಣಿಯ್ದುದನೀ ಮನುಷ್ಯ ಭವದ ಸುಖಮೆಂಬ ಪುಲ್ಲನಿ ೨೦ ಯೊಳ್ ಸಿಲ್ಕಿ ಶಿವಸುಖಮನೆಯ್ದಿಸುವ ಸಚ್ಚಾರಿತ್ರದಿಂ ಬಱ್ಪಿಲ್ಲದೆ ನೆಂದು ತನ್ನಂ ತಾಂ ನಿಂದಿಸುತ್ತಂ ಮಂಚದಿಂದಿಱಿದು ಮಾಡದೊಳ್ಗಿರ್ದ ವಸ್ತ್ರಂಗಳಂ ತೆಗೆದು ಕೊಂಡು ೧೦ಪ್ರಾಸಾದದ ಪೆಱಗಣ ಗವಾಕ್ಷ ಜಾಳದೊಳ್ ೧೦ಕಟ್ಟಿ ೧೧ಕೊಂಡೊಂ ದೊಂದಱ ತುದಿಯೊಳೊಂದೊಂದು೧೧ ವಸ್ತ್ರಮಂ ತಗುಳ್ಚಿ ಪಿಡಿದಿಱಿದು ಜಿನಾಲಯ ಮನೆಯ್ದಿ ದೇವರ್ಗೆ ನಮಸ್ಕಾರಂಗೆಯ್ದು ದಯಾಭದ್ರ ಭಟಾರರ್ಗೆಱಗಿ ಪೊಡೆವಟ್ಟು ೧೨ದೀಕ್ಷೆಯಂ ಪ್ರಸಾದಂಗೆಯ್ದೆನ್ನಂ೧೨ ಸಂಸಾರಾರ್ಣವದತ್ತಣಿಂದೆ೧೩ತ್ತಿಮೆಂ ದೊಂಗೆ ಭಟಾರರ್ ಮೂಱುದಿವಸಂ ನಿನಗಾಯುಷ್ಯಮೆಂದೊಡೀಗಳೀ ನಿಸ್ಸಾರಮಪ್ಪ ದೇಹದಿಂ ಸಾರಮಪ್ಪ ತಪಮಂ ಕೈಕೊಂಡು ಪಲಕಾಲಂ ನೆಗ೧೪ಳ್ದಿಲ್ ಪೆತ್ತೆ೧೪ನಿಲ್ಲ ನಿಸ್ಸಾರಮಪ್ಪ ಭೋಗದೊಳ್ ಸಿ೧೫ಲ್ಲಿ೧೫ ಅಮೇಧ್ಯದೊಳ್ ಕ್ರೀಡಿಸುವ ಬಾಳಕಂ ಬೊಲ್ ಕಾಲಮಂ ಬಲ್ಪಿ೧೬ಕಳೆದಿ೧೬ನೆಂದು ತನ್ನನಾದಮಾನುಂ ನಿಂದಿಸಿ ತತ್ಪಾದ

---

೩೦ ೧. ಪ್ರೊಳಲೊಳಗೆ ಬಸದಿಗಳಿಲ್ಲಾ (ಛ,ಚ,ಜ), ಪ್ರೊಳಲೊಳಿನ್ ಪೆಜವು ಬಸದಿಗಳಿಲ್ಲಾ (ಛ). ೨. ಸತುಗೆಟ್ಟು (ಕ). ೩. ವಿನ್ನೆತ್ತ ಪೋಪೆಯಬ್ಬಾಯೆನೆ ಯಂತಪ್ಪೊಡೆ ಭಟಾರಾ ನಿಮ್ಮನೊಂದನೊಡಂ ಬಡಿಸಿದ ಪೆಂ (ಛ,ಚ,ಛ,ಜ). ೪. ಗಳೇಳ (ಕ. ಗ.), ಗಣನೇಳ (ಜ). ೫. ಉಂದಿಳ್ದ (ಕ.ಖ.ಗ), ಪಟ್ಟಿರ್ದ (ಛ, ಚ, ಛ), ಪಟ್ಟಿರ್ದೊ (ಜ). ೬. ಳಾರಣ (ಕ, ಖ, ಗ). ೭. ಪುಟ್ಟಿಳ್ದೆ (ಕ, ಖ, ಗ), ಪುಟ್ಟಿದೆ (ಛ,ಚ,ಛ,ಜ). ೮. ಳ್ದೆ (ಕ,ಖ,ಗ). ೯. ಗೊಟ್ಟಿರ್ದ (ಛ,ಚ,ಛ,ಜ). ೧೦. ಪೆಜಗಣಗವಾ ಕ್ಷದೊಳ್ (ಛ, ಚ, ಛ, ಜ). ೧೧. ಯೋರೊಂದಱ ತುದಿಯೊಳೋರೊಂದು (ಛ, ಚ, ಛ, ಜ). ೧೨. ದೀಕ್ಷಾಪ್ರಸಾದದಿಂ (ಛ, ಚ, ಛ, ಜ). ೧೩. + ನ್ನನೆ (ಛ, ಚ, ಛ, ಜ). ೧೪. ಳ್ದೆ (ಕ, ಗ). ೧೫. ಕ್ಕಿ (ಕ, ಗ, ಛ, ಚ, ಛ, ಜ). ೧೬. ಕಳಿಪಿದೆ (ಕ, ಗ, ಜ).

ಮೂಲದೊಳ್ ತಪಂಬಟ್ಟು ಪಂಚಮಹಾಬ್ರತಂಗಳನೇಱಿಸಿಕೊಂಡು ಪಡಿಕಮಣಂ
ಗೇಳ್ದ ತದನಂತರಂ ನಿಶ್ಚಯ ಸಮ್ಯಕ್ತ್ವಮುಂ ಕೈಕೊಂಡಿಂಬಱಿಕ್ಕೆ ಮಹಾ
ಕಾಳಮೆಂಬ ಶ್ಮಶಾನಕ್ಕೆ ಪೋಗಿ ಯಾವಜ್ಜೀವಮಾಹಾರಕ್ಕೆ ನಿವೃತ್ತಿಗೆಯ್ದು
ಪ್ರಾಯೋಪಗಮನ ವಿಧಾನದಿಂ ಪ್ರಚ್ಛನ್ನಮಪ್ಪೆಡೆಯೊಳ್ ಸ್ಮೃತಕಸೆಜ್ಜೆಯೊಳಿರ್ದು
ಸಂನ್ಯಸನಂಗೆಯ್ದು ಧರ್ಮಧ್ಯಾನ ಶುಕ್ಲಧ್ಯಾನಂಗಳಂ ಭಾವಿಸುತ್ತಿರ್ಪನ್ನೆಗಂ

ಇತ್ತ ವಾಯುಭೂತಿಯಪ್ಪ ಭವದಂದಿನತ್ತಿಗೆಯಪ್ಪ ಸೋಮದತ್ತೆ ಯೆಂಬೊಳ್
ನಿದಾನಂಗೆಯ್ದು ತನ್ನ ನಾಲ್ವರ್ ಮಕ್ಕಳುಂ ತಾನುಂ ಸಂಸಾರಸಮುದ್ರದೊಳ್
ನೀಡುಂ ತಿಱಿನೆ ತಿರಿದು ಬಂದು ಪೆಣ್ಣಿರಿಯಾಗಿ ಪುಟ್ಟಿ ತನ್ನ ನಾಲ್ಕುಮಱಿಗಳ್ವೆರಸಾ
ಹಾರಮನಱಿಸಿ ತೊಟಲುತ್ತಂ ಬಪ್ಪುದನ್ನೆಗಂ ಸುಕುಮಾರಸ್ವಾಮಿಯುಂ ೧೦
ಮಹಾಕಾಳಕ್ಕೆ ಪೋಪನೆಲ್ಲಾ ಕಾಲಮುಂ ಮಣಿಕುಟ್ಟಿಮಭೂಮಿಗಳೊಳ್
ವಾಸಿದ ನೇತ್ರಗಳಿಂ ಪಬಿಯ ಮೇಗೆ ನಡೆಗಿದಗಿ ಮೃದು ಲಲಿತಮಪ್ಪ ಚರಣ ದ್ವಯ
ದೊಳ್ ಮುನ್ನೆಂದುಂ ನೆಲನಂ ಗಿಗಿಕಿಗಿಟ್ಟಿಯಱಿಯದೊಂ ಕಠಿನಭೂಮಿಯೊಳ್
ನಡೆದೊಡೆ ಕೆಜ್ಜೆಗಳಿಗಳ್ಗಳುಂಗಳ ಪೆಟ್ಟಿಗಳುಗಿಮಗುಬ್ಬುಗಿಂ ಪುಗುಳೊಡೆದು
ಗಿಪೊಅಮಟ್ಟುಗಿಂ ಕರಗದ ದಾರೆಯೊಲೆಡೆನಱಿಯದೆ ಗಿಮಹಾಕಾಳ ಶ್ಮಶಾನಂಬ
ರೆಗಮೊಕ್ಕ ನೆತ್ತರ ದಾರೆಯು ಗಂಡದಿಂಗಿದಂ ನರಿಗಳ್ಗಿಂಬಂದು ಕಂಗಿಡುಗಿ
ರಾಗಿಸಿ ಮಱಿಗಳ್ವೆರಸಡಿಯಿಂದಂ ತೊಟ್ಟಿರಡುಂ ಕಾಲ್ಗಳಂ ಮೊಬಕಾಲ್ವರೆಗಮೊಂ
ದು ದಿವಸಂ ತಿಂದತ್ತೆರಡನೆಯ ದಿವಸಂ ಮೊಲಕಾಲಿಂ ತೊಟ್ಟು ಕಟಿವರೆಗಂ ತಿಂದತ್ತು
ಮೂಱನೆಯ ದಿವಸಂ ಬಸಿಱಿಂ ಪೋಱಿದ್ದು ಕರುಳಂ ತೋಡಿ ತಿನೆ ಸೃಥಕ್ತ್ವವಿತರ್ಕ
ವೀಚಾರಮೆಂಬ ಪ್ರಥಮ ಶುಕ್ಲಧ್ಯಾನದೊಳ್ ಕೂಡಿಯುಪರಾಂತ ಗಿಗುಣಸ್ಥಾನ ೧೦
ದೊಳಿರ್ದು ರತ್ನತ್ರಯಮಂ ಸಾದಿಸಿ ಗಿನಸಯಸತ್ತಮ ದೇವನಾಗಿಂ ಪುಟ್ಟಿದೊಂ

ಮತ್ತಿತ್ತ ತಾಯುಂ ಪೆಂಡಿರುಂ* ಪರಿವಾರಿವಮುಮೆಲ್ಲಾದೆಸೆಗಳೊಳಂ ಪರಿ
ವರಿದು ಪೋಗಿರ್ಪ ಸುಕುಮಾರಸ್ವಾಮಿಯನೆರಡ್ವಿವಸಮಿರುಳುಂ ಪಗಲುಮಱಿ
ಸಿಯುಂ ಕಾಣದೆ ಮೂಱನೆಯ ದಿವಸದಂದು ಬೈಗಿನ ಪೊಬ್ಬುಜೊಳ್ ದೇವರ್ಕಳ್
ಬಂದು ಸುಕುಮಾರಸ್ವಾಮಿಯನಹೊ ಸೂರಾ ಯಹೊ ಮಹಾಪುರುಷ ಯಹೊ
ಧೈರ್ಯವಂತ ಅಹೊ ಸಂಸಾರಭೀರುವಿ ನಿನ್ನಂತುಪಸರ್ಗಮನಾರಪ್ಪೊಡಂ ಸೈರಿಸಿ
ರತ್ನತ್ರಯಮಂ ಸಾದಿಸಿಮೊರಿಲ್ಲಿಂದು ದೇವತೆಗಳ್ ಪೊಗಬ್ಬ ಕಳಕಳಧ್ವನಿಯು
ಮಂ ದೇವದುಂದುಭಿಯ ರವಮುಮಂ ಯಕ್ಷೋಭದ್ರೆಗಿಳ ನೋಡಿ ದೇವಸಂಘಾತ

---

೧. ರನೆ (ಫು, ಚ, ಛ, ಜ). ೨. (ಫು, ಚ, ಛ, ಜ) ಗಳಲ್ಲಿಲ್ಲ. ೩. ಕಬೀರ (ಫು, ಚ, ಛ, ಜ). ೪. (ಫು, ಚ, ಛ, ಜ) ಗಳಲ್ಲಿಲ್ಲ. ೫. ಸಾದಿಸುತ್ತಿಮಿ (ಜ). ೬. ಬರ್ಪ (ಫು, ಕ, ಖ, ಗ). ೭. ಯಂ (ಕ, ಖ, ಗ). ೮. +ನ (ಕ, ಖ, ಗ). ೯. +ಮುನ್ನ (ಕ, ಖ, ಗ). ೧೦. +ಕೆ (ಕ, ಗ). ೧೧. +ದ (ಫು, ಚ, ಛ, ಜ). ೧೨. ವಾತಂ (ಫು, ಚ, ಛ, ಜ). ೧೩. ಮೆ (ಕ, ಖ, ಗ). ೧೪. ಪರಲ್ಗಳುಂ (ಫು, ಚ, ಛ). ೧೫. ಮಳ್ದು (ಖ), ಮೊತ್ತೆ (ಫು, ಚ, ಛ, ಜ). ೧೬. (ಫು, ಚ, ಛ, ಜ) ಗಳಲ್ಲಿಲ್ಲ. ೧೭. +ಪೋಪೋಗ್ಮೆ (ಫು, ಚ, ಛ, ಜ). ೧೮. (ಜ)ದಲ್ಲಿಲ್ಲ. ೧೯. ಡಾದಮಾನುಂ (ಫು, ಚ, ಛ, ಜ). ೨೦. + ಕಷಾಯು (ಫು, ಚ, ಛ, ಜ). ೨೧. (ಫು, ಚ, ಛ, ಜ) ಗಳಲ್ಲಿಲ್ಲ. ೨೨. ಮುಂನೆರೆದು 'ಎಲ್ಲಾಯೆಡೆಗೆ ಪೋಗಿ (ಫು, ಚ, ಛ, ಜ). *ಇಲ್ಲಿಂದಮುಂದಕ್ಕೆ (ಜ) ಪ್ರತಿಯನ್ನು ಉಪಯೋಗಿಸಿಲ್ಲ. ೨೩. +ಅಹೊ ಎಕ್ಕಲ ವೀರಾ (ಫು, ಚ, ಛ). ೨೪. + ಕೇಳ್ದೆಚ್ಚತ್ತು ನೋಡಿ (ಫು, ಚ, ಛ).

ಮಂ ಕಂಡು ಮಗನ ಸಾವನಱಿದು ಬಯ್ಗುರುಳಾದಾಗಳ್ ಮೂವತ್ತಿರ್ವರ್ ಸೊಸೆ
ವಿರ್ಕಳ್ಗಂ ಪೇೞ್ದಿಟ್ಟಂ ಸುಕುಮಾರಸ್ವಾಮಿ ನಿಮಗೆಲ್ಲರ್ಗೆ ಮುಳಿದು ಪೋಗಿ
ಯಡಂಗಿರ್ದೊನನಾನಿಜಮೆಂ ನೀವೆಲ್ಲಂ ನೆಜಯೆ ತೊಟ್ಟುಟ್ಟು ಪಸದನಂ
ಗೊಂಡು ಚೆಲ್ವೆಯರಾಗಿ ಬನ್ನಿಂ ನಿಮ್ಮೋಷಧಂ ತಿಳಿಪಿಕೊಂಡು ಬಳಿರ್ಪಂ ನಿಮ್ಮ
ಸ್ವಾಮಿಯನೆಂದೊಡವರ್ಗಳನಿಬರುಂ ರಾಗಿಸಿ ಕೈಗೆಯ್ದತ್ತಿಯೊಡನೆ ಪರಿವಾರಸಹಿತಂ
ಮಹಾಕಾಳಕ್ಕೆ ಪೋಗಿ ನೋೞ್ಪಿರನ್ನೆಗಂ *ನವೇರು ಮುಂದಾರ ಸಂತಾನಕ
ಪಾರಿಯಾತ್ರಸೆಂಬ ದೇವಕರ್ದಳ್ ಸುರಿಪ ಪುಷ್ಪವೃಷ್ಟಿಯಿಂದಂ ಮುಚ್ಚಿಪಟ್ಟನಾಗಿ
ಕಂಪಿಂಗೆಜಿಗಿದ ತುಂಬಿಯ ಸಮೂಹಮುಂ ಮೇಗೆ ಸುಬಿವುದಂ ಕಂಡಿಲ್ಲಿರ್ದ್ದನೆಂದು
೧೧ ಯಶೋಭದ್ರೆ ತೋೞ್ದೊಡೆ ಪೋಗಿ ತೆಱೆದು ನೋೞ್ಪಿರನ್ನೆಗಂ* ಮೃತಕಮುಂ
ಕಂಡನಿಬರುಂ ಮೂರ್ಛೆವೋಗಿ ನೀಡಱಿಂದೆಬ್ಬಿತ್ತು ತಮ್ಮ ಬಸಿಱುಮುಂ ತಲೆ
ಯುಮುಂ ಕಬಡಿದು ಕೊಂಡು ಸುಕುಮಾರಸ್ವಾಮಿಯ ರೂಪಮುಂ ತೇಜಮುಮುಂ
ಯೌವನಮುಂ, ಲಾವಣ್ಯಮುಂ, ಸೌಭಾಗ್ಯಮುಂ, ಯಶಮುಂ, ಮೆಲ್ಪುಂ, ನುಡಿಯ
ಬಲ್ಮೆಯುಂ, ಶುಚಿತ್ವಮುಂ, ಶೌಚಮುಂ, ಶ್ರೀಯುಂ, ಸಂಪತ್ತುಂ, ಸೊಬಗುಂ, ಒಲ್ಮೆಯುಂ
ಧೈರ್ಯಮುಂ, ಎಂದಿವು ಮೊದಲಾಗೊಡೆಯವಾನೊಳ್ ನೆಲಸಿರ್ದ ಗುಣಂಗಳಂ
ನೆನೆನೆನೆದನಿಬರುಂ ಪ್ರಲಾಪಂಗೆಯ್ಯುತ್ತುಂ, ಸೈರಿಸಲಾಱದೆ ನಿರಂತರಂ ಮೂರ್ಛೆ
ವೋಗುತ್ತುಂ ನೀಡುಂ ಬೇಗಂ ಮುಖಂಗೆಯ್ದಿಟ್ಟು ನೀರಿಱಿದೆಬ್ಬರ್ ಬಸಿಱಂ
ಪೆರ್ಂಡಿರುಟಿಯೆ ಇರ್ಪತ್ತುನಾಲ್ವರ್ ಪೆಂಡಿರುಂ ಮತ್ತುಂ ಪೆಱರ್ ನಂಟರ್ಕಳುಂ
ಪರಿವಾರಮುಂ ಯಶೋಭದ್ರೆಯೊಡನೆ ದಯಾಭದ್ರರ್ ಗುರುಗಳಾಗೆ ಕಮಳಶ್ರೀ
೨೦ ಕಂತಿಯರ್ ಕಂತಿಯುಂ ಆಗೆ ತಪಂಬಟ್ಟರ್ಗ್ರೋಗ್ರ ತಪಂಗೆಯ್ದು ನಿಬರುಂ ಸೌಧರ್ಮ
ಕಲ್ಪಂ ಮೊದಲಾಗೊಡೆಯ ಕಲ್ಪಂಗಳೊಳ್ ಪುಟ್ಟಿದರ್

ಮತ್ತಿಂತಪ್ಪುದಂ ಚಿಂತಿಸಲುಂ ಸೈರಿಸಲುಮಾಗದ ತೀವ್ರಕೋಪಸಗರ್ಗಮನ
ವಂತಿ ಸುಕುಮಾರಸ್ವಾಮ್ಮಿ ಮೂಱುದಿವಸಮಿರುಳುಂ ಪಗಲುಂ ಸೈರಿಸಿ ರತ್ನತ್ರಯ
ಮನೆಂತು ಸಾದಿಸಿದನಂತೆ ಸಂನ್ಯಸನಂಗೆಯ್ದಿರ್ದಾರಾಧಕರಪ್ಪ ಮಹಾಪುರು
ಷರುಮವಂತಿ ಸುಕುಮಾರಸ್ವಾಮಿಯ ಪರಮಸುಬಿಯಪ್ಪುಪಸರ್ಗಮಂ ವಿಜಯ
ವಿಧಾನಮಂ ಮನದೊಳನವರತಂ ಚಿಂತಿಸುತ್ತಾಪ್ತಾಗಮ ಪದಾರ್ಥರ್ಧಿಗಳೊಳ
ತೀವ ಸ್ಥಿರರಾಗಿ ಪರಮ ಸಹಜ ನಿಜರತ್ನತ್ರಯದೊಳ್ ಕೂಡಿ ಅಭೇದವಾಗೆಯ್ದೆ
ಕೂಡಿ ಶರೀರಂ ಮೊದಲಾಗೊಡೆಯ ಸಮಸ್ತ ಬಾಹ್ಯಾಭ್ಯಂತರ ಪರಿಗ್ರಹಂಗಳಂ
ನೆಜೆ ತೊಱೆದು ಅಕ್ಷಾವಾರ್ಪವರ್ಗ ಸುಖಂಗಳನೆಯ್ದುಗೆಂ ೧೨

೩೦ ಮತ್ತುಜ್ಜೈನಿಯ ತೆಂಕಣದೆಸೆಯೊಳವಂತಿ ಸುಕುಮಾರ ಸ್ವಾಮಿಯ ಕಾಲಂ

---

೧. +ದಳ್ (ಘ,ಚ,ಛ). ೨. ರ್ದುದನಾ (ಕ). ೩. ಬಾಪೋ (ಖ), ಕೋ (ಗ). ೪. ರ್ಪ
ಮಿಂತು (ಕ, ಗ). ೫. +ರ (ಕ, ಗ). * – * (ಘ, ಚ, ಛ) ಗಳಲ್ಲಿಲ್ಲ. ೬. ಪಿ, (ಖ). ೭. +ವಿ
(ಘ,ಚ,ಛ). ೮. ರ್ಪೆಂ (ಘ,ಚ,ಛ). ೯. ೦ (ಘ,ಚ,ಛ). ೧೦. ಳ್ವಾ (ಕ,ಖ,ಗ). ೧೧. ತ್ತಂ
ಪಂಚನಮಸ್ಕಾರಮನುಚ್ಚರಿಸುತ್ತಂ ದೇವರಂ ಧ್ಯಾನಿಸುತ್ತುಂ ಮುಡಿಪಿ ರತ್ನತ್ರಯಮುಂ ಸಾದಿಸಿಯಭ್ಯು
ದಯ ಸುಖಂಗಳನೆಯ್ದಿ ಕರ್ಮಕ್ಷಯಂಗೆಯ್ದು ಮೋಕ್ಷಮಂ ಸಾದಿಸುಗೆ (ಘ,ಚ,ಛ).

ಗೆಯ್ದಿಡೆ ಈಗಳುಂ ಪುಣ್ಯಮುಂ ಪವಿತ್ರಮುವಾದುದು ಮತ್ತಂ[೧] ಮಹಾಪುರುಷನ ಶರೀರಮಂ ಚತುರ್ನಿಕಾಯಾಮರ ತತಿಗಳ್ ಭಕ್ತಿಯಿಂದಗರು ಕಾಳಾಗರು ಗೋ ಶೀರ್ಷ ಚಂದನಂ ಮೊದಲಾಗೊಡೆಯ ಅನೇಕ ಸುಗಂಧ ದ್ರವ್ಯಂಗಳಿಂ ಪೂಜಿಸಿದ ವಸ್ತುಗಳ್ ಕಾಲಾಂತರದಿಂ ಕರಗಿ ಬಿಟ್ಟುದಾ ಸ್ಥಾನಕ್ಕಂ[೧] ಗಂಧವತಿಯೆಂಬ ತೊಜೆ[೨]ಯಾದುದು ದೇವರ್ಕಳ್ ಪೊಗಟ್ಟ ಕಳಕಳಧ್ವನಿಯಿಂ ಪೆಂಡಿರ್ಕಳ ಪ್ರಳಾಪಂ ಗೆಯ್ದಬ್ಬಿ ಕಳಕಳಧ್ವನಿಯಿಂದಂ ಕಳಕಳಾಯಿತಮೆಂದು[೩] ಸಿದ್ಧಾಯ[೪]ತನಾ ಮಾದುದು ।

---

೧. ಗಂಧೋದಕಂ ಬಿಳ್ದುದಱಿಂದಂ (ಘ. ಚ, ಛ). ೨. ಮೊಂಬುದು (ಘ, ಚ, ಛ). ೩. (ಕ,ಖ) ಗಗಳಲ್ಲಿಲ್ಲ.

(೨) ಸುಕೌಶಳ ಸ್ವಾಮಿಯ ಕಥೆ

ಸುಕೌಶಳ ಸ್ವಾಮಿಯ ಕಥೆಯಂ ಪೇಟ್ಪೆಂ :

ಗಾಹೆ॥ ಮೊಗ್ಗಳ ಗಿರಿ ೧ಮ್ಹಿ೧ ಯ ಸುಕೌಸಳೋ ವಿ ಸಿದ್ದತ್ಥ ದಯಿದಗೋ ಭಗವಂ ।
ವಗ್ಗೀಯೆ ೩ಯಿದಂ ಪದಿದೋ ಪಡಿವಣ್ಣೋ ಉತ್ತಮಂ ಅಟ್ಠಂ ॥

[ಮೊಗ್ಗಳ ಗಿರಿಮ್ಹಿಯ–೨ಮೊಗ್ಗಳಮೆಂಬ೨ ಪರ್ವತದೊಳ್, ಸುಕೌಸಳೋಪಿ–ಸುಕೌಸಳಸ್ವಾಮಿಯುಂ, ಸಿದ್ದತ್ಥದಯಿದಗೋ – ಸಿದ್ಧಾರ್ಥನೆಂಬ ಪರದನ ೩ಕಾದಲಿಸೆ೩ಪಡುವ ಮಗಂ, ಭಗವಂ – ಪೆರ್ಮೆಯನೊಡೆಯೊಂ, ವಗ್ಗೀಯೆ ೪ಯಿದಂ ಪದಿದೋ – ಮುನ್ನಿನ ಭವದ ತಾಯಪ್ಪ ಪೆಣ್ಬುಲಿಯಿಂದಂ ತಿನೆಳ್ಬ[ರ್ದಿ]ದೊಳ್ ನಾಗಿಯುಂ, ಪಡಿವಣ್ಣೊ–ಪೊರ್ದಿದೊಂ, ಉತ್ತಮಂ ಅಟ್ಠಂ–ಮಿಕ್ಕ ದರ್ಶನ ಜ್ಞಾನ ಚಾರಿತ್ರಾರಾಧನೆಯಂ.] ೧೦

ಅದೆಂತೆಂದೊಡೆ :

ಈ ಜಂಬೂದ್ವೀಪದ ದಕ್ಷಿಣ ಭರತಕ್ಷೇತ್ರದೊ೫ಳಂಗಮೆಂ೫ಬುದು ನಾಡಲ್ಲಿ ಚಂಪಾನಗರಮೆಂಬುದು ಪೊಟಿಲದನಾಳ್ವೊಂ ಗಂಧಭಾಜನನೆಂಬರಸನಿಂದ್ರ ನೊಳೋರಂತಪ್ಪ ಭೋಗೈಶ್ವರ್ಯವಿಭವಮನೊಡೆಯೊಂ ೬ನ್ಯಾ೬ಯದಿಂದಂ ಪ್ರಜೆಗಳಂ ೭ಪ್ರತಿಪಾಳಿಸುವೊ೭ ೮ನಧಿ೮ಗಮ ಸಮ್ಯಕ್ ದೃಷ್ಟಿಯಪ್ಪನೇಟು ಗುಣಗಳಿಂದಂ ಕೂರ್ಪಿ೯ದೊ೯ನಾ ಯೇಟುಂಗುಣಂಗಳೆಂಬುವಾವುವೆಂದೊಡೆ

ಗಾಹೆ : ಸಮ್ಮದ್ದಸ್ಸಣಸುದ್ಧೋ ಕದವಸ್ಸ ಕಮ್ಮೋ ಸುಸೀಲಗುಣಜಿಳಯೊ
೧೦ಉಜುಗತ್ತೋ ಗುರುಭತ್ತೋ ಪವಯಣ ಕುಸಳೋ ಮಡಿಪ್ಪಗಬ್ಭೋಯ ॥

ಎಂದೇಟುಂ ಗುಣಂಗಳಿಂದಂ ಕೂಡಿದೊನಂತಪ್ಪರಸಂ ಶರತ್ಕಾಲದ ಮುಗಿಲೊಳೋ ೩೦
ರಂತಪ್ಪುದನಾದಮಾನುಂ ವಿಚಿತ್ರಮಪ್ಪುದಂ ಸಹಸ್ರಕೂಟಮೆಂಬ ಜಿನಾಲಯಮುಂ ಮಾಡಿಸಿ ಅದಕ್ಕರ್ಹನವರತಂ ಮಹಾ ಪೂಜೆಯುಮುಂ ಮು೧೧ಹಿಮೆ೧೧ಯುಮಭಿಷೇಕಂಗ ೧೨ಳುಮಂ೧೨ ಸಲಿಸುತಿರ್ಪೊಂ ಮತ್ತಾ ಪೊಟಿಲೊಳೊರ್ವಂ ಸಾಗರದತ್ತನೆಂಬೊಂ ಸೆಟ್ಟಿಯಾತನ ಭಾರ್ಯೆ ಸುಭದ್ರೆಯೆಂಬೊಳಾಯಿರ್ವರ್ಗರ್ಂ ಮಗಳ್ ೧೩ಸು೧೩ರೂಪೆಯೆಂಬೊಳ್ ಮತ್ತಾ ಪೊಟಿಲೊಳ್ ಪೆಜನೊರ್ವಂ ಸೆಟ್ಟಿ ನಾಗದತ್ತನೆಂಬೊನಾತಂಗೆ ೧೩ಸು೧೩ರೂಪೆಯಂ ಕೊಟ್ಟೊಡಾಯಿರ್ವರ್ಗರ್ಂ ಸುಕೇ೧೪ಶಿನಿಯೆಂ೧೪ಬ

---

೧. ಮಿ (ಖ). ೨. ಮುದ್ಗರ ಗಿರಿಯೆಂಬ ಪರ್ವತದೊಳ್ (ಗ, ಘ, ಚ, ಛ). ೩. ಕಾಲದಲಿಸೆ (ಸ-ಛ). ೪. ಬಳ್ದಿ (ಖ, ಗ) ಪಡುತಿರ್ದೊನಾಗಿಯುಂ (ಘ, ಚ, ಛ), ಬಳ್ದಿದ (ಕ). ೫. ಳ್ ಗಂಗೆಯೆಂ (ಕ, ಖ, ಗ). ೬. ನ (ಕ). ೭. (ಕ)ದಲ್ಲಿ ನಷ್ಟವಾಗಿದೆ. ೮. ನಿದಿಗವಾಗಮ (ಕ), ...ವಾ (ಖ). ೯. ದ (ಕ). ೧೦. ವಜುಗೆಂತೋ (ಖ, ಗ), ವಜುಗುಲತೋ (ಘ), ಉಜುಗುಲತೋ (ಚ, ಛ). ೧೧. ಯ್ಮೆ (ಕ). ೧೨. ಳ್ಮಂ (ಕ, ಖ, ಗ). ೧೩. ಸ್ವ (ಕ, ಗ). ೧೪. ಶಿಯೆಂ (ಕ).

ಮಗಳಾದಳಾಕೆ ೧ಬಗೆಳೆದತ್ಯಂತ ರೂಪ ಲಾವಣ್ಯ ಸೌಭಾಗ್ಯ ಕಾಂತಿ ಹಾವಭಾವ
ವಿಲಾಸವಿಭ್ರಮಂಗಳನೊಡೆಯೊಳ್ ಪಲವುಂ ತೆಱದ ಶುಭಲಕ್ಷಣಂಗಳಿಂದಂ ಕೂಡಿದ
ಮೆಯ್ಯನೊಡೆಯೊಳ್ ನವಯೌವನೆ ದೇವಗಣಿಕೆಯನೆ ಪೋಲ್ವಳೊಂದು ದಿವಸಂ
ಅಷ್ಟಮಿಯಂ ನೋಂತು೨ ದೇವರನರ್ಚಿಸಲೆಂದು ಸಹಸ್ರಕೂಟ ಚೈತ್ಯಾಲಯ
ಕ್ಕರ್ಚನೆಯಂ ಕೊಂಡು ಪೋದಳನ್ನೆಗಮರಸನು೩ಮಾಗಳೆ ದೇವರಂ ಬಂದಿಸಲ್
ಬಂದೊಡರಸಂಗೆ ನಾಣ್ಚಿ ಬಸದಿಯೊಳಗಣ ಕಂಬದ ಮಱೆಯೊಳ್ ಕೇರಂ ಸಾರ್ದು
ಪೊನ್ನ ಬೆಳಗುವ ಗಳಂತಿಗೆಯನಾದಮಾನುಮೊಪ್ಪುತ್ತಿರ್ದುದಂ ಪಿಡಿದು ನಿಂದಿ
ರ್ದೊಳನರಸಂ೩ ಕಂಡಿಲ್ಲಿಯ ಚಿತ್ರದ ಲಿಪ್ಪದ ೪ಕಾಷ್ಠಕರ್ಮದಳ ರೂಪುಗಳೊಳಿಲ್ಲ
೫ಮಿಾ ಸ್ತ್ರೀಯ ಜೀವಂ೬ವಿದ್ದಂ೬ಮಿಂತುಟತಿಶಯ೭ಮೆಂದರಸನಾಕೆಯ ರೂಪಿಂ
೧೦ ಗಚ್ಚರಿವಟ್ಟು೭ ಪೊಗಟೆ ಕೆಲದೊಳಿರ್ದ ಕಶ್ಚಿದ್ದೇವದತ್ತನೀಕೆ ಕನ್ನೆ೮ಯಿರ್ದೊ೮
ಳೆಂದು ಪೇೞ್ದೊಡಾರ ಮಗಳೆಂದು ಬೆಸಗೊಂಡೊಡೀ ಪೊಟಲ್ಗೆ ಪ್ರಧಾನಂ ನಾಗದತ್ತ
ಸೆಟ್ಟಿಯ ಮಗಳೆಂದು ಪೇೞ್ದೊಡರಸಂ ಕೇೞ್ದು ಕೆಮ್ಮಗಿರ್ದು ದೇವಗೆ ನಮಸ್ಕಾರಂ
ಗೆಯ್ದು ೯ಋಷಿಯರಂ ಬಂದಿಸಿ ತನ್ನ ಮನೆಗೆ ಪೋದನ್

ಇತ್ತ ಸುಕೇಶಿನಿಯುಂ ದೇವರನರ್ಚಿಸಿ ಬಂದಿಸಿ ಗುರುಪರಿವಿಡಿಯಿಂದಂ ರಿಸಿಯ
ರಂ ಬಂದಿಸಿ ವ್ರತಂಗಳನೇೞ್ಪಿಸಿಕೊಂಡು ಸಿದ್ಧಸೇಸೆಯಂ ತಾಯ್ಗಂ ತಂದೆಗಂ ಪೋಗಿ
ಕೊಟ್ಟೊಡವರ್ಗಳುಂ೧೦ ತಲೆಯೊಳಿಟ್ಟುಕೊಂಡು ಯೌವನಂ ನೆಱೆದ ಕೂಸಿನ
ರೂಪಂ ನೋ೧೧ಡುತ್ತಿರ್ದಾ೧೧ರ್ಗೆ ಕುಡುವಮೆಂದು ತಮ್ಮೊಳ್ ನುಡಿಯುತ್ತಿರ್ಪಿನ
ಮರಸಂ ಕನ್ನೆಯ ರೂಪಂ ಕಂಡಾಟಿಸಿ ಕೂಸಿನ ತಾಯಪ್ಪ ಸುರೂಪೆಗೆ ಬಟ್ಟಿಯನಟ್ಟಿ
ಬರಿಸಿ ಕೂಸನಾರ್ಗೆ ಕೊಟ್ಪಪಿರೆಂದು ಬೆಸಗೊಂಡೊಡೆನ್ನ ತಮ್ಮಂ ವರಾಂಗನೆಂಬೊ
೨೦ ನಾತನ ಮಗಂ ಜಿತರಂಗನೆಂಬೊನೆನ್ನ ಸೋದರದಳಿಯನಾತಂಗೆ ಕೊಟ್ಟಪೆನೆಂ೧೨ದು
ಪೇೞ್ದೊ೧೨ಡರಸಂ ಮಧುಸೇನಂ ಮಧುಸೂದನರೆಂಬಿರ್ವರ್ ಪ್ರಧಾನವೆರ್ಗಡೆಗಳಂ
ನಾಗದತ್ತ ಸೆಟ್ಟಿಯಲ್ಲಿಗೆ ಕೂಸಂ ಬೇ೧೩ಡಿಯ೧೩ಟ್ಟಿಯುತ್ತವಳನಾಗಿಯವರ ಬಟ್ಟಿ
ಯನೆ ತಾನುಂ ನಾಗದತ್ತನ ಮನೆಗೆ ಪೋಗಿ ಕೂಸಂ ಬೇಡಿ ಪೆತ್ತಂ ನಾಗದತ್ತನುಮ
ಷ್ಟಾಹ್ನಿಕ ಮಹಾಮಹಿಮೆಯನೆಂಟು ದಿವಸಂ ಮಾಡಿ ಪ್ರಶಸ್ತ ೧೪ದಿನ೧೪ವಾರ
ನಕ್ಷತ್ರ ಮುಹೂರ್ತ ಹೋರಾಲಗ್ನದೊಳ್ ಕೂಸಿನನುಕೂಲದೊಳ್ ಪಾಣಿಗ್ರಹಣ
ಪುರಸ್ಸರಂ ಸುಕೇಶಿನಿಯಂ ಗಂಧಭಾಜನನೆಂಬರಸಂಗೆ ಕೊಟ್ಟನಿಂತು ಮಹಾ
ವಿಭೂತಿಯಿಂದಂ ಮದುವೆ ನಿಂದು ಗಂಧಭಾಜನ ನೃಪತಿಯುಂ ಸುಕೇಶಿನಿಯೊಳಿಷ್ಟ
ವಿಷಯಕಾಮಭೋಗಂಗಳಂ ಪಲಕಾಲಮನುಭವಿಸುತ್ತಿರೆ

---

೧. ಬೆ (ಕ). ೨. ಯ ನೋಂಪಿಗೆ (ಕ). ೩. (ಕ, ಖ, ಗ)ಗಳಲ್ಲಿ ಈ ಭಾಗ ಇಲ್ಲ.
೩೦ ೪. ಕಲ್ಲುಮರದಲ್ಲಾಡಿದ (ಕ, ಗ). ೫. +ಮಿಲ್ಲ (ಕ). ೬. ರೂಪಿದು (ಕ, ಖ, ಗ). ೭. ಮುಪ್ಪ
ರೂಪೆಲ್ಲಿಯುಮಿಲ್ಲೆಂದರಸಂ (ಖ). ೮. ವುಳ್ಳೊ (ಕ). ೯. +ಪೊಡೆವಟ್ಟು (ಖ). ೧೦. +ತಮಗಿತ್ತ
ಸೇಸೆಯಂ (ಘ, ಚ, ಛ). ೧೧. ಡಿತ್ತಿರ್ದೊಂ ತಾನಾ (ಕ, ಖ, ಗ). ೧೨. ದೊ (ಕ). ೧೩. ಡಲ (ಕ).
೧೪. ದಿವಸ (ಖ).

ಮತ್ತೊಂದು ದಿವಸಂ [೧]ಕೌಶಲಾಧಿಪತಿಯಪ್ಪತಿಬಳನೆಂಬರಸಂಗಂ ಕಳಿಂ
ಗಾಧಿಪತಿಯಪ್ಪ ಕಳಿಂಗನೆಂಬರಸಂಗಂ ತಮ್ಮೊಳ್ ವಿಗ್ರಹಮಾದೊಡೆ ಗಂಧಭಾಜನ
ನೃಪತಿ ತನ್ನ ಮತಿಶ್ರುತಿನೆಂಬ ಮಂತ್ರಿಯನಟ್ಟಿ ಇರ್ವ್ವರ್ಗ್ಗಂ ಸಂದಿಮಾಡಿದೊಡೆ
ಕಳಿಂಗನೆಂಬರಸಂ ಮಧುಸೂದನನೆಂಬ ಪೆರ್ಗ್ಗಡೆಯ ಕೆಯ್ಯೊಳ್ ಮದಾಂಧ [೨]ಗಂಧ
ಹಸ್ತಿಯಂ[೩] ಗಂಧಭಾಜನನೃಪತಿಗೆ ಪಾಗುಡಮಟ್ಟಿದೊಡದಂ ಸೊಕ್ಕಿನಿಂದಂ
ಮಸಗಿದುದಂ ಗಂಧಹಸ್ತಿಯಂ ಸುಕೇಶಿನಿ ಕಂಡು ಜಾತಿಸ್ಮರೆಯಾಗಿ ಮೂರ್ಛೆ
ವೋಗಿದ್ದೊಳಂ ದಾದಿ ಮೊದಲಾಗಿ ಕೆಲದೊಳಿದ್ದೊರೆಲ್ಲಂ ಚಂದನದ [೪]ನೀರ್ಗಳಂ[೪]
ತಳಿದು ಬೀಸೆ ನೀಡಱಿಂದೆಚ್ಚೆತ್ತಳನ್ನೆಗಮರಸನುತ್ತವಳನಾಗಿ ಪರಿತಂದಿದೇನೀ
ಕೆಗೇಕಿಂತಾಯ್ತೆಂದು ಬೆಸಗೊಳೆ ದಾದಿಯೆಂದಳ್ ಸೊಕ್ಕಾನೆಯಂ ಕಂಡು
ಮೂರ್ಛೆವೋದಳೆಂದು ಪೇಟ್ಟೊಡಾ ಮಾತನರಸಂ ಕೇಳ್ದು [೫]ಮಱುಸೂಟಿನಾನೆಯಂ[೫] ೧೦
ಕಂಡಂಜದಂ[೬]ತಿರೆ[೬] ಸುಕೇಶಿನಿಯ ಮಾಡದ ಕೇಗ್ಗಳೆಲ್ಲಾಯೆಡೆಗಳೊಳಂ ವ್ಯಾಳಂ
ಗಳಪ್ಪಾನೆಗಳಂ ತನ್ನ ಚಿತ್ತಾರಿಗರಿಂದಂ ಬರೆಯಿಸಿದಂ ನುತ್ತೆ ಸುಕೇಶಿನಿಯುಂ
ತನ್ನ ಮುನ್ನಿನ ಜನ್ಮದೊಳ್ ನೆಗಟ್ಟುದೆಲ್ಲಮಂ ಪಟದೊಳ್ ತಾನೆ ಬರೆದಾರು
ಮಱಿಯದಂತಿರೇಕಾಂತದೊಳ್ ನೋಡುತ್ತಿರ್ಕ್ಕುಮಿಂತು ಕಾಲಂ ಸಲೆ

ಮತ್ತೊಂದು ದಿವಸಂ ಮುನ್ನಿನ ಗಂಧಹಸ್ತಿಯೊಡನೆ [೭]ಬಾರಿ[೭]ಯೊಳ್
ಮೂವತ್ತೆರಡು ಗಜಕ್ರೀಡೆಗಳಿಂದಂ ನೀಡುಂ ಬೇಗಂ ಕ್ರೀಡಿಸಿಯಾನೆಯಂ ಸೇದೆ
ಗೆಡಿಸಿ ತನ್ನ ಬಸಕ್ಕೆ ಮಾಡಿಯೇಱಿಯಂಕುಸಮಂ ಪೊಳೆಯಿಸುತ್ತಮರಸಿಯಲ್ಲಿಗೆ
[೮]ವರ್ಂದು ನಿಂದಿಂತಕ್ಕುಮೆ [೯]ಂಮ[೯]ಚ್ಚಿದಾ ಎಂದು ತನ್ನ ಸಾಹಸಮಂ ಪೇಟ್ಟು
ಮೆಱೆಯೆ ಸುಕೇಶಿನಿಯೆಂ[೧೦]ದೊ[೧೦]ಳಿದೇ[೧೧]ನೆಂಬಾನೆ[೧೧] ತಗರೊಳೋರಂತಪ್ಪುದು
ಚಂದನಮಲಯಮೆಂಬ ಪಿರಿಯ ಪರ್ವತದೊಳ್ ಇಂದ್ರನೀಲ ಮಾಣಿಕದೊಳೋ ೨೦
ರಂತಪ್ಪ ಬಣ್ಣಮನೊಡೆಯದು ಮಲಯಸುಂದರನೆಂಬಾನೆಯುಂಟು ಹಸ್ತಿ
ಯೂಥಕ್ಕೆಱೆಯನಪ್ಪುದು ಎಲ್ಲಾ ಕಾಲಮುಂ ಮದದಿಂದಂ ಪೆರ್ಚುತ್ತಿರ್ದುದು
ಕೆಂದಾವರೆಯ ವಣ್ಣದೊಳೋರಂತಪ್ಪ ಬಣ್ಣಮನೊಡೆಯ ಪದ್ಮಾವತಿಯೆಂಬ ಪಿಡಿ
[೧೩]ಯೊಡನೆ[೧೩] ಕ್ರೀಡಿಸುತ್ತಿರ್ಪ್ಪಾನೆಯಂ ನಿನ್ನ ವಸಕ್ಕೆ ಮಾಡಿ ಪಿಡಿದೇಱಿಕೊಂಡು
ವಂದೊಡೆ ನಿನ್ನ ಗಜ[೧೪]ಪ್ರಿಯತೆಯುಮೇಱಿಯಾಡಲ್[೧೪] ಬಲ್ಮೆಯುಂ ಕಲಿ
ತನಮುಂ ಸಾಹಸಮುಂ ಗಂಡಗುಣಮುಮನಱಿಯಲಕ್ಕುಮಾ ಯಾನೆಯಂ
ತಂದಂದು ಗಂಡರ್ ನಿನ್ನನ್ನರೀ ಭುವನದೊಳಾರುಮಿಲ್ಲೆಂದೊಸೆದು ಮಚ್ಚಿ ಪೊಗಟ್ಪೆ
ನೆಂದೊಡರಸ[೧೫]ನಿಂ[೧೫]ತೆಂದಂ ನೀನಪ್ಪೊಡಿಲ್ಲಿ ಪುಟ್ಟದೆ ಆಯಾನೆಯನೆಲ್ಲಿ
ಕಂ[೧೬]ಡೆಯೆಂ[೧೬]ತಱಿವೆಯೆಂದು ಬೆಸಗೊಳೆ ಸುಕೇಶಿನಿಯಿಂತೆಂದಳ್

---

೧. ಕಂಸ (ಕ). ೨. ವರ (ಘ, ಚ, ಛ). ೩. ಸಿಂಧುರಮಂ (ಘ, ಚ, ಛ). ೪. ಹಿಮಸಲಿ ೩೦
ಲಂಗಳಂ (ಘ, ಚ, ಛ). ೫. ರ್ಕ್ಕಿದಾ (ಕ). ೬. ಮಧುಸೂದನನಾನೆಯಂ (ಘ, ಚ, ಛ).
೭. ತೆ (ಘ, ಚ). ೮. ಚಾಲಿ (ಕ), ಬಾಳಿ (ಖ), ಬಾಲಿ (ಗ), ಬಾವಿ (ಚ). ೯. ಬಂ (ಕ).
೧೦. ಮೆ (ಖ). ೧೧. ಬ (ಕ). ೧೨. ದೇತಱಾನೆ (ಚ). ೧೩. ಯನೆ (ಕ). ೧೪. ಬಂಧನೋ
ಪಾಯಕುಶಳಿಕೆಯುಮಱಿವಿನೊಂದು (ಘ, ಚ, ಛ), ಪ್ರಿತಿಯ ತಿರ್ಕೆಯೂ ಮೇಱಿಯಾಡಲ್
(ಕ, ಗ). ೧೫. ಗಿಂ (ಖ). ೧೬. + ಡಱಿಯೆಯೆಂ (ಕ).

ಆಂ ಮುನ್ನಿನ ಜನ್ಮದೊಳ್ ಮನೋವೇಗೆಯೆನೆಂಬ ವಿದ್ಯಾಧರಿ ಎನ್ನಂದಿನ
ಭರ್ತಾರಂ ಮಣಿ೧ಚೂ೧ಳನೆಂಬೊಂ ವಿದ್ಯಾಧರನಾತನೊಡನೆ ಭೌಮವಿಹಾರಾರ್ಥಂ
ತೊಟಿಲ್ವಲ್ಲಿ ಚಂದನಮಲಯಮೆಂಬ ಪರ್ವತದೊಳ್ ಕರಿಣೀವೃಂದಂ ಬೆರಸಾಡುವ
ಕರಿ೨ಪತಿ೨ಯನೈರಾವಣ ಸನ್ನಿಭಮಂ ಕಂಡೆನೆಂದುಕ್ಕೆವದಿಂದಂ ಪೇಟ್ಪೊಡಾ
ಮಾತನರಸಂ ಕೇಳ್ದು ಪೂರ್ವಜನ್ಮಾಂತರದೊಳ್ ಕಟ್ಟಿಪಟ್ಟ ಮುಳಿಸನೊಡೆಯೊಂ
ತನ್ನುಳ್ಳ ಸನುಸ್ತ ಬಲಂಬೆರಸು ಪೋಗಿ ಮಲಯಪರ್ವತಮೆಲ್ಲಮಂ ಬಳಸಿ ಸುತ್ತಿ
ಮುತ್ತಿದಾಗಳಿಂದ್ರನೀಲಮಾಣಿಕದ ತೇಜದೊಳೋರಂತಪ್ಪ ಮೆಯ್ಯನೊಡೆಯ ಗಜ
ಪತಿಯುಂ ಮುಗಿಲ ಧ್ವನಿಯ ಮೆಲ್ಲಂಭೀರಮಪ್ಪ ಗರ್ಜ್ಜನೆಯನೊಡೆಯದುಂ
ಬಂದು ಪಡೆಯೆಲ್ಲಮಂ ಹತವಿತತಕೋಳಾಹಳಮೆಬ್ಬಿದು ಕೊ೩ಲ್ವು೩ದನಾದ
೧೦ ಮಾನುಂ ಕಲಿಯಪ್ಪುದನರಸಂ ಕಂಡು ಪಿಡಿಯಲಾಱದಾನೆಯಂ ಕೊಂದೆರಡುಂ
ನಿಡಿಯ ತೋರಮಪ್ಪ ೪ಕೊಂಬುಗ[ಳುಮುಂ]೪ ಕುಂಭಸ್ಥಳದ ಮುತ್ತುಗ೫[ಳುಮುಂ]೫
ಕೊಂಡೊಸಗೆಯಿಂದಂ ಬೇಗಂ ಚಂಪಾಪುರಕ್ಕೆ ವಂದರಮನೆಯಂ ಪೊಕ್ಕರಸಿಯಂ
ಕಂಡು ನಿನ್ನ ನಚ್ಚುವ ಮಲಯಸುಂದರನ ಕೊಂಬುಗ೫[ಳುಮುಂ]೫ ಮುತ್ತುಗ
೫[ಳುಮುಂ]೫ ಕೊಳ್ಳಿಂದವಂ ಸುಕೇಶಿನಿಯ ಮುಂದೆ ತಂದಿಟ್ಟೊಡೆ ಸುಕೇಶಿನಿಯುಂ
ಹಾ ಮಲಯಸುಂದರಾ ಹಾ ಎನ್ನ ನಲ್ಲನೇ ಹಾ ಎನ್ನ ಮಲಯಸುಂದರನಪ್ಪ ಸ್ವಾಮಿ
ಯೆಂದು ಪ್ರಳಾಪಂಗೆಯ್ದು ಎರಡು ಕೊಂಬುಗಳುಮಂ ತಬ್ಬಿಕೈಸಿಯಾದಮಾನುಂ
ಬಿಗಿದಪ್ಪಿಕೊಂಡು ಸತ್ತಳ್ ಸುಕೇಶಿನಿ ಸತ್ತುದಕ್ಕರ್ಕರಸಂ ಮೊದಲಾಗಿ ಪರಿವಾರ
ಮೆಲ್ಲಂ ಬೆಱಗಾಗಿ ವಿಸ್ಮಯಂಬಟ್ಟು ದುಃಖಂಗೆಯ್ದರ್

ಕೆಲವು ದಿವಸದಿಂ ಯಶೋಧರರೆಂಬ ಕೇವಲಜ್ಞಾನಿಗಳ್ ವಿಹಾರಿಸುತ್ತಮಾ
೨೦ ಚಂಪಾನಗರಕ್ಕೆ ವಂದು ಪ್ರಮದೋದ್ಯಾನವನದೊಳಿರ್ದ್ದರೆಂಬ ಮಾತನರಸಂ ರಿಸಿ
ನಿವೇದಕನಿಂದಱಿದು ಸಪರಿವಾರಂ ಬೆರಸು ಬಂದರ್ಚಿಸಿ ಯಥೋಚಿತಸ್ಥಾನ
ದೊಳಿರ್ದಂ ಮತ್ತಂ ನಾಗದತ್ತ ಸೆಟ್ಟಿಯುಂ ಸುರೂಪೆಯುಂ ವರಾಂಗನುಂ ಪ್ರಿಯಂ
ಗುವುಂ ಮೊದಲಾಗೊಡೆಯ ಶ್ರಾವಕ ಜನಂಗಳ್ ಬಂದರ್ಚಿಸಿ ನಮಸ್ಕಾರಂಗೆಯ್ದರ್
೬ತಮ್ಮಡಿ೬ಗಳೊಳಿರ್ದು ಧರ್ಮಮಂ ಕೇಳ್ದು ತದನಂತರಮೆ ವೈರಾಗ್ಯಮಾಗಿ
ಸುಕೇಶಿನಿಯ ದುಃಖಮಂ ಸೈರಿಸಲಾಱದೆ ಸುಕೇಶಿನಿಯ ತಂದೆಯಪ್ಪ ನಾಗದತ್ತ
ಸೆಟ್ಟಿಯುಂ ತಾಯ್ ಸುರೂಪೆಯುಂ ಮಾವನಪ್ಪ ವರಾಂಗನುಂ ವರಾಂಗನ ಭಾರ್ಯೆ
ಯಪ್ಪ ಪ್ರಿಯಂಗುವುಮಂತು ನಾಲ್ವರುಮೆಟ್ಟಿಭಿಮುಖರಾಗಿ ದೀಕ್ಷಾಪ್ರಸಾದಂಗೆಯ್ಯಿಂ
ಭಟಾರಾ ಎಂದು ಬೇಡಿ ತಪಂಬಟ್ಟರ್ ಮತ್ತಂ ಸುಕೇಶಿನಿಯಾ ಮಲಯಸುಂದರ
ನೆಂಬಾನೆಯ ಕೊಂಬುಗಳನಪ್ಪಿ ಸತ್ತಳೆಂಬ ಮಾತಂ ವರಾಂಗನುಂ ಕೇಳ್ದು ಜನ್ಮಾನು
೩೦ ಬಂಧಿಯಪ್ಪ ಸ್ನೇಹಂ ಕಾರಣಮಾಗಿ ದುಃಖಮಂ ಸೈರಿಸಲಾಱದೆ ತಪಂಬಟ್ಟು
ನಿದಾನಸಹಿತಂ ತಪಂಗೆಯ್ದನಿತ್ತ ಗಂಧಭಾಜನ ನೃಪತಿ ಯಶೋಧರ ಕೇವಲಿಗಳ

---

೧. ಮಾ (ಛ). ೨. ಯಪಿರಿ (ಘ, ಚ, ಛ) ೩. ಳ್ವು (ಖ). ೪. ಕೋಡುಗಳ್ಮಂ (ಘ, ಚ, ಛ), ಕೊಂಬುಗಳ್ಮಂ (ಕ, ಖ, ಗ). ೫. ಳ್ಮಂ (ಸ). ೬. ತಂಮುಂದಿರಂ (ಕ), ತಂತಮ್ಮಿಡೆಯೊ (ಘ, ಚ, ಛ).

ನಿಂತೆಂದು ಬೆಸಗೊಂಡಂ ಭಟಾರಾ ಸುಕೇಶಿನಿ ಮಲಯಸುಂದರನೆಂಬಾನೆಯ ಕೊಂಬುಗಳನಪ್ಪಿಕೊಂಡು ಸತ್ತುದಕ್ಕೆ ಕಾರಣಮೇನೆಂದು ಬೆಸಗೊಂಡೊಡೆ ಕೇವಲ ಜ್ಞಾನಿಗಳಿಂತೆಂದು ಪೇಳ್ದರ್

ದಕ್ಷಿಣಾಪಥದೊಳ್ [೧]ದ್ರವಿಳ ವಿಷಯದೊಳ್[೧] ದಕ್ಷಿಣ ಮಧುರೆಯೆಂಬುದು ಪೊಟಿಲದನಾಳ್ವಂ [೨]ಸುಂದರ[೨]ಪಾಂಡ್ಯನೆಂಬೊನರಸನಾತನರಸಿಯಮೃತಮಹಾ ದೇವಿಯೆಂಬೊಳಂತವರ್ಗ್ಗಳಿಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತಿರೆ ಮತ್ತ ಮಾ ಪೊಟಿಲೊಳಾರ್ಯನಂದಿಯೆಂಬೊಂಸೆಟ್ಟಿಯಾತನ ಪರದಿಯ[೩]ವಿಧಿ[೩] ಯೆಂಬೊಳಾ ಇರ್ವರ್ಗ್ಗಂ ಸುಕೀರ್ತಿಯೆಂಬೊಳ್ ಮಗಳಾದಳ್ ಮತ್ತೊರ್ವನಾ ಪೊಟಿಲೊಳ್ ಸುದರ್ಶನನೆಂಬೊಂ ಪರದನಾತನ ಪರದಿ ವೀರಶ್ರೀಯೆಂಬೊಳಾ ಯಿರ್ವರ್ಗ್ಗಂ ಮಗಂ ಪ್ರಿಯದರ್ಶನನೆಂಬೊನಾತಂಗಾ ಸುಕೀರ್ತಿಯಂ ಕೊಟ್ಟರ್ ೧೦
ಸುಕೀರ್ತಿಯ ಕೆಳದಿ ಮಾಲೆಗಾರ್ತಿ ಪ್ರಿಯಸೇನೆಯೆಂಬೊಳಂತವರ್ಗ್ಗಳಿಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತಿರೆ ಮತ್ತೊಂದು ದಿವಸಂ ಸುಕೀರ್ತಿ ತನ್ನ ಭರ್ತಾರನನಿಂತೆಂದಳಡವಿಯೊಳಂ ಪರ್ವತಂಗಳೊಳಂ ಪುಳಿನಸ್ಥಳಂಗಳೊಳಮೆನಗೆ ಕ್ರೀಡಿಸಲಟ್ಟಿಯಾದುದೆನೆ ನಿನ್ನಟ್ಟಿಯಂ ನೆಱಪಲಕ್ಕುಮೆಂದು ಪ್ರಿಯದರ್ಶನನುಂ ಸುಕೀರ್ತಿಯುಂ ಪ್ರಿಯಸೇನೆಯುಮುಮಂತು ಮೂವರುಂ ಪರಿವಾರಸಹಿತಮಡವಿಗೆ ಪೋಗಿಯಲ್ಲಿ [೪]ಕಾನನ ವನ ಸರಿತ್ಸರೋವರ[೪] ಪ್ರದೇಶಂಗಳೊಳ್ ಪರಿಜನಂಬೆರಸು ತದೀಪ್ಸಿತ ಪ್ರದೇಶಂಗಳೊಳ್ ವಿಹಾರಿಸಿ [೫]ರಮ್ಯಮಪ್ಪ ಗಿರಿನದಿಯ ಪುಷ್ಪ ಪಲ್ಲವ ಲತಾ[೫]ಕೀರ್ಣಮಪ್ಪ ಪುಳಿನ ಸ್ಥಳಂಗಳೊಳ್ ಕ್ರೀಡಿಸುತ್ತಿರ್ಪನ್ನೆಗಂ ಹಸ್ತಿಯೂಥಂ ಬಪ್ಪುದಂ ಕಂಡಾಗಳೊಂದು ಮದಾಂಧಗಂಧಸಿಂಧುರಂ ಕರಿಣೀವೃಂದಂಗಳಿಂ
ಪರಿವೇಷ್ಟಿತನಾಗಿ ಕರಿಣೀಗಣಂಗಳಾ [೬]ಕಾಶಪುಷ್ಪಂಗಳಿಂ[೬] ಚಾಮರಮಿಕ್ಕೆ ಮೃದು ೨೦
ಪಲ್ಲವಂಗಳಂ ಕಬಳಂಗೊಳುತ್ತುಂ ಲೀಲೆಯಿಂ ಬಂದು ಸ್ವಚ್ಛ [೯]ವಿಚ್ಛಳಾಕಾರ[೯]ಮಪ್ಪ ಮಡುವಂ ಪೊಕ್ಕು ಮನೋಹಾರಿಗಳಪ್ಪ ಕರಿಣೀಗಣದೊಡನೆ ಕ್ರೀಡಿಸುವುದಂ ಮೂವರುಂ ಕಂಡು, ಹಸ್ತಿಭೋಗಂಗಳೊಳಪ್ಪ ಕಾಂಕ್ಷೆಯಿಂದಂ ನಿದಾನಂಗೆಯ್ದು ತಿರ್ಯಗಾಯುಷ್ಯಮಂ ಕಟ್ಟಿದರಿಂತು ಕಾಲಂ ಸಲೆ ಮತ್ತೊಂದು ದಿವಸಂ ಬಱಿಸಿಡಿಲ್ ಪೊಡೆದು ಪ್ರಿಯಸೇನೆ ಸತ್ತಳ್ ಪ್ರಿಯದರ್ಶನನೊಂದು ದಿವಸಂ ತನ್ನ ಭಾರ್ಯೆವೆರಸು ಕದಳೀವನದೊಳ್ [೯]ಮಱಲುಂದಿದಲ್ಲಿಗೆ[೯] ಕಾಳಿಂಗನಾಗಂ ಬಂದೊಡದಱ ಮೇಗೆ ಕಾಲಂ ನೀಡಿದೊಡೆ ಕಚ್ಚಿತ್ತಾತನುಮಾಗಳೆ ಪರವಶನಾಗಿ ಪ್ರಾಣಪರಿತ್ಯಾಗಂ ಗೆಯ್ದನಂ ಕಂಡು ಸುಕೀರ್ತಿಯುಂ ಕಾದಲನ ವಿಯೋಗಂ ಕಾರಣಮಾಗೆ ಪ್ರಾಣ ವಲ್ಲಭನ ಸುರಿಗೆಯಂ ಕೊಂಡು ತನ್ನಂ ತಾನಿಱಿದು[೧೦] ಸತ್ತಳ್

---

೧. (ಕ, ಖ, ಗ). ಪ್ರತಿಗಳಲ್ಲಿಲ್ಲ. ೨. ಗಂದರ (ಗ), ಗಾಂದಾರ (ಘ, ಚ) ಗಂದಾರ (ಛ) ೩೦
೩. ಯವಧಿ (ಕ). ೪ ವೀರಶ್ರೀ (ಛ). ೪. (ಕ)ದಲ್ಲಿ ಇಲ್ಲ. ೫. (ಕ)ದಲ್ಲಿ ನಷ್ಟವಾಗಿದೆ.
೬. (ಕ)ದಲ್ಲಿ ನಷ್ಟವಾಗಿದೆ. ೭. ಳ್ ಪೊಸಕುಸುಮಂಗಳಿಂ (ಘ, ಚ, ಛ). ೮. ವಿಚ್ಛಾಳಾಕ (ಖ), ಲಿಚ್ಛಾಳಾಕ (ಕ, ಗ). ೯. ಪಟ್ಟದ್ದಲ್ಲಿಗೆ (ಘ, ಚ, ಛ). ೧೦. +ಕೊಂಡು (ಕ).

ಅಂತಾ ಮೂವರುಂ ಸತ್ತು ತೆಂಕಣ ಪಡುವಣ ಸಮುದ್ರದ ತಡಿಯೊಳ್ ಚಂದನಮಲಯಮೆಂಬಾದಮಾನುಂ ರಮ್ಯಮಪ್ಪ ಪರ್ವತದೊಳ್ ಪ್ರಿಯದರ್ಶನ ನಿಂದ್ರನೀಲ ಮಾಣಿಕದೊಳ್ಕೋರಂತಪ್ಪ ಮೆಯ್ಯನೊಡೆಯದಾಗಿ ಸುಭದ್ರಜಾತಿ ಯಪ್ಪಾನೆಗೆ ಮಲಯಸುಂದರನೆಂಬಾನೆಯಾಗಿ ಪುಟ್ಟಿದೊಂ ಸುಕೀರ್ತಿಯುಂ ಧವಳವರ್ಣಮಪ್ಪ ಮಲಯಾವತಿಯೆಂಬ ಪಿಡಿಯಾಗಿ ಪುಟ್ಟಿದಳ್ ಪ್ರಿಯ ಸೇನೆಯುಂ ಕೆಂದಾವರೆಯ ವರ್ಣದೊಳ್ಕೋರಂತಪ್ಪ ಮೆಯ್ಯನೊಡೆಯ ಪದ್ಮಾವತಿ ಯೆಂಬ ಪಿಡಿಯಾಗಿ ಪುಟ್ಟಿದಳಾಯೆರಡುಂ ಪಿಡಿಗಳುಂ ಸುಭದ್ರಜಾತಿಯಪ್ಪಾನೆಗೆ ಪುಟ್ಟಿದವನ್ತಾ ಮೂಱುಕ್ಕ[೧]ಮಾರಣ್ಯ[೧]ನಿವಾಸಿಗಳಪ್ಪ ಜನಂಗಳುಂ ತಾಪಸಾದಿ ಗಳುಮವಂ ಕಂಡೊಗ್ಗಳಿಲ್ಲಮೊಸೆದು ಮೆಚ್ಚಿ ತದ್ದೇಹಾನುಸಾರಿಗಳಪ್ಪ ಪೆಸರ
೧೦ ನಿಟ್ಟುದಱಿಂದಾ ನಾಡೊಳ್ ಪ್ರಸಿದ್ಧಿಗೆ ಸಂದುವಂತವಕ್ಕೆ ಕಾಲಂ ಸಲೆ ಮತ್ತಮಲ್ಲಿ ಯೂಥಾಧಿಪತಿ ಭದ್ರಜಾತಿಯಪ್ಪ ಸುಂದರನೆಂಬಾನೆ ಚಾರಣರಿಸಿಯಕ್ಕಳ ಪಾದ ಯುಗಳಂಗಳಂ ವಿದ್ಯಾಧರನರ್ಚಿಸಿ ಪೊಡೆವಟ್ಟು ಪೋಪುದಂ ಕಂಡು ತಾನುಂ ನಿಚ್ಚಮಾ ಸ್ಥಿತಿಯೊಳೆ ತಾಮರೆಯ ಪೂಗಳಂ ತಂದಚ್ಚಿರ್ಸಿ ಪೂಜಿಸಿ ಪೊಡೆವಟ್ಟು ಪೋಕುಮಿಂತು ಪುಣ್ಯಮಂ ನೆರಪುತ್ತಂ ಕಾಲಂ ಸಲೆ ಮತ್ತೊಂದು ದಿವಸಂ ಪ್ರಭಂಕರಿ ಯೆಂಬ ಸರೋವರದೊಳ್ [೨]ಮಲಯಸುಂದರಂ ಪೂರ್ವಭವದ ಪ್ರಾಣವಲ್ಲಭೆ ಯರ್ಕಳಂ ಕಂಡತಿಸ್ನೇಹದಿಂದಂ ಪೊರ್ದಲಾಟಿಸುವುದಂ ಕಂಡು ಸುಂದರನೆಂಬಾನೆ ಸಾರಲೀಯದುದಱಿಂ ತದ್ವಿರಹ ಪರಿತಪ್ತ ಮನದಿಂದಂ ಸಲ್ಗುದಂ ನವಯೌವನ ಮನೆಯ್ದಿ[೨] ಆತ್ಮಬಲಮನದಱ ಬಲದೊಳ್ ವೃಕ್ಷಭಂಜನ ಸಾಮರ್ಥ್ಯದಿಂ ಪರೀಕ್ಷಿಸಿ ಮಱಿಯಾನೆಗಳಿಂ[೩] ಪರಿಭವಮನದಕ್ಕೆ ಕಂಡು ವೃದ್ಧನಪ್ಪಾ ಸುಂದರನೊಳ್
೨೦ ಯುದ್ಧಂಗೆಯ್ದು ಕೊಂದಾ ಯೂಥಕ್ಕೆಲ್ಲಮಧಿಪತಿಯಾಗಿ ಮಲಯಾವತಿಯುಂ ಪದ್ಮಾವತಿಯುಮನೊಡಗೊಂಡಿಷ್ಟವಿಷಯಕಾಮಭೋಗಂಗಳನನುಭವಿಸುತ್ತಮಾ ಯೆರಡುಂ ಪಿಡಿಗಳ್ ತಂಮೊಳನ್ಯೋನ್ಯ ಸ್ನೇಹದೊಳ್ ಕೂಡಿದುವು. ಮಲಯ ಸುಂದರನ್ ಬಲದ ದೆಸೆಯೊಳ್ ಮಲಯಾವತಿಗೆ ಪೋಪ ದಾಯಮನೆಡದ ದೆಸೆ ಯೊಳ್ ಪದ್ಮಾವತಿಗೆ ಪೋಪ ದಾಯಮನಿತ್ತಂತು ಪ್ರಭಂಕರಿಯೆಂಬ ಸರೋವರ ದೊಳ್ ಸ್ವೇಚ್ಛೆಯಿಂ ಕ್ರೀಡಿಸಿ ಪೊಱಮಡುವಾಗಳ್ ಮಲಯಾವತಿಯ ಮಸ್ತಕ ದೊಳ್ ವಿಕಸಿತ ಸಹಸ್ರಪತ್ರ ಕುಸುಮವನಿಡುವ ದಾಯಮಂ ಕೊಟ್ಟು ಸಲಿಸುತ್ತಂ ಉಟಿದ ಪಿಡಿಗಳೆಲ್ಲಮಂ ತೊಱೆದಾಯೆರಡಱೊಳಮಾಸಕ್ತನಾಗಿ ಕಾಮ ಭೋಗಂ ಗಳನನುಭವಿಸುತ್ತಮಿಂತು ಸುಖದೊಳಿರ್ಪ ಕಾಲದೊಳ್

ಮತ್ತೊಂದು ದಿವಸಂ ಪ್ರಭಂಕರಿಯೆಂಬ ಕೊಳದೊಳ್ ಸ್ವೇಚ್ಛೆಯಿಂ ನೀಡುಂ
೩೦ ಕ್ರೀಡಿಸುತ್ತಂ[೪] ತಡಂಬಂದು ಮನಃಪೂರ್ವಕಮಲ್ಲದೆ ಪೊಱಮಡುವಾಗಳ್ ಪದ್ಮಾ ವತಿ ಬಲದ ದೆಸೆಯೊಳಾಗಿ ಮಲಯಾವತಿಯೆಡದ ದೆಸೆಯೊಳಾಗಿ ಪೊಱಮಟ್ಟು ಬರೆ ಮದಾಂಧ ಗಂಧಸಿಂಧುರಂ ಮದದಿಂ ಮೆಯ್ಯಱಿಯದೆ ಬಲದ ದೆಸೆಯೊಳಿರ್ದ

---

೧. ಮೂಱನ್ಯ (ಕ). ೨. (ಕ, ಖ, ಗ)ಗಳಲ್ಲಿ ಇಲ್ಲ. ೩. ಯಪ್ಪಂದಿನ (ಘ, ಚ, ಛ). ೪. +ಮಾಡುತಂ ಮುಳುಗುತ್ತಂ (ಘ, ಚ, ಛ).

ಪದ್ಮಾವತಿಯಂ ಮಲಯಾವತಿಗೆತ್ತು ಪದ್ಮಾವತಿಯ ಮಸ್ತಕದೊಳ್ ವಿಕಸಿತ
ಸಹಸ್ರಪತ್ರ ಕುಸುಮಮನಿಟ್ಟೊಡೆ ಮಲಯಾವತಿ ನೋಡಿ ತನ್ನಂ ಪರಿಭವಿಸಿದನೆಂದು
ಪದ್ಮಾವತಿಯೊಳಪ್ಪ ಪುರುಡುಂ ಕಾರಣಮಾಗಿ ಮುಳಿಸಿನಿಂದಂ ಚಂದನಮಲಯ
ಪರ್ವತದ ತುತ್ತತುದಿಯಂ ಬೇಗಂ ಪರಿದಡರ್ದಂತಲ್ಲಿಂದಂ ತನ್ನನಿಕ್ಕಿ ಮಲಯಾವತಿ
ಶತಖಂಡಮಾಗಿ ಬಿಟ್ಟು ಸತ್ತತ್ತದಱ ಸತ್ತುದಂ ಮಲಯಸುಂದರಂ ಕಂಡು
ಮಲಯಾವತಿಯ ವಿಯೋಗದೊಳಾದಮಾನುಂ ದುಃಖಂಗೆಯ್ದು ಪದ್ಮಾವತಿಯನೊಡ
ಗೊಂಡು ಪೋಯ್ತು ಮತ್ತಾ ಮಲಯಾವತಿಯೆಂಬ ಪಿಡಿ ಸತ್ತು ಸುಕೇಶಿನಿಯೆಂಬೊ
ಳಾದಳಾ ಪದ್ಮಾವತಿಯೆಂಬ ಪಿಡಿಯುಮಾಯುಷ್ಯಾಂತದೊಳ್ ಸತ್ತು ಸುಕೇಶಿನಿಯ
ತಾಯ್ ಸುರೂಪೆಯ ಸೋದರ ತಮ್ಮಂ ವರಾಂಗನಾದೊಂ ಮತ್ತಾ ಮಲಯಸುಂದರ
ನಿಂದಂ ಕೊ೧ಲೆಸತ್ತ೧ ಸುಂದರನೆಂಬಾನೆ ಸುವೇಗನೆಂಬ ವಿದ್ಯಾಧರನಿಂದಂ ಪೂಜಿಸೆ ೧೦
ಪಟ್ಟ ಚಾರಣರಿಷಿಯರ ಪಾದಪದ್ಮಯುಗಳಂಗಳುಮಂ ನೋಡಿಯುಪಶಮಕ್ಕೆ
ಸಂದು ತಾನುಂ ತಾಮರೆಯ ಪೂಗಳಂ ತಂದು ಪ್ರತಿದಿನಮರ್ಚಿಸಿ ಪೂಜಿಸಿಪ್ಪೊಡೆವಟ್ಟು
ಪೋಕುಮಾ ಚಾರಣರಿಷಿಯರಡಿವೊಣರನರ್ಚಿಸಿದ ಪುಣ್ಯದಿಂದಂ ಸತ್ತಿಲ್ಲಿ ನೀಂ
ಚಂಪಾಪುರಕ್ಕಧಿಪತಿಯಯ್ ಗಂಧಭಾಜನನೆಂಬರಸನಾದಯ್ ಸುಕೇಶಿನಿಯುಂ
ಜಾತಿಸ್ಮರೆಯಾಗಿ ತನ್ನ ಮುನ್ನಿನ ಭವದ ಭರ್ತಾರನಪ್ಪ ಮಲಯಸುಂದರನಂ
ನೆನೆದು ನಿನ್ನಿಂದಂ ಕೊ೧ಲೆಸತ್ತು೧ದಱ ಕೋಟ್ಯಳನಾದಮಾನುಂ ಬಿಗಿದಪ್ಪಿಕೊಂಡು
ಸತ್ತುದಕ್ಕೆಂದು ಕಾರಣಂ ಮತ್ತೆ ನೀಂ ಮುನ್ನೆ ಸುಂದರನೆಂಬಾನೆಯಾಗಿ ಚಾರಣ
ರಿಷಿಯರ ಪಾದಯುಗಳಂಗಳನರ್ಚಿಸುವಂದು ನಿನ್ನಂ ಕಂಡಾಯೆರಡುಂ ಪಿಡಿಗಳ್
ನಿನ್ನೊಡವೋಗಿಯರ್ಚಿಸಿ ಪುಣ್ಯಮಂ ನೆರಪಿದ ಫಲದಿಂದಂ ಸುಕೇಶಿನಿಯುಂ
ವರಾಂಗನುಮಾದರೆಂದು ಯಶೋಧರ ಕೇವಲಿಗಳ್ ಸವಿಸ್ತರಂ ಪೇಟ್ಪೊಡೆ ಗಂಧ ೨೦
ಭಾಜನನೆಂಬರಸಂ ಕೇಳ್ದು ಮತ್ತಮಿಂತೆಂದಂ ಭಟಾರಾ ಸುಕೇಶಿನಿ ಸತ್ತೀಗಳೆಲ್ಲಿ
ಪುಟ್ಟಿದಳೆಂದು ಬೆಸಗೊಂಡೊಡೆ ಭಟಾರರಿಂತೆಂದು ಪೇಟ್ದರ್ ೮ ೨೧ ೨೯.

ಸು೨ರಟ೩ಮೆಂಬುದು ನಾಡಲ್ಲಿ ಗಿರಿನಗರವೆಂಬುದು ಪೊಟಲದನಾಳ್ವೊಂ
ನಿನ್ನಾಳ್ ಮಹಾಸಾಮಂತನತಿರಥನೆಂಬೊನಾತನರಸಿ ಗೌರಿಯೆಂಬಳಾ ಇವ್ವರ್ಗ್ಗಂ
ಸುಕೇಶಿನಿ ಸತ್ತು ಮನೋಹರಿಯೆಂಬೊಳ್ ಮಗಳಾಗಿ ಪುಟ್ಟಿದಳ್ ಮತ್ತಾ
ಅರಸನ ಮಂತ್ರಿ ವಿಜಯನೆಂಬೊನಾತನ ಭಾರ್ಯೆ ವೀರಶ್ರೀಯೆಂಬೊಳಾ
ಇವ್ವರ್ಗ್ಗಂ ಮಲಯಸುಂದರಂ ಸತ್ತು ಕುಬೇರಕಾಂತನೆಂಬೊಂ ಮಗನಾಗಿ
ಪುಟ್ಟಿದೊಂ ವಿಭವೈಶ್ವರ್ಯಂಗಳಿಂದಂ ಕುಬೇರನೊಳ್ಕೋರನ್ನನಪ್ಪೊಂ ಮತ್ತಾ ಪೊಟ
ಲೊಳ್ ರಾಜಶ್ರೇಷ್ಠಿ ಧನ೩ದನೆಂ೩ಬೊನಾತನ ಪರದಿ ಧನಶ್ರೀಯೊಂಬೊಳಾ
ಇವ್ವರ್ಗ್ಗಂ ಮಲಯಸುಂದರಂ ಸತ್ತುದಂ ಸುಕೇಶಿನಿ ಕಂಡು ಸೈರಿಸಲಾಱದೆ ೩೦
ಪ್ರಾಣಪರಿತ್ಯಾಗಂಗೆಯ್ದಳಂ ನೆನೆದು ದ್ರವ್ಯತಪದೊಳ್ ಕೂಡಿ ತಪಂಗೆಯ್ದು ವರಾಂಗಂ
ಸತ್ತು ಶ್ರೀಧರನೆಂಬೊಂ ಮಗನಾಗಿ ಪುಟ್ಟಿದೊನಾತನ ಭಾರ್ಯೆ ಕುಬೇರಶ್ರೀ
ಯೆಂಬೊಳಾ ಶ್ರೀಧರಂ ಕುಬೇರಕಾಂತಂಗಿಷ್ಟಮಿತ್ರನಾಗಿ ಸಲೆ ಮತ್ತೊಂದು ದಿವಸಂ

---

೧. ಲಲ್ಲಟ್ಟ (ಕ, ಖ, ಗ). ೨. ರಾಟ್ಟ (ಘ). ರಾಷ್ಟ್ರ (ಛ). ೩. ದೇವನಿಂ (ಘ, ಚ, ಛ).

ಶ್ರೀಧರಂ ಕುಬೇರಕಾಂತನೊಡನೆ [೧]ಮಱಲುಂದಿಯಾ[೧]ತನ ರತ್ನಕಂಬಳಮಂ
ಪೊದೆದು ತನ್ನ ಮನೆಗೆ ಬಪ್ಪೊನಂ ಕಂಡು ಸವತಿಯೊಳಪ್ಪ ಶಂಕೆಯಿಂದಂ
ಪ್ರಾಸಾದದ ಮೇಗಣಿಂದಂ ನೆಲಕ್ಕಿಕ್ಕಿ ಬಿಟ್ಟು ಸತ್ತೊಳಾ ಸತ್ತೊಳಂ ಶ್ರೀಧರಂ
ಕಂಡಾದಮಾನುಂ ದುಃಖಂಗೆಯ್ದು ಶೋಕಾಭಿಭೂತನಾಗಿರ್ದೊನಂ ಕುಬೇರ
ಕಾಂತಂ ಬಂದು ಕಂಡು ಶ್ರೀಧರಾ ಪರಮಮಿತ್ರಾ ಇಂತೇಕೆ [೨]ಬರ್ದಿ[೨] ಬಂಬಳಂ
ಬಾಡಿ ಪಾಡಱಿದುಬ್ಬೆಗಂಬಟ್ಟಿರ್ದೆಯೆಂದು ಬೆಸಗೊಂಡೊಡೆ ತನ್ನ ಕೆಳೆಯಂ
ಗಿಂತೆಂದು ಶ್ರೀಧರಂ ಪೇಟ್ಗುಂ ನಿನ್ನ ರತ್ನಕಂಬಳಮುಂ ಪೊದೆದು ಮನೆಗೆ
ವಂದೊಡೆ ಸವತಿಯೊಳಪ್ಪ ಶಂಕೆಯಿಂದೆನ್ನ ಭಾರ್ಯೆ ಕುಬೇರಶ್ರೀ ಮಾಡದ
ಮೇಗಣಿಂದಂ ತನ್ನಂ ನೆಲಕ್ಕಿಕ್ಕಿ ಬಿಟ್ಟು ಸತ್ತಳಿನ್ನುಮಾಯಿರ್ದಳೆಂದು ತೋಱಿದೊಡೆ
೧೦ ಕುಬೇರಕಾಂತಂ ನೋಡೆ ನೋಡೆ ಜಾತಿಸ್ಮರನಾಗಿ ಕೆಳೆಯಂಗಿಂತೆಂದು ಪೇಟ್ಗು
ಮೆನ್ನ ಪೆಂಡತಿ ಮಲಯಾವತಿಯಪ್ಪ ಪಿಡಿ ಪುರುಡಿನಿಂದಂ ಚಂದನಮಲಯಮೆಂಬ
ಪರ್ವ್ವತದ ಶಿಖರದಿಂದಂ ತನ್ನನಿಕ್ಕಿ ಸತ್ತಂತೆ ನಿನ್ನ ಪೆಂಡತಿಯುಂ ಸತ್ತಳೆಂದು
[೩]ಪೇಟ್ದುಬ್ಬೆಗಂಬಡಲ್ವೇಡೆಂದು[೩] ಸಂತಯಿಸಿ ತನ್ನ ಮನೆಗೆವೋಗಿ ಜಾತಿಸ್ಮರ
ನಪ್ಪುದಱಿಂ ಕುಬೇರಕಾಂತಂ ತನ್ನ ಮುನ್ನಿನ ಮಲಯಸುಂದರನಪ್ಪ ಭವದ
ನೆಗೞ್ತೆಗಳೆಲ್ಲಮುಂ ಮಲಯಾವತಿ ಪದ್ಮಾವತಿ ಮೊದಲಾಗಿ ಕರಿಣೀವೃಂದಸಹಿತಂ
ವನಹಸ್ತಿಕ್ರೀಡೆಗಳೆಲ್ಲಮನೊಂದು ಪಟದೊಳ್ ಬರೆದದಂ ನೋಡುತ್ತಂ ಪಾಡುತ್ತಂ
ಹಾ ಎನ್ನ ಮಲಯಾವತಿ ಹಾ ಎನ್ನ ನಲ್ಲಳೆ ನೀನೀಗಳೆಲ್ಲಿರ್ದ್ದೆಯೆಂದಱಸುತ್ತಂ
ಮರುಳ್ಗೊಂಡು ಪ್ರಳಾಪಂಗೆಯ್ಯುತ್ತಂ[೪] ಉಜ್ಜಯಂತ ಪರ್ವ್ವತಮುಂ ಬಲಗೊಂಡು
ಬಪ್ಪೊನಂ ಚಿತ್ರಾಂಗದನೆಂಬ ವಿದ್ಯಾಧರಂ ಕಂಡು ಕರುಣಿಸಿ ಧರ್ಮವಾತ್ಸಲ್ಯ
೨೦ ದಿಂದಂ ತನ್ನ [೫]ಕಾಮಮುದ್ರಿಕೆಯಂ ಸ್ವೀಕರಿಸ್ಪಿತ ಕಾರ್ಯಸಿದ್ಧಿಯಂ ಮಾಡುವ
ವಿದ್ಯೆಯಂ ಕುಬೇರಕಾಂತಂಗೆ ಕೊಟ್ಟಂ, ಕುಬೇರಕಾಂತನುಂ ವಿದ್ಯಾದೇವತೆಯಂ
ಬಿಸಗೊಂಡೆನ್ನ ಮುನ್ನಿನ ಭವದ ಪ್ರಾಣವಲ್ಲಭೆಯೆಲ್ಲಿರ್ದ್ದಳೆನೆ ವಿದ್ಯಾದೇವತೆಯೆಂದಳ್
ನಿನ್ನ ಪ್ರಾಣವಲ್ಲಭೆಯತಿರಥನೆಂಬರಸಂಗೆ ಮಗಳ್ ಮನೋಹರಿಯಾಗಿರ್ದಳೆಂದು
ವಿದ್ಯಾದೇವತೆ ಪೇೞೆ ಕೇೞ್ದಱಿದು ಪಿಶಾಚವೇಷಮುಂ ಕೈಕೊಂಡರಮನೆಯಂಗಣ
ದೊಳಿರ್ದು ಪಟಮುಂ ನಿಮಿಚ್ಚಿರ್ಪೆಯೆತ್ತಿ ತೋಱಿ ಪಾಡುತ್ತಮೆಲೆ ಮಲಯಾವತಿ
ಹಾ ಎನ್ನ ಕಾದ[೬]ಲಳೆ[೬] ನೀನೀಗಳೆಲ್ಲಿರ್ದ್ದೆಯೆಂದು ಪಾಡುವುದಂ ಕೇೞ್ದು ಪಟಮುಂ
ನೋಡಿ ಮನೋಹರಿ ಜಾತಿಸ್ಮರೆಯಾಗಿ ತನ್ನ ಮುನ್ನಿನ ಭವಮನಱಿದು [೭]ದಾಮ
ರಥಿ[೭]ಯೆಂಬ ತನ್ನ ದಾದಿಗೊಸಗೆಯಿಂದಮಿಂತೆಂದಳೀಯಂಗಣದೊಳ್ ಪಟಮುಂ
ತೋಱುವಾತನೆನ್ನ ಮುನ್ನಿನ ಭವದ ಭರ್ತ್ತಾರನೆಂದು ಪೇಟ್ದು ಮತ್ತಮಿಂತೆಂದ
೩೦ ಳಬ್ಬಾ ನೀನೆನ್ನ ಪ್ರಾಣಮಂ ಕಾವುದು ಕಾರಣಮಾಗಿ ಆತನಲ್ಲಿಗೆ ವೋಗಿ ಏಕಾಂತ
ದೊಳಿಂತೆಂದು ಪೇಟ್ ಪದ್ಮಾವತಿಯ ತಲೆಯೊಳಟ್ಟಿಯಿಂದಂ ನೀಂ ತಾವರೆಯ

---

೧. ನಿದ್ರೆಗೈದಾ (ಘ, ಚ, ಛ). ೨. ಬಿಳ್ದು (ಘ, ಛ), (ಚ)ದಲ್ಲಿ ನಷ್ಟವಾಗಿದೆ. ೩. (ಕ, ಖ ಗ)ಗಳಲ್ಲಿ ನಷ್ಟವಾಗಿದೆ. ೪. ನಾಮಮುಂ ಶ್ರೀದೈಯುಂ ಈ (ಕ. ಖ. ಗ). ೫. ಲೊಳ್ (ಕ, ಖ), ಲಳ್ (ಗ), ನಲ್ಲಳೆ (ಛ). ೬. ವಾಮರತಿ (ಘ, ಚ, ಛ).

ಪೂವಂ ಮುನ್ನವಿಟ್ಟು ಮಲಯಾವತಿ ಪ್ರಾಣವಲ್ಲಭೆ ಎಲ್ಲಿದ್ದೆಯೆಂದೀಗಳೀಕೆ
ಮಲಯಸುಂದರಾ ನೀನಾರಯ್ದಪ್ಪೆಯೆಂದು ಪೇಟ್ದು ಮತ್ತಮಿಂತೆಂದು ಪೇಟ್
ನಿನ್ನ ಪ್ರಾಣವಲ್ಲಭೆ ನಿನ್ನನೆಯಱಿಸಿ ಬಯಸುತ್ತಿರ್ಪಳಾಕೆ ನಿನ್ನೊಳ್ ಕೂಡು
ವನ್ನೆಗಮಿಾ ಪಟಮಂ ತೋಱಿಯಾಕೆಯ ಪ್ರಾಣಮಂ ಕಾವೆನೆಂದು ಪಟಮಂ
ಬೇಡಿ ಕೊಂಡು ಬಾ ಎಂದು ೧ಕಲ್ಪಿ೧ಸಿಯಟ್ಟಿದೊಡಾಕೆಯುಂ ಕಲ್ಪಿಸಿದ ಪಾಂಗಿ
ನೊಳಾತನಲ್ಲಿಗೆವ್ಪೋಗೇಕಾಂತದೊಳಿಲ್ಲಮಂ ನುಡಿ೨ದು ಕುಬೇರಕಾಂತನ ಕೆಯ್ಯ
ಪಟಮಂ ಬೇಡಿ ಕೊಂಡು ಪೋಗಿ ಮನೋಹರಿಗೆ ಕೊಟ್ಟಳ್ ಮನೋಹರಿಯುಮಾ
ಪಟಮಂ ಕೊಂಡು ದಿವಸಕ್ಕಮಬ್ಬಿಱಿಸೊಳ್ ನೋಡುತ್ತಿರ್ಕ್ಕುಂ

ಮತ್ತಿತ್ತ ಕುಬೇರಕಾಂತಂ ತನ್ನ ಮರುಳ್ಪೀಷಮಂ ತೊಱೆದು ಸ್ವಾಭಾವಿಕ
ನಾಗಿ ತನ್ನ ಮನೆಗೆ ವಂದೊಡೆ ಪ್ರಸನ್ನ ರೂಪನಾಗಿದ್ದೊನಂ ವಿಜಯನಿಂತೆಂದು ೧೦
ಬೆಸಗೊಂಡಂ ಮಗನೆ ನೀನಿನಿತು ದಿವಸಮೇಕೆ ಮರುಳಾಗಿದ್ದೆ ಈಗಳೆಂತು
ಮರುಳ್ತನಂ ೩ಪಿಂಗಿತೆಂದು೩ ಬೆಸಗೊಂಡೊಡೆ ಕುಬೇರಕಾಂತನಿಂತೆಂದು ಪೇಟ್ದಿನೀ
ಯರಸರ ಮಗಳಪ್ಪ ಮನೋಹರಿ ಎನ್ನ ಮುನ್ನಿನ ಭವದ ಪೆಂಡತಿಯಾಕೆಯನಱಿಸ
ಲ್ವೇಡಿ [ಇ]ನಿತು ದಿವಸಂ ಮರುಳ್ಗೊಂಡಿದ್ದೆಂ ಮತ್ತೀಗಳಾರಯ್ದಱಿಸಿ ಕಂಡೆ
ನಪ್ಪುದಱಿಂದಂ ಮರುಳ್ತನಂ ೩ಪಿಂಗಿತೆಂದು೩ ಪೇಟೊಡೆ ತಂದೆಯೆಂದಂ ಮಗನೆ
ನಿನ್ನ ಮುನ್ನಿನ ಪೆಂಡತಿಯೆಂದಱಿದೆಯಪ್ಪೊಡಮಿಾಗಳಾಕೆಯರಸನ ಮಗಳಾಗಿಪ್ಪು
ದಱಿಂ ನಿನಗತಿ ದುರ್ಲಭೆ ಭಾಗ್ಯಮಿಲ್ಲದುದಂ ಪೆಱಲಾಗ ನಿನಗಾಕೆಯೊಳಪ್ಪ ಬೇಂಟ
ಮನುಱಿವುದು ಮಗನೆ ಎಂದೊಡೆ ಕುಬೇರಕಾಂತಂ ಕಾಮವಿದ್ಯೆಯಿಂದಂ ಹಸ್ತ್ಯಶ್ವ
ರಥಪದಾತಿಬಲಸಮೂಹಮನೆನಿತಾನುಮಂ ವಿಭವೈಶ್ವರ್ಯ ಸಮನ್ವಿತಂ ತಂದೆಗೆ
ತೋಱಿದೊಡೆ ತಂದೆಯುಂ ಮಗನ ಸಾಮರ್ಥ್ಯಮಂ ಕಂಡಾದಮಾನುಂ ಸಂತಸಂ ೨೦
ಬಟ್ಟಿರ್ದಂ ಮತ್ತೊಂದು ದಿವಸಂ ಅತಿರಥ ಮಹಾರಾಜಂ ಮಂತ್ರಿಯರ್ಕಳೊಡನೆ
ಮಂತಣಮಿರ್ದ್ದಲ್ಲಿ ಮಂತ್ರಿಯರ್ಕಳನಿಂತೆಂದು ಬೆಸಗೊಂಡಂ - ಮನೋಹರಿಗೆ
ಯೌವನಂ ನೆಱೆದುದು ಕೂಸು ೪ಕುಡಲ್ಕಾದುದಾರ್ಗೆ ಕುಡುವಮೆಂದು೪ ಮಂತ್ರಿ
ಯರ್ಕ್ಕಳಂ ಬೆಸಗೊಂಡೊಡೆ ಉಟ್ಟಿದ ಮಂತ್ರಿಯರ್ಕಳೆಲ್ಲಂ ತಂತಮ್ಮ ಬಗೆದರಸು
ಗಳ ಪೆಸರ್ಗ್ಗಳಂ ಪೇಟ್ಪವರ್ಗ್ಗೆ ಕುಡುವಮೆಂದೊಡೆ ಕುಬೇರಕಾಂತನ ತಂದೆಯಪ್ಪ
ವಿಜಯನೆಂಬ ಮಂತ್ರಿಯುರ್ಕ್ಕೆವದಿಂದವರ ಪೇಟ್ದ ಮದವಕ್ಕಳಂ ನಿರಾಕರಿಸಿ
ಮನೋಹರಿಯ ರೂಪಿಂಗಂ ಜವ್ವನಕ್ಕಂ ೫ಕಳಾಗುಣಂಗಳನಱಿವುದರ್ಕ್ಕಮವರ್
ಯೋಗ್ಯರ್ ಮದವಕ್ಕಳಲ್ಲರ್ ಕೂಸಿಂಗೆ ಸ್ವಯಂಬರಮಂ ಪಣ್ಣುವಂ ಸ್ವಯಂಬರ
ದೊಳ್ ತನ್ನ ಭಾಗ್ಯದೊಳ್ ಮಚ್ಚಿದವರಂ ಕೆಯ್ಕೊಳ್ಗಿಂದು ನುಡಿದೊಡರಸನುಮಾತನ

---

೧. ಲಿ (ಘ, ಚ, ಛ). ೨. +ದಿಂತೆಂದಳ್ ಮಲಯ ಸುಂದರಾ ನೀಂ ಮುನ್ನ ಪದ್ಮಾವತಿಯ ೩೦
ಮುಸ್ತಕದಲು ತಾಮರೆಯ ಪುಷ್ಪಮನಿಕ್ಕಿ ಯಿಾಗಳ್ ಮಲಯಾವತಿಯೆಂದಱಿಸಲ್ತಕ್ಕುದೆಯೆಂಮೊಡಾಂ
ಮೆಯ್ಯಱಿದಿಕ್ಕಿದೆನೆಂದೊಡಾಕೆಯಿಂತೆಂದಳಿಕ್ಕಿದೊಡಮೇಂ ನಿನ್ನ ಪ್ರಾಣವಲ್ಲಭೆಯಪ್ಪ ಮಳಯಾವತಿ
ನಿನ್ನೊಳು ಕೂಡುವನ್ನೆಗಮಿಾ ಪಟಮಂ ಕುಡು ನೋಡುತ್ತಿರ್ಕುಮೆಂ (ಘ, ಚ, ಛ). ೩. ತಿಳಿದು
ದೆಂದು (ಘ, ಚ, ಛ). ೪. (ಕ, ಖ, ಗ, ಘ, ಚ)ಗಳಲ್ಲಿ ನಷ್ಟವಾಗಿದೆ. ೫. +ತೇಜಕ್ಕಂ (ಛ).

ಮಾತನೊಡಂಬಟ್ಟು ಸ್ವಯಂಬರಸಾಲೆಯಂ ಮಾಡಿಸಿ ಅರಸುಗಳ್ಗೆಲ್ಲಂ ಬಟ್ಟಿಯ
ನಟ್ಟಿ ಬರಿಸೆ ಸ್ವಯಂವರಸಾಲೆಯೊಳ್ ನೆರೆದಿದ್ದರಂಗ [1]ವೆಂಗಿ[1] ಕಳಿಂಗ ಕಾಂ
ಭೋಜ [2]ಕಾಶಿ ಕೌ[2]ಶಲ [3]ಪಲ್ಲವ ಪಾಂಚಾಳ ಮಗಧ ಮಾಳವ ವತ್ಸ ಮಹಾರಾಷ್ಟ್ರ
ಕುಣಾಳ ಕುರುಜಾಂಗಣ ದ್ರವಿಳ ಲಾಳ ಕರ್ನ್ನಾಟ ಗೌಳ ಸು[4]ಹುಮ್ಮ ಸುರ
[5]ಕ್ತಾನ[5] ಸೂರ[6]-ಸೇನೀ[6]ಯ ಪ್ರಭೃತಿ ನಾನಾ ವಿಷಯಾಧಿಪತಿಗಳಪ್ಪರಸುಗಳೆಲ್ಲಂ
ನೆರೆದಿದ್ದರ್ಲ್ಲಿಯಾರುಮಂ ಮೆಚ್ಚದೆ ದಾಂಟಿ ಪೋಗಿ ಕುಬೇರಕಾಂತಂಗೆ ಮಾಲೆಯಂ
ಸೂಡಿ[7]ದಳಾಗಳರಸುಗಳೆಲ್ಲಂ[8] ನೆರೆದಾಮೇಕೈಕ ಪ್ರಧಾನರೆಮಿದ್ದರ್ಂತಿರೆ ಬಡವಂ
ಗೇನುಮಲ್ಲದೊಂಗೆ ಮಾಲೆಯಂ ಸೂಡಿದಳೆಂದು ಸಭಾಕ್ಷೋಭಮಾಗಿ ಕುಬೇರಕಾಂತ
ನೊಳನಿಬರುಂ ನೆರೆದು ಯುದ್ಧಂಗೆಯ್ದೊಡೆ ಸಂಗ್ರಾಮರಂಗದೊಳ್ ಸುವ[9]ರ್ಮ್ಮ್ಯ
೧೦ ವರ್ಮ್ಮ[10] ಮೊದಲಾಗೊಡೆಯರಸರ್ಕಳೆಲ್ಲರುಮಂ ಗೆಲ್ದು ಮನೋಹರಿಯಂ ಪಾಣಿ
ಗ್ರಹಣ ಪುರಸ್ಸರಂ ಮದುವೆನಿಂದು [9]ಸೊಪಾರ[9]ಕ್ಕಧಿಪತಿಯಾಗಿರ್ದ್ದನ್

ಇಂತು ಕುಬೇರಕಾಂತಂ ಮನೋಹರಿಯೊಳಿಷ್ಟವಿಷಯಕಾಮಭೋಗಂಗ
ಳನನುಭವಿಸುತ್ತಮಿರೆಯಿರೆ ಸುವ[11]ರ್ಮ್ಮ್ಯ ವರ್ಮ್ಮ[11]ನೆಂಬರಸಂ ರಾಜ್ಯಪರಿಭ್ರಷ್ಟ
ನಾಗಿ ತಾಪಸತಪಮಂ ಕೈಕೊಂಡು ನೆಗಟ್ಟಿ ಸತ್ತು ಪ್ರತಿಸೂರ್ಯನೆಂಬ ವ್ಯಂತರ
ದೇವನಾಗಿ ಪುಟ್ಟಿದೊಂ ಮತ್ತೆ ಶ್ರೀಧರನುಂ ಕುಬೇರಕಾಂತನುಂ ಮನೋಹರಿಯು
ಮನ್ಯೋನ್ಯಾತಿ ಸ್ನೇಹದೊಳ್ ಕೂಡಿ ರಾಜ್ಯಂಗೆಯ್ದು ತಮ್ಮ ಗೆಯ್ದ ದಾನಧರ್ಮದ
ಫಲದಿಂದಂ ಅನ್ಯಜನ್ಮದೊಳಿಂತಪ್ಪ ವಿದ್ಯೆಯಕ್ಕೆಂದು ಮೂವರುಂ ನಿದಾನಂಗೆಯ್ದು
ಮುನ್ನಂ ಶ್ರೀಧರಂ ಸತ್ತು ವಿಜಯಾರ್ಧಪರ್ವತದ ಉತ್ತರ ಶ್ರೇಣಿಯೊಳ್ ಅಳಕಾಪುರ
ಮೆಂಬುದು ಪೊಬಲದನಾಳ್ವೊಂ ಗಗನವಲ್ಲಭನೆಂಬೊನಾತನ ಭಾರ್ಯೆ ಅನಂಗ
೨೦ ಮಾಲೆಯೆಂಬೊಳಾಯಿರ್ವ್ವರ್ಗ್ಗಂ ಶ್ರೀಧರಂ ಚಂಡವೇಗನೆಂಬೊಂ ಮಗನಾಗಿ
ಪುಟ್ಟಿದೊಂ ಆ ಚಂಡವೇಗನ ಮಹಾದೇವಿ ವಿದ್ಯು[12]ಲ್ಲ[12]ತೆಯೆಂಬೊಳಾಯಿರ್ವ್ವರ್ಗ್ಗಂ
ಕುಬೇರಕಾಂತಂ ಸತ್ತು ವಿದ್ಯುನ್ಮಾಳಿಯೆಂಬ ಮಗನಾಗಿ ಪುಟ್ಟಿದೊಂ ಮತ್ತಂ
ದಕ್ಷಿಣ ಶ್ರೇಣಿಯೊಳ್ ವಿದ್ಯು[13]ಲ್ಲ[13]ತೆಯ ಸೋದರ ತಮ್ಮಂ ಮೇಘಕೂಟಾಧಿಪತಿ
ಮೇಘಮಾಳಿಯೆಂಬೊಂ ವಿದ್ಯಾಧರನಾತನ ಮಹಾದೇವಿ ರತಿಬಿಂದುವೆಂಬೊಳಾ
ಯಿರ್ವ್ವರ್ಗ್ಗಂ ಮನೋಹರಿ ಸತ್ತು ವಿರಳವೇಗೆಯೆಂಬೊಳ್ ಮಗಳಾಗಿ ಪುಟ್ಟಿದಳ್
ಮತ್ತೊಂದು ದಿವಸಂ ಚಂಡವೇಗನುಂ ವಿದ್ಯುನ್ಮಾಲಿಯುಮಂತು ತಮ್ಮಿರ್ವ್ವರುಂ
ಉಜ್ಜಯಂತ ಪರ್ವತದ ಶಿಖರದೊಳ್ ಅರಿಷ್ಟನೇಮಿ ಭಟ್ಟಾರರ ಪರಿನಿರ್ವ್ವಾಣ
ಭೂಮಿ[14]ಯೊಳ್ ಭಕ್ತಿಯಿಂ ಪೂಜಿಸಲಿಂದರ್ಚನೆಯಂ ಕೊಂಡು[14] ಪೋದೊಡಾ
ಪರ್ವ್ವತದ ಶಿಖರಮಂ ಕಂಡು ವಿದ್ಯುನ್ಮಾಲಿ ಮೂರ್ಛೆ[15]ವೋ[15]ಗಿ ಜಾತಿಸ್ಮರನಾಗಿ

---

೩೦ ೧. (ಕ, ಖ, ಗ) ಗಳಲ್ಲಿಲ್ಲ; ವಂಗ (ಛ). ೨. ಕಉಶಿಕವು (ಕ, ಖ, ಗ). ೩. ಪಾಂಬ (ಜ), ಪಾಂಡ್ಯ (?). ೪. ರಮ್ಮ (ಘ, ಜ, ಛ). ೫. ಕಾನ್ತ (ಚ, ಛ). ೬. ವೀರ್ಯ (ಕ, ಖ). ೭. ದೊಡರಸುಗಳೆಲ್ಲರಿಂದಾ (ಘ, ಜ, ಛ). ೮. ರ್ಣ ವರ್ಣಂ (ಘ, ಚ, ಛ). ೯. ಸೊಪಾನಗರ (ಘ, ಚ, ಛ). ೧೦. ರ್ಣ ವರ್ಣ (ಘ). ೧೧. ಲ್ಲ (ಕ). ೧೨. ಯಂ ಕಂಡು (ಕ, ಗ). ೧೩. ಯೋ (ಕ).

ಮನೋಹರಿಯಂ ನೆನೆದು ಮಾಸೋಪವಾಸಂಗೆಯ್ದು ಪ್ರ[೧]ಜ್ಞ[೧]ಪ್ತಿಯೆಂಬ ಮಹಾ
ವಿದ್ಯೆಯಂ ಸಾಧಿಸಿದೊಡಾ ವಿದ್ಯೆ ಬೆಸನೇನೆಂದು ಮುಂದೆ ನಿಲೆ ಎನ್ನ ಮುನ್ನಿನ ಭವದ
ಪ್ರಾಣವಲ್ಲಭೆಯಪ್ಪ ಮನೋಹರಿ ಈಗಳೀ ಲೋಕದೊಳೆಲ್ಲಿದ್ದ[೨]ಳೆಂಬುದನಱಿಸಿ ಬೇಗ
ಮೆನಗೆ ಪೇ[೩]ಟಿಂ[೩]ದೊಡಾ ವಿದ್ಯೆಯಿಂತೆಂದು ಪೇೞ್ದತ್ತು

ವಿಜಯಾರ್ಧ ಪರ್ವತದ ದಕ್ಷಿಣ ಶ್ರೇಣಿಯೊಳ್ ಮೇಘಕೂಟ ಪುರಾಧಿಪತಿ
ಮೇಘಮಾಳಿಯೆಂಬೊಂ ವಿದ್ಯಾಧರಂ ನಿನ್ನ ಸೋದರ ಮಾವನಾತಂಗೆ ಮನೋಹರಿ
ಸತ್ತು ವಿರಳವೇಗೆ[೪]ಯೆಂಬೊಳ್ ಮಗಳಾಗಿ[೪]ದ್ದೊ[೫]ಳೆಂದೊಡಂತಪ್ಪೊಡೆ [೬]ನೀನೆನ್ನಳ
ಮಾವನ ಮನೆಗೆ ವೋಗಿ ವಿರಳವೇಗೆಗಿಂತೆಂದು ಪೇೞ್ ಎಲೆ ಮನೋಹರಿ ನೀಂ
ಮುನ್ನಿನ ಭವದೊಳ್ ಕುಬೇರಕಾಂತನೊಡನೆ ಕ್ರೀಡಿಸಿದ ಕ್ರೀಡೆಗಳಂ ನೆನೆದಾ
ಎಂದು ಪೇೞಿಂದು ವಿದ್ಯೆಯಂ ಕಲ್ಪಿಸಿಯಟ್ಟಿದೊಡಾ ವಿದ್ಯೆಯುಂ ಪೋಗಿ [೫]ಕಲ್ಪಿಸಿದ ೧೦
ಪಾಂಗಿನೊಳಿ[೫] ನುಡಿದೊಡೆ ವಿರಳವೇಗೆ ಮೂರ್ಛೆವೋಗಿದ್ದು[೬] ನೀಡಱಿಂ[೬]ದೆಬ್ಬಿತ್ತು[೬]
ಜಾತಿಸ್ಮರೆಯಾಗಿ ವಿರಹಸಂತಾಪದಿಂ ತನ್ನ ಮುನ್ನಿನ ಭರ್ತಾರನಂ ನೆನೆಯುತ್ತಿರೆ
ವಿದ್ಯುನ್ಮಾಳಿಯುಂ ತನ್ನ ಮನೆಗೆ ವೋಗಿ ತಂದೆ[೭] ಚಂಡವೇಗಂಗೆ ತನ್ನ ವೃತ್ತಾಂತ
ಮೆಲ್ಲಮಂ ಪೇೞ್ದೊಡಾತನುಮಾದಮಾನುಮೊಸೆದು ತನ್ನ ಮೈದುನನಪ್ಪ ಮೇಘ
ಮಾಳಿ ವಿದ್ಯಾಧರನಲ್ಲಿಗೆ ಪೆರ್ಗ್ಗಡೆಗಳಂ ಕೂಸಂ ಬೇಡಿಯಟ್ಟೆ ಪೆತ್ತು ವಿರಳವೇಗೆಯಂ
ವಿದ್ಯು ನ್ಮಾ ಲಿ ಮದುವೆನಿಂದಾಕೆಯೊಳಿಷ್ಟವಿಷಯಕಾಮಭೋಗಂಗಳನನುಭವಿ
ಸುತ್ತಂ ಪಲಕಾಲಂ ಸಲೆ

ಮತ್ತೊಂದು ದಿವಸಂ ವಿದ್ಯಾನಿರ್ಮಿತ ವಿಚಿತ್ರಮಾ[೮]ಗುತ್ತಿ[೮]ರ್ದ ವಿಮಾನ
ಮ[೯]ನೇಱಿ[೯]ಕೊಂಡು ಪೋಪಲ್ಲಿ[೯] ಹಿಮವಂತ ಪರ್ವ್ವತದ ಮೇಗೆ ಪಾಱುವ ವಿಮಾನ
ಮಂ ಮುಂ ಪೇೞ್ದಿ ಪ್ರತಿಸೂರ್ಯನೆಂಬ ವ್ಯಂತರದೇವಂ ಕಂಡು ತನ್ನ ಸುವರ್ಮ್ಮ ೨೦
ವರ್ಮ್ಮನಪ್ಪ ಭವದ ಪಗೆಯಂ ನೆನೆದಿರ್ವ್ವರುಮಂ [೧೦]ಕೂಡಿ ಕೊಂದ[೧೦]ನಿಂತಿರ್ವ್ವರುಂ
ಸತ್ತು ಗಂಗೆಯೆಂಬ ಮಹಾನದಿಯ ತೆಂಕಣ ಪಡುವಣ ಕೋಣೊಳ್ ಸುಕೌಶಳ
ಮೆಂಬ ವಿಷಯದೊಳಯೋಧ್ಯಾಪುರಮೆಂಬ ಪೊಲಲೊಳ್ ಸಾಗರಸೇನನೆಂ[೧೧]ಬೊಂ[೧೧]
ರಾಜಶ್ರೇಷ್ಠಿಯಾತನ ಭಾರ್ಯೆ ಧರಣಿಯೆಂಬೊಳಾಯಿರ್ವ್ವರ್ಗ್ಗಂ ವಿದ್ಯುನ್ಮಾಳಿ
ಯೆಂಬ ವಿದ್ಯಾಧರಂ ಕಾಲಂಗೆಯ್ದು ಸಿದ್ಧಾರ್ಥನೆಂಬೊಂ ಮಗನಾಗಿ ಪುಟ್ಟಿದೊಂ
ಪಿತೃಮಾತೃ[೧೨]ಗಳೊ[೧೨]ಸಗೆಯಂ ಮಾಡುತ್ತಂ ಶ್ರೀವಿಭವ ರೂಪಕಾಂತಿ ಸೌಭಾ
ಗ್ಯಾದಿಗುಣಂಗ[೧೩]ಳಿಂ ನೆ[೧೩]ಱಿದೊಂ

ಮತ್ತಿತ್ತ ಮ[೧೪]ಗಧೆ[೧೪]ಯೆಂಬುದು ನಾಡಲ್ಲಿ ರಾಜಗೃಹಮೆಂಬ ಪೊಟಲೊಳ್
ಸಮುದ್ರವಿಜಯನೆಂಬೊಂ ರಾಜಶ್ರೇಷ್ಠಿಯಾತಂಗೆ ಸಾಗರಸೆಟ್ಟಿಯ ಸೋದರ
ತಂಗೆ [೧೫]ಸುಮತಿಯೆಂಬೊಳಂ ಕೊಟ್ಟರಾ[೧೫]ಯಿರ್ವ್ವರ್ಗ್ಗಂ ವಿರಳವೇಗೆಯೆಂಬ ೩೦

---

೧. ಜ್ಞಾ (ಕ). ೨. ಟ್ಟುದೆಂ (ಕ, ಗ). ೩. ಯಾಗಿ (ಕ). ೪. ನೀಂ (ಖ). ೫. (ಕ) ದಲ್ಲಿ ನಷ್ಟವಾಗಿದೆ. ೬. (ಕ) ದಲ್ಲಿ ಇಲ್ಲ. ೭. +ಗೆ (ಕ). ೮. ಗಿ (ಕ). ೯. ನಿರ್ವರುಮೇಱಿ ಭೌಮವಿಹಾರ
ಕ್ಕೆಂದು ತೊಳಲ್ವಲ್ಲಿ (ಘ, ಚ, ಛ). ೧೦. ಕಾದಿಕೊಂಡ (ಖ). ೧೧. ಬ (ಕ). ೧೨. ಸ್ವಜನಪರಿಜನಂ
ಗಳಿಲ್ಲಮೊ (ಘ, ಚ, ಛ). ೧೩. ಳೊಳ್ಮೆ (ಖ). ೧೪. ರವಸೆ (ಘ, ಛ). ೧೫. (ಕ, ಖ, ಗ) ಗಳಲ್ಲಿಲ್ಲ.

ವಿದ್ಯಾಧರಿ ಕಾಲಂಗೆಯ್ದು ಶ್ರೀಕಾಂತೆಯೆಂಬೊಳ್ ಮಗಳಾಗಿ ಪುಟ್ಟಿದೊಳತ್ಯಂತ
ರೂಪಲಾವಣ್ಯ ಸೌಭಾಗ್ಯ ಕಾಂತಿ ಹಾವ ಭಾವ ವಿಲಾಸ ವಿಭ್ರಮಗಳಿಂ ಕೂಡಿದೊಳ್
ದೇವಗಣಿಕೆಯನೆ ಪೋಲ್ವಳಾಕೆಯಂ ಸೋದರಮಾವನ ಮಗಂಗೆ [೧]ಪಿರಿದುಂ
ವಿಸ್ತಾರದಿಂ ಸಿದ್ಧಾರ್ಥಂಗೆ[೧] ಕೊಟ್ಟರಂತು ಸಿದ್ಧಾರ್ಥನುಂ ಶ್ರೀಕಾಂತೆಯುಂ
ತಮ್ಮೊಳನ್ಯೋನ್ಯ ಸ್ನೇಹದೊಳ್ ಕೂಡಿ[ಇ]ಷ್ಟ ವಿಷಯಕಾಮಭೋಗಂಗಳನನುಭವಿ
ಸುತ್ತಂ ಪಲಕಾಲಂ ಸಲೆ ಮತ್ತೊಂದು ದಿವಸಂ ಸಪ್ತತಳಪ್ರಾಸಾದದ ಮೇಲಿರ್ವ್ವರು
ಮಿಷ್ಟಪರಿವಾರ ಸಹಿತಂ [೨]ದಿಶಾವಳೋಕನಂಗೆಯ್ಯುತ್ತಂ[೨] ಸುಖಸಂಕಥಾವಿನೋದ
ದಿಂದಿರ್ಪ್ಪನ್ನೆಗಂ ವಿಚಿತ್ರಮಾಗುತ್ತಿರ್ದ್ದ ವಿಮಾನಮನೇಱಿ ಆಕಾಶಪಥಕ್ಕೊಗೆದು
ಮೇಗೆ ಪೋಪ ವಿದ್ಯಾಧರಯುಗಳಮಂ ಕಂಡಿರ್ವ್ವರುಂ ಮೂರ್ಛೆವೋಗಿ ನೀಡಱಿಂದೆ
೧೦ ಚ್ಚಿತ್ತು ಜಾತಿಸ್ಮರರಾಗಿ ತಮ್ಮ ಮುನ್ನಿನ ಭವಮಂ ನೆನೆದು [೩]ಸಂಸಾರದ[೩] ಪೊಲ್ಲಮೆ
ಯುಮನನಿತ್ಯತೆಯುಮಂ ಬಗೆದು ವೈರಾಗ್ಯಪರರಾಗಿ ಇರ್ವ್ವರುಂ ತಪಂ ಬಡುವ
ಬುದ್ಧಿಯನೊಡೆಯರಾಗಿ [೪]ಸ್ವಜ[೪]ನ ಪರಿಜನ ಮಂತ್ರಿಮಿತ್ರವರ್ಗ್ಗಕ್ಕೆಲ್ಲಂ ಬಱಿಯ
ನಟ್ಟಿ ಬರಿಸಿ ಸಂಸಾರದ ಪೊಲ್ಲಮೆಯುಮಂ [೫]ತಂತಮ್ಮ ಬಗೆದ ಕಾರ್ಯ್ಯಮುಮ[೫]
ನವರ ಮುಂದೆ ನುಡಿದೊಡವರ್ಗ್ಗಳೆಲ್ಲಂ ನೆರೆದಿಂತೆಂದರಮ್ಮಾ ಪೂರ್ವದಿಂದಂ ಬಂದ
ಕುಲಸಂತತಿಯಂ ಕಾವೊರಾರುಮಿಲ್ಲಿನಿತು ಭಾರಮನಾಗ್ರ್ಗಪ್ಪಿಸಿ ತಪಂಬಟ್ಟಪ್ಪಿ
ರದಱಿಂ ಕೆಲವು ಕಾಲದಿಂ ಮಗನಾದೊಡೆ ಮಗಂಗೆ ಸಮಸ್ತ ಭಾರಮಂ ನಿರೂಪಿಸಿ
ತಪಂಬಡುವುದೆಂದು ನುಡಿದೊಡೆ ಸಿದ್ಧಾರ್ಥನೆಂದಂ ನಿಮ್ಮೆಲ್ಲರ ಪೇಟ್ಟುದನಿಂ[೬]ಬು
ಗೆಯ್ದಪ್ಪೆನೆಂದು ಮಗನಾದಂದೆನ್ನ ತಪಂಬಡುವಂದಾರುಂ ವಕ್ರಂಬರಸಲ್ಲೆಂದು
ನುಡಿದೊಡಂಬಡಿಸಿ ಕೆಲವು ಕಾಲಂ ಪರಿವಾರಂ ಬಾರಿಸೆ ಮಾಣ್ದಿರ್ದ[೭]ಷ್ಟವಿಷಯ
೨೦ ಕಾಮಭೋಗಂಗಳನನುಭವಿಸುತ್ತಿರೆಯಿರೆ

ಮತ್ತೆ ಸಿದ್ಧಾರ್ಥನ ಪಿರಿಯರಸಿ [೮]ಜಯಾವತಿಯೆಂಬೊಳ್ ಮಕ್ಕಳಂ ಬೇಡಿ
ದೇವರ್ಗ್ಗಂ ದೇವತೆಗಳ್ಗಂ ಪರಸಿ ಪೂಜೆಯಂ ಮಾಡುತ್ತಿರ್ಪ್ಪೊಳೊಂದು ದಿವಸಂ
ವಿಜಯಭದ್ರರೆಂಬ ಭಟಾರರವಧಿಜ್ಞಾನಿಗಳ್ ಚರಿಗೆವೊಕ್ಕೊಡೆ ಕಂಡವರಂ
ಜಯಾವತಿ ನಿಱಿಸಿಯಾದಮಾನುಂ ಭಕ್ತಿಯಿರ್ದಂ ಕೈಯಲಿಕ್ಕಿ ನಿರಂತರಂ ಮಾಡಿ
ಕುಳ್ಳಿರ್ದ್ದ ಬಱಿಕ್ಕಿಂತೆಂದರ್ ಬೆಸಗೊಂಡಳ್ ಭಟಾರಾ ಎನಗೆ ಮಕ್ಕಳಕ್ಕುಮೊ
ಆಗದೊ ಎಂದು ಬೆಸಗೊಂಡೊಡೆ ಭಟಾರರಿಂತೆಂದರ್ ವಿಭವೈಶ್ವರ್ಯ್ಯ ರೂಪಕಾಂತಿ
ಸೌಭಾಗ್ಯಾದಿ ಗುಣಂಗಳಿಂದಂ ಸಿದ್ಧಾರ್ಥನಿಂದಗ್ಗಳಂ ಕುಲತಿಲಕನಪ್ಪ ಮಗನಂ
ಪೆಱುವಯ್ ಪೆತ್ತಾಗಳೆಂತು ಪುಣ್ಣಮಿಯಂದಿನ ಚಂದ್ರನಂ ಕಂಡಾಗಳಾದಿತ್ಯನಸ್ತ
ಮಾನಕ್ಕೆ ಸಲ್ಗುಮಂತೆ ಮಗನಂ ಕಂಡಾಗಳೆ ನಿನ್ನ ಭರ್ತಾರನುಂ ತಪಂಬಡು

---

೩೦ ೧. ರೂಪವಿಭವ ಸಂಪನ್ನಂಗೆ (ಕ, ಖ, ಗ). ೨. (ಕ, ಖ, ಗ) ಗಳಲ್ಲಿಲ್ಲ. ೩. ಮಾಡಿದ (ಕ, ಖ, ಗ). ೪. ವಿಶ್ವಜ್ಞ (ಕ, ಗ), ವಿದ್ವಜ್ಞ (ಖ). ೫. ತಪಂಬಡುವ ಪರಿಚ್ಛೇದಮುಮು (ಘ, ಚ, ಛ). ೬. +ಗೆಯ್ದುದ (ಖ). ೭. +ರ್ದು ಕಣ್ಗಂ ಮನಕ್ಕಂ ಮೆಚ್ಚಿಪಡುವ ಶ್ರಿಯಾ ದೇವತೆ ಗಳನೆ ಪೋಲ್ವ ಪಲರೊಳ್ವೆಂಡಿರೊಡನಿ (ಘ, ಚ, ಛ). ೮. ವಿಜಯಾವತಿಯೆಂದು (ಘ, ಚ, ಛ) ಪ್ರತಿ ಗಳಲ್ಲಿದೆ. ೯. ದಮೂಡಿ ಕುಳ್ಳಿರವೇಳ್ದಿಂತೆಂದು (ಘ, ಚ, ಛ).

ಗುಮಾ ರಿಸಿಯರಂ ಕಂಡಾಗಳೆ ಮಗನುಂ ತಪಂಬಡುಗುಮೆಂದು ಭಟ್ಟಾರರ್ ಪೇಟ್ಟು
ಪೋದರಿತ್ತ ಜಯಾವತಿಗೆ ಹರ್ಷವಿಷಾದಂಗಳೆರಡುಮೊಮ್ಮೊದಲಾಗೆ ಕಾಲಂ ಸಲೆ
ಮತ್ತಿತ್ತ ಚಂಡವೇಗಂ ಪಲಕಾಲಮರಸುಗೆಯ್ದು ಆಯುಷ್ಯಾಂತದೊಳ್ ಕಟಿದು
ಜಯಾವತಿಯ ಗರ್ಭದೊಳ್ ನೆಲಸಿ ಗರ್ಭಮಾದೊಡೆ ಜಯಾವತಿ ಮುಂ ನೆಲ
ಮನೆಯಂ ಮಾಡಿಸಿ ಎನಗೆ ಕುತ್ತಂ ಜಲೋದರಮಾದುದಕ್ಕೆ ೧ಕ್ರಿಯೆ೧ಗೆಯ್ಸಿದಪ್ಪೆ
ನೆಂದು ಸಿದ್ಧಾರ್ಥಂಗೆ ಪೇಟ್ಟು ಕುತ್ತಮಂ ಭಾವಿಸಿ ನೆಲಮನೆಯೊಳಗಿರ್ದು ನವ
ಮಾಸಂ ನೆಱೆದಂದು ಪ್ರಸೂತೆಯಾಗಿ ಮಗನಂ ಪೆತ್ತು ತಾನುಂ ದಾದಿಯುಂ ಮತ್ತಂ
ಬೆಸಕೆಯ್ವ ತೊಟ್ಟುಮಿಂತು ಮೂವರುಮಱಿವೊರುಟಿದರಾರುಮಱಿಯರಿಂತು
ದಿವಸಂಗಳ್ ಸಲೆ

ಮತ್ತೊಂದು ದಿವಸಂ ಬೆಸಕೆಯ್ವ ತೊಟ್ಟು ನೀರಂ ತರಲ್ ಪೋದಲ್ಲಿ ನೀರ ೧೦
ಪೊಟೆಯೊಳಾಕೆಯ ಕೆಳದಿ ನಾಗ೨ಬ್ಬೆ೨ಯೆಂಬೊಳಾಕೆಯಂ ಕಂಡಿಂತೆಂದು ಬೆಸ
ಗೊಂಡಳೆಲೆಗೆ ಕುಂದ೩ಬಿ೩ ಪಲದಿವಸದಿಂದಂ ನಿನ್ನಂ ಕಂಡೆನಿಲ್ಲಿನಿತು ದಿವಸದಿಂ
ಮುಂ ಕಾಣದುದಕ್ಕೆ ಕಾರಣಮಂ ಪೇಟೆಂದು ಬೆಸಗೊಂಡಳ್ಗೆ ಕಾರಣಮಂ ನಿನಗೆ
ಪೇಟ್ಪಿಪ್ಪೆಂ ನೀನಾರ್ಗ್ಗಂ ಪೇಟೆಯಪ್ಪೊಡೆಂದು ಸೂ*ರು*ಳಿಸಿ ಇಂತೆಂದು ಪೇಟ್ಪಿಳ್
ನೋಡಾ ಎಮ್ಮ ಸೆಟ್ಟಿತಿ ಜಯಾವತಿ ಬೆಸಲೆಯಾದಳ್ ಕಿರುಂಡೆಳಿಗನಂ ಪೆ೪ತ್ತಳಾರು
ಮನಱಿಯಲೀಯದೆ ನೆಲಮನೆಯೊಳಡಂಗಿಪ್ಪೊಳೆಂದು ಪೇಟ್ಪೊಡಾ ಮಾತನಲ್ಲಿ
ಯೊರ್ವಂ ಸಂಜೆವಾರಿಸುತ್ತಿರ್ದ್ದ ಬ್ರಾಹ್ಮಣಂ ದಾರಿದ್ರ್ಯಾಭಿಭೂತಂ ಸೋಮಶರ್ಮ್ಮ
ನೆಂಬಾತಂ ಕೇಳ್ದಾದಮಾನುಂ ಸಂತೋಷಂಬಟ್ಟು ಪಿರಿದೊಂದು ಮಾದುಫಲಮಂ
ಕೊಂಡು ಪೋಗಿ ಸಿದ್ಧಾರ್ಥನಂ ಕಂಡಿಂತೆಂದು ಬಿನ್ನವಿಕುಂ ಸಿದ್ಧಾರ್ಥಸೆಟ್ಟಿ
ಮಹಾಪುರುಷಾ ನಿನಗಾನೊಂದೊಸಗೆಯಂ ಪೇಟಲ್ ಬಂದೆಂ ಜಯಾವತಿ ಬೆಸಲೆ ೨೦
ಯಾದಳ್ ಮಗಂಬೆತ್ತಳೆಂದು ಪೇಟ್ಪೊಡೆ ಪೇಟ್ದ ಭಟ್ಟಂಗೆ ಕಟಕ ಕಟಸೂತ್ರಂ
ಮೊದಲಾಗೊಡೆಯ ಅಂಗಚಿತ್ತಮುಮಂ ಪಿರಿದು ಕಸವರಮುಮಂ ಕೊಟ್ಟು
ಪಾರ್ವ್ವಂಗೆ ದಾರಿದ್ರ್ಯಮೋ೫ಕ್ಷ೫ಮಂ ಮಾಡಿ ಸಿದ್ಧಾರ್ಥನೀ ಪಾರ್ವ್ವನ ಮಾತಂ
ಕೇಳ್ದಾಗಳೆ ಪುತ್ರಮುಖಮಂ ನೋಟ್ಪೆನೆಂದು ಭೋಂಕನೆ ನೆಲಮನೆಯೊಳಗಂ
ಪೊಕ್ಕು ನೋಟ್ಪಿನ್ನೆಗಂ ಜಯಾವತಿ ತನ್ನ ಸೋಂಕಿಲ ಮೇಗಿ೬ಟ್ಟಾ೬ಡಿಸುತ್ತಿರ್ಪ್ಪ
ಕೂಸಂ ಎಳನೇಸಱಿ ತೇಜದೊಳ್ಕೋರಂತಪ್ಪನಂ ಕಂಡು ಪಲವು ಕಾಲಂ ಬಾಟ್ಪಿ
ಯಾಗೆಂದು ಮಗನಂ ಪರಸಿ ಮತ್ತಮಿಂತೆಂದನೆನ್ನ ಮೂವತ್ತೆರಡು ಕೋಟಿ ಕಸವ
ರಕ್ಕಂ ರಾಜಶ್ರೇಷ್ಠಿಪದಕ್ಕಮೆನ್ನ ಸಂತತಿಗಮೆಲ್ಲಮಿನ್ನಿಂದಿತ್ತ ನೀನೆ ಅರಸನೆಂದು
ನುಡಿದು ಸಮಸ್ತಭಾರಮೆಲ್ಲಮಂ ಕೂಸಿಂಗೆ ಸಮರ್ಪಿಸಿ ಸೋಂಕಿಲೊಳಿರ್ದ ಕೂಸಿಂಗೆ
ಸೆಟ್ಟಿವಟ್ಟಂಗಟ್ಟಿ ಪರಸಿ ಸೇಸೆಯನಿಕ್ಕಿ ಸೋಂಕಿಲೊಳಿರ್ದ್ದನಂ ಕಂಡನಪ್ಪುದಱಿಂ ೩೦
ಸುಕೌಶಲಸ್ವಾಮಿಯೆಂದು ಪೆಸರನಿಟ್ಟು ನೆಲಮನೆಯಂ ಪೊಱಮಟ್ಟು ಸ್ವಜನ ಪರಿಜನ

---

೧. ವೈದ್ಯಂ (ಘ, ಚ, ಛ). ೨. ಜೆ (ಕ), ವತಿ (ಘ, ಚ, ಛ). ೩. ದೆ (ಕ), ವೆ (ಚ).
* ಱು (ಘ). ೪. ಗಂಜಿ (ಕ, ಗ), ಗಂಬೆ (ಖ), ಮಗನಂ ಪೆ (ಛ), ತಿರುಂಡಿ ಮಗನಂ ಪೆತ್ತಳ್
ಎಂದಿರಬಹುದೆ? ೫. ಚನಂ (ಕ). ೬. ರ್ದೂ (ಖ), ಮೇಗಿರ್ದುಮೊಳೆಯೂ (ಕ).

ಬಂಧುವರ್ಗ್ಗಕ್ಕೆಲ್ಲಂ ನಿಶ್ಶಲ್ಯಂಗೆಯ್ದು ನೀಮಿನಿಬರುಂ ಸುಕೌಶಲಸ್ವಾಮಿಯಂ ಪಿಡಿದು ಬಾಲಿಮೆಂದು ಕಲ್ಪಿಸಿ ಸಂತಯಿಸಿ ವಿನಯಂಧರರೆಂಬಾಚಾರ್ಯರ ಪಕ್ಕದೆ ಪಲಂಬರುಂಬೆರಸು ತಪಂಬಟ್ಟಂ ಮತ್ತೆ ಶ್ರೀಕಾಂತೆ ಮೊದಲಾಗೊಡೆಯ ಪಲಂಬರ್ ಪೆಂಡಿರ್ಕ್ಕಳ್ ವಿನಯಂಧರಭಟ್ಟಾರರ್ ಗುರುಗಳಾಗೆ ಗುಣಮತಿ ಕಂತಿಯರ್ ಕಂತಿಯರಾಗೆ ತಪಂಬಟ್ಟು ಪಲಕಾಲಮುಗ್ರೋಗ್ರ ತಪಶ್ಚರಣಂಗೆಯ್ದು ಸಮಾಧಿಮರಣದಿಂದಂ ಮುಡಿಪಿ ದೇವಲೋಕದೊಳನಿಬರುಂ ಪುಟ್ಟಿದರ್ ಮತ್ತಿತ್ತ ಸಿದ್ಧಾರ್ಥರಿಸಿಯುಂ ಪನ್ನೆರಡು ವರುಷಂಬರಂ ಗುರುಗಳನಗಲದೆ ದ್ವಾದಶಾಂಗ ಚತುರ್ದಶ ಪೂರ್ವಮಪ್ಪಾಗಮಮೆಲ್ಲಮಂ ಕಲ್ತೇಕವಿಹಾರಿಯಪ್ಪೆಂ ಭಟಾರಾ ಎಂದು ಗುರುಗಳಂ ಬೆಸಗೊಂಡವರನುಮತದಿಂದೇಕವಿಹಾರಿಯಾಗಿ [೧]ಗ್ರಾಮೇ
೧೦ ಏಕರಾತ್ರಂ ನಗರೇ ಪಂಚರಾತ್ರಂ ಅಟವ್ಯಾಂ ದಶರಾತ್ರಮೆಂಬೀ ನ್ಯಾಯದಿಂ ವಿಹಾರಿಸುತ್ತಂ [೨]ಛಟ್ಠಮ ದಸಮ ದುವಾಳ[೩]ಸಾಷ್ಟೋಪವಾಸ ಪಕ್ಷೋಪವಾಸ ಮಾಸೋಪವಾಸಂಗಳಂ ಮಾಡುತ್ತಂ ಪಲಕಾಲಂ ತಪಂಗೆಯ್ಯುತ್ತಮಿರ್ದರ್

ಇತ್ತ ಜಯಾವತಿ ಮುಂ ಭಟಾರರ್ ಪೇಟ್ದಾದೇಶಮಂ ನೆನೆದು ತನ್ನ ಮನೆಯಂ ರಿಸಿಯರಂ ಪುಗಲೀಯದಂತಿರೆ ಬಾಗಿಲ್ಗಾಪಿನವರಂ ಕಲ್ಪಿಸಿದೊಳ್ ಮತ್ತೆ ಸಿದ್ಧಾರ್ಥರಿಷಿಯರ ಮೇಗೆ ಕ್ರೋಧಮಂ ಭಾವಿಸಿ ಬಾಲವದ್ಪೆಯಂ ಕೂಸಂ ಸಿಸುವನವ್ಯಕ್ತನಂ ವಿಸುಟ್ಟಿಂತು ತಪಂಬಟ್ಟಿ ಪಾಪಕರ್ಮ ದಯೆಯಿಲ್ಲದೊಂ ನಿಷ್ಕರುಣಿ ಎಂದು ಬಯ್ದುಳ್ ಮತ್ತೆ ಸುಕೌಸಳ ಸ್ವಾಮಿಯಂ ಮೊಲೆಯೂಡುವ ದಾದಿ ಸುಬ್ರತೆಯೆಂಬೊಳ್ ಸುಮತಿಯೆಂಬೊಳೂಡುವ ದಾದಿ ನಂದೆಯೆಂಬೊಳಾಡಿಸುವ ದಾದಿ ಸುಪ್ರಭೆಯೆಂಬೊಳ್ ಮಜ್ಜನಂಬುಗಿಸುವ ದಾದಿ ಮೇಘಮಾಲೆಯೆಂಬೊಳ್
೨೦ ಪಸದನಂಗೊಳಿಸುವ ದಾದಿ ಇಂತಯ್ವರ್ ದಾದಿಯರ್ಕ್ಕಳ್ ನಡಪೆ ಸುಖದಿಂದಂ
ಬಗ್ಗೆ ಬಳೆದು ಪದಿನಾಱುಂವರುಷಂಬೋಗಿ ಯೌವನವನಾದೊಡೆ ಮೂವತ್ತಿರ್ವ್ವರರಸು ಮಕ್ಕಳ ಕೂಸುಗಳನತ್ಯಂತ ಲಾವಣ್ಯಸೌಭಾಗ್ಯಕಾಂತಿಹಾವಭಾವವಿಲಾಸ ವಿಭ್ರಮಂಗಳಿಂ ಕೂಡಿದೊರಂ ಬೇಡಿಯೊಂದೆ ಪಸೆಯೊಳ್ ಮದುವೆನಿಱಿಸಿದಳ್ ಮತ್ತೇಕಶಾಲ ದ್ವಿಶಾಲ ತ್ರಿಶಾಲ ಚತುಃಶಾಲ ಸ್ವಸ್ತಿಕ ನಂದ್ಯಾವರ್ತ್ತಂ ಮೊದಲಾ ಗೊಡೆಯ ಮಾಡಂಗಳುಂ ಮೂವತ್ತೆರಟ್ಟಿಳ್ಳಿಮಾಡಂಗಳ[೪][ಳುಮು]೪ ಮಾಡಿಸಿ ತನ್ನ ಮನೆಯಂಗಣದೊಳ್ ಸೆಂಡಾಳಿಡುವ ತಟಿಯುಮಾನೆಯನೇಱುವ ವಿನೋದಂ೫ ಮೊದಲಾಗೊಡೆಯ ವಿನೋದ ಸ್ಥಾನಂಗಳೆಲ್ಲಮಂ ಮಾಡಿಸಿ ಪೊಱಮಡಲೀಯದಂತು ಕಾಪಂ ಮಾಡಿ ಮಗನೈಶ್ವರ್ಯಮಂ ವಿನೋದಮುಮನಟ್ಟಿಯಿಂದಂ ದಿವಸಕ್ಕಂ ನೋಡುತ್ತಿರ್ಕ್ಕುಮಾ ಸುಕೌಶಳ ಸ್ವಾಮಿಯುಂ ಮೂವತ್ತಿರ್ವ್ವರ್ ಪೆಂಡಿರ್ಕ್ಕಳೊಡನೆ
೩೦ ಇಷ್ಟವಿಷಯಕಾಮಭೋಗಸುಖಂಗಳಂ ಪಲಕಾಲಮನುಭವಿಸುತ್ತಿರೆ

---

೧ (ಖ) ಪ್ರತಿಯಲ್ಲಿ ನಷ್ಟವಾಗಿದೆ. ೨. ಛಷ್ಟಾಷ್ಟಮದಂ ದಶಮ ದ * * * (ಕ, ಖ, ಗ). "ಷಷ್ಠಾಷ್ಟಮದಶಮದ್ವಾದಶ" ಎಂದು ಇದಕ್ಕೆ ಸರಿಯಾದ ಸಂಸ್ಕೃತ ಪಾಠ. ೩. ಳ್ಕಂ (ಕ). ೪. ಡಲುಂ ವೈಹಾಳಿ (ಘ, ಚ, ಛ).

ಮತ್ತೊಂದು ದಿವಸಂ ಸುಕೌಶಳಸ್ವಾಮಿಯುಂ ಪೃಥ್ವೀಧರಮೆಂಬ
ಸ್ರಾಸಾದದೇಟಿನೆಯ ನೆಲೆಯ ಮೇಗೆ ತಾನುಂ ತಾಯುಂ ಸುವ್ರತೆ ಮೊದಲಾಗೊಡೆಯ
ಅಯ್ವರ್ ದಾದಿಯರುಂ ಸ್ವಯಂಪ್ರಭೆ ಮೊದಲಾಗೊಡೆಯ ಮೂವತ್ತಿವ್ವರ್
ಪೆಂಡಿಕ್ಕಳಿಂತಿನಿಬರಿಂದಂ ಪರಿವೇಷ್ಟಿತನಾಗಿ ಗವಾಕ್ಷಜಾಲಾಂತರದೊಳ್ ದಿಶಾ
ವಳೋಕನಂಗೆಯ್ಯುತ್ತಂ ಸುಖಸಂಕಥಾವಿನೋದದಿಂದಿರ್ಪನ್ನೆಗಮಿತ್ತ ಸಿದ್ಧಾರ್ಥ
ರಿಸಿಯರ್ ಗ್ರಾಮನಗರಖೇಡಖರ್ವಡಮಡಂಬ ಪತ್ತನ ದ್ರೋಣಾಮುಖಂಗಳಂ
ವಿಹಾರಿಸುತ್ತಮಯೋಧ್ಯಾನಗರಮುಂ ಬಂದು ಮಾಸೋಪವಾಸದ ಪಾರಣೆಯಂದು
ಚರಿಗೆವೊಕ್ಕು ಕಿಱುಮನೆ ಪೆರ್ಮನೆಯೆನ್ನದುಣಲ್ ತಕ್ಕ ಮನೆಗಳಂ ಯಥಾಕ್ರಮದಿಂ
ಪುಗುತ್ತಂ ಬರ್ಪರ್ ಸುಕೌಸಳಸ್ವಾಮಿಯ ಮನೆಯಂ ಪೊಕ್ಕು ಪೋಱಮಡುವರ್
ಗಿಡಿಗಿಡಿಜಂತ್ರಂ ಮಿಳಿಮಿಳಿನೇತ್ರರಪ್ಪ ಮಾಸೋಪವಾಸಂಗೆಯ್ದ ರಿಸಿಯರ್ ೧೦
ಪೋಪುದಂ ಸುಕೌಶಳಸ್ವಾಮಿ ಕಂಡೀ ಪೋಪರೇನೆಂಬರಬ್ಬಾ ಅಪೂರ್ವರೂಪರಿನ್ನರ
ನೆಂದುಂ ಕಂಡಱಿಯೆನೆಂದು ತಾಯಂ ಬೆಸಗೊಂಡೊಡೆ ತಾಯ್ ಇಂತೆಂದು
ಪೇಟ್ಪಳ್ ಮಗನೆ ಈತನಂಗಿಡಿಯಲವಡಂ ಪೆಱುಕಿ ತಿಂದು ಬಾಟ್ಪೊಂ ಬೈಕಂಗುಳಿ
ಬೇಡಿ ಪೊಟಿಲೆಲ್ಲಮಂ ತೊಟಿಲ್ದು ಬಸಿಱಂ ಪೊರೆವೊಂ ದೇಸಿಗನಾರುಮಿಲ್ಲದೊಂ
ಕೋವಣಕ್ಕಪ್ಪೊಡಂ ಭಾಗಸಮಿಲ್ಲದೊನೆಂದು ಜಯಾವತಿ ಪೇಟ್ಪೊಡೆ ಸುವ್ರತೆ
ಯೆಂಬ ದಾದಿ ಮಾಕ್ಕೊಂಡಿಂತೆಂದಳ್ ಹಾ ಪೊಲ್ಲಿದಂ ನುಡಿದಯ್ ಸ್ವಾಮಿಯಂ
ಪರಮೇಶ್ವರನಂ ನೀಂ ಮೊದಲಾಗೊಡೆಯ ಮೂವತ್ತಿವ್ವರುಮೊಪ್ಪೆಂಡಿಕ್ಕಳುಮಂ
ಮೂವತ್ತೆರಟ್ಟೊಂಟ ಕಸವರಮುಮುಂ ಕೊಳ್ಟಿಳಿದ ಪುಲ್ಲದಕ್ಕಂ ತೊಱೆವಂತನಿತು
ಮಂ ತೊಱೆದು ಕರ್ಮಕ್ಷಯಾರ್ಥಂ ತಪಂಬಟ್ಟಾತನನಿಳಿಸಿ ಪರಿಭವಿಸಿ ಮುಟ್ಟು
ಗಿಡಿಸಿ ನುಡಿಯಲ್ವೇಡೆಂದು ಬಾರಿಸಿದೊಳಂ ಜಯಾವತಿ ಕಣ್ಕೆತ್ತಿ ಬಾರಿಸಿದೊಡೆ ೨೦
ಕೆಮ್ಮಗಿದ್ದು ಪೆಱಪೆಱವನೆ ನುಡಿಯಲ್ ತಗುಳ್ದೊಡೆ ಸುಕೌಶಳಸ್ವಾಮಿಯವರಿರ್ವರ
ನುಡಿಗಳ್ ಸಗರ್ಭವಚನಂಗಳೆಂದು ತನ್ನ ಮನದೊಳೆ ಬಗೆಯುತ್ತಿರ್ಪಿನಂ
ಬಾಣಸಿಗಂ ಬಂದು ಬೋನಮೆತ್ತಿಯೋಗರಮಾಱಿದಪ್ಪುದೆಂದು ಪೇಟ್ಪೊಡೆ
ತಾಯುಂ ಸುವ್ರತೆ ಮೊದಲಾಗೊಡೆಯ ದಾದಿಯರಯ್ವರುಮಾತನ ಪೆಂಡಿಕ್ಕಳ್
ಸ್ವಯಂಪ್ರಭೆ ಶ್ರೀದತ್ತೆ ಬಂಧುಮತಿ ಭಾನುಮತಿ ಮಿತ್ರಸೇನೆ ಪ್ರಿಯಂಗು ಸುಂದರಿ
ಪ್ರಿಯದೆ ಶ್ಯಾಮಲತೆ ವಿದ್ಯುಲ್ಲತೆ ಅಚಲೆ ವಿಮಳಮತಿ ಶ್ರೀಕಾಂತೆ ಶಶಿಪ್ರಭೆ ಸೂರ
ಸೇನೆ ಅನಂತಮತಿ ಸರಸ್ವತಿ ವಿಜಯೆ ವೈಜಯಂತೆ ಅಪರಾಜಿತೆ ಕನಕಮಾಳೆ ಧಾನ್ಯೆ
ಧನಶ್ರೀ ವಸುಂಧರೆಯೆಂದಿವರ್ ಮೊದಲಾಗೊಡೆಯರೆಲ್ಲರ್ ನೆರೆದಿಂತೆಂದರ್
ವೇಳಾತಿಕ್ರಮಮಾದಪುದಾರೊಗಿಸಲ್ಕೇಟಿಮೆಂದು ನುಡಿದೊಡೆ ಸುಕೌಶಳಸ್ವಾಮಿ
ಯಿಂತೆಂದನೀ ವೃತ್ತಾಂತಮೆಲ್ಲಮನಱಿದೊಡಲ್ಲದುಣ್ಬೆನಲ್ಲೆನದಱಿಂ ಪೇಟ್ ಸುವ್ರತೆ ೩೦
ಏನಂ ಕಂಡಿರಾರುಳ್ಳುದನುಳ್ಳಂತೆ ಪೇಟೆಯಪ್ಪೊಡೆ ನಿನಗೆನ್ನಾಣೆಯೆಂದು ತನ್ನ ಮೇಗೆ

---

೧. ತಿಲಕ (ಘ, ಚ, ಛ). ೨. ಗದಿಯಲವಟು ಪೆಱುಕಿ ತಿ.... (ಕ, ಖ), ಗಡಿಯಲವಟು ಪೆಱುಕಿ ತಿ. ಬಾಳ್ವೆಂ (ಗ), ಗಡಿಯಲವಡಂ ಪಿಱುಕಿ ತಿಂದು ಬಾಳ್ವೊಂ (ಚ, ಛ). ೩. ದುಮಾ (ಕ, ಖ, ಗ). ೪. ಳದ (ಕ, ಖ, ಗ). ೫. ರ್ವ (ಕ, ಖ, ಗ).

ಸೂರುಳಿಸಿ ಬೆಸಗೊಂಡೊಡೆ ಸುವ್ರತೆಯೆಂಬೊಳ್ ಮೊಲೆಯೂಡಿದ ದಾದಿಯಿಂತೆಂದು
ಪೇೞ್ದಳ್ ಕೇಳ್ ಮಗನೆ ಇವರ್ ನಿನ್ನ ತಂದೆವಿರ್ ಸಿದ್ಧಾರ್ಥರೆಂಬೊರ್ ನೀನ್
ತೊಟ್ಟಿಲೊಳಿರ್ದ್ದಂತೆ ನಿನಗೆ ಸೆಟ್ಟವಟ್ಟಂಗಟ್ಟಿ ಸಂಸಾರಕ್ಕೆ ಪೇಸಿ ಕರ್ಮಕ್ಷಯಾರ್ಥಂ
ತಪಂಬಟ್ಟೀ ಮೆಯ್ಯಂ ನಿಱಿಸಲ್ವೀಡಿ ಪೊಟಲೊಳಗೆ ಚರಿಗೆವೊಕ್ಕು [೧]ಬಾವರಿ
ವುಗುತ್ತುಂ[೧] ಬಂದು ನಿನ್ನ ಮನೆಯಂ ಪೊಕ್ಕು ಪೊಱಮಟ್ಟು ಪೋದರೆಂದು ಪೇೞ್ದಿ
ನ್ನಾರೊಗಿಸಲ್ವೇೞ್ಕುಂ ಏೞು ಮಗನೆ ಎಂದೊಡೆ ಸುಕೌಸಳಸ್ವಾಮಿಯೆಂದನಂತ
ಪ್ಪೊಡಾನುಮವರಂತಪ್ಪ ರೂಪಂ ಕೈಕೊಂಡಲ್ಲದುಣ್ಣೆನೆಂದು ಪ್ರತಿಜ್ಞೆಗೆಯ್ದಿರ್ದೊಡೆ
ಸ್ವಜನ ಪರಿಜನ ಬಂಧುವರ್ಗಮೆಲ್ಲಂ ನೆರೆದಿಂತೆಂದರ್ ನೀನಿನ್ನುಂ [೨]ಕೂಸಯ್[೨]
ಕಾಮಭೋಗಂಗಳನುಭವಿಸುವ ದಿವಸಂಗಳ್ ತಪಂಬಡುವ ದಿವಸಮುಲ್ಲಂ
೧೦ ಪ್ರಾಯಂ ಬೋದಿಂಬಱಿಕ್ಕೆ ನಿನ್ನಮ್ಮನೆಂತು ನಿನಗೆ ಸೆಟ್ಟವಟ್ಟಂಗಟ್ಟಿ ಸಮಸ್ತ
ಭಾರಮುಂ ಸನುರ್ಪಿಸಿ ತಪಂಬಟ್ಟನಂತೆ ನೀನುಂ ನಿನಗೆ ಮಗನಾದೊಡೆ ಮಗಂಗೆ
ಸೆಟ್ಟವಟ್ಟಂಗಟ್ಟಿ ಸಮಸ್ತ ಭಾರಮುಂ ನಿರೂಪಿಸಿ ತಪಂಬಡುವುದೆಂದೆಲ್ಲರುಂ ನುಡಿ
ದೊಡಿಂತೆಂದ ನನ್ನೆಗಮೇಂ ಸಾವರೊ ಬಾೞ್ವರೊ ಎಂತಱಿಯಲಕ್ಕುಂ ಮಾನಸವಾ
ಟಿಂಬುದು ಪನಿಪುಲ್ಲ ಮುಗಿಲ ಸಂಜೆಯೊಳ್ಕೋರಂತಪ್ಪುದಱಿಂದಾರ್ ಬಾರಿಸಿದೊಡಂ
ನಿಲ್ಪೆನಲ್ಲೆಂದು ಸ್ವಯಂಪ್ರಭೆಯೆಂಬೊಳ್ ಬಸಿಱ ಪೆಂಡತಿಯಾಕೆಯ ಬಸಿಱ ಕೂಸಿಂಗೆ
ಸೆಟ್ಟವಟ್ಟಂಗಟ್ಟಿ ಮನೆಯಿಂದಂ ಪೊಱಮಟ್ಟು ರಿಸಿಯರಿರ್ದ್ದೆಡೆಯಂ ಬೆಸಗೊಳುತ್ತಂ
ಪೋಗಿ ಬಹಿರುದ್ಯಾನವನದೊಳ್ ಸ್ಫಟಿಕಶಿಲಾತಲದ ಮೇಗಿರ್ದ್ದ ಸಿದ್ಧಾರ್ಥ
ಭಟ್ಟಾರರಂ ಕಂಡು ಸುಕೌಶಳಸ್ವಾಮಿ ಜಾತಿಸ್ಮರನಾಗಿ ದರ್ಶನವಿಶುದ್ಧಿಯೊಳ್
ಕೂಡಿದ ಶುಭಪರಿಣಾಮದಿಂದಂ ಬಂದಿಸಿದಾಗಳವಧಿಜ್ಞಾನಮುಮಾಗೆ ಅವರ ತನ್ನ
೨೦ ಮುನ್ನಿನ ಭವಾಂತರಂಗಳೆಲ್ಲಮಂ ಪ್ರತ್ಯಕ್ಷಮಾಗಱಿದು ಮನದೊಳಿಂತೆಂದು ಬಗೆದ
ನಿವಂ ಮುನ್ನಿನ ಭವಾಂತರದೊಳ್ ಪ್ರಿಯದರ್ಶನನೆಂಬ ಸೆಟ್ಟ ಕಾಲಂಗೆಯ್ದು
ಮಲಯ ಸುಂದರನೆಂಬಾನೆಯಾಗಿ ಪುಟ್ಟಿದನಲ್ಲಿಂ ಬಱಿಯಂ ಕುಬೇರಕಾಂತನೆಂಬೊ
ನಾದನಲ್ಲಿಂ ಬಱಿಯಂ ವಿದ್ಯುನ್ಮಾಳಿಯೆಂಬ ವಿದ್ಯಾಧರನಾದನಲ್ಲಿಂ ಬಱಿಯಂ
ಸಿದ್ಧಾರ್ಥನೆಂಬೊನೀಗಳಾಗಿ ತಪಂಬಟ್ಟನಂತು ಸಿದ್ಧಾರ್ಥ ಭಟ್ಟಾರರ ಭವಂಗಳ್ಕೈದು
ಮತ್ತಾಂ ಮುನ್ನಿನ ಭವದೊಳ್ ಪ್ರಿಯಸೇನೆಯೆಂಬ ಮಾಲೆಗಾತ್ತಿಯೆಂ ಕಾಲಂ
ಗೆಯ್ದು ಪದ್ಮಾವತಿಯೆಂಬ ಪಿಡಿಯಾಗಿ ಪುಟ್ಟಿದೆನಲ್ಲಿಂ ಬಱಿಯಂ ವರಾಂಗನಾದೆನಲ್ಲಿಂ
ಬಱಿಯಂ ಶ್ರೀಧರನಾದೆನಲ್ಲಿಂ ಬಱಿಯಂ ಚಂಡವೇಗನೆಂಬ ವಿದ್ಯಾಧರನಾದೆನಲ್ಲಿಂ
ಬಱಿಯಂ ಸಿದ್ಧಾರ್ಥಂಗಂ ಜಯಾವತಿಗಂ ಮಗನೆನಾಂ ಸುಕೌಶಳಸ್ವಾಮಿಯಾಗಿ
ಪುಟ್ಟಿದೆನಿಂತೆನ್ನ ಭವಾಂತರಮಾಱು ಮತ್ತಾಂ ಪ್ರಿಯಸೇನೆಯಪ್ಪಂದೆನ್ನ ಕೆಳದಿ
೩೦ ಸುಕೀರ್ತಿಯೆಂಬಳ್ ಪ್ರಿಯದರ್ಶನನ ಭಾರ್ಯೆ ಕಾಲಂಗೆಯ್ದು ಮಲಯಾವತಿಯೆಂಬ
ಪಿಡಿಯಾಗಿ ಪುಟ್ಟಿದೊಳಲ್ಲಿಂ ಬಱಿಯಂ ಸುಕೇಶಿನಿಯಾದಳಲ್ಲಿಂ ಬಱಿಯಂ ಮನೋ
ಹರಿಯಾದಳಲ್ಲಿಂ ಬಱಿಯಂ ವಿರಳವೇಗೆಯೆಂಬ ವಿದ್ಯಾಧರಿಯಾದಳಲ್ಲಿಂ ಬಱಿಯಂ
ಶ್ರೀಕಾಂತೆಯಾದೊಳಾಕೆಯಂ ಸಿದ್ಧಾರ್ಥಂಗೆ ಕೊಟ್ಟುದಂತು ಶ್ರೀಕಾಂತೆಯ

೧. ತಿರಿಯುತ್ತಂ (ಳ, ಚ), ತಿರುಗುತ್ತಂ (ಛ). ೨. ಕಱುಕೂಸನ್ಗೆ (ಳ, ಚ).

ಭವಾಂತರಮಾಱಂತು ಮೂವರ ಭವಾಂತರಂಗಳನಱಿದು ಸಂಸಾರಕ್ಕೆ ವೈರಾಗ್ಯ
ಮಾಗಿ ಸಿದ್ಧಾರ್ಥ ಭಟ್ಟಾರರ ೧ಪಕ್ಕದಿ೧ ಸುಕೌಸಳಸ್ವಾಮಿ ತಪಂಬಟ್ಟಂ ಸುಪ್ರಭೆ
ಯುಟಿಯೆ ಉಟಿದ ಮೂವತ್ತಿರ್ವ್ವರ್ ಪೆಂಡಿರುಂ ಸಿದ್ಧಾರ್ಥ ಭಟ್ಟಾರರ್ ಗುರು
ಗಳಾಗೆ ಗುಣಮತಿ ಕಂತಿಯರ್ ಕಂತಿಯರಾಗೆ ತಪಂಬಟ್ಟು ಪಲಕಾಲಮುಗ್ರೋಗ್ರ
ತಪಶ್ಚರಣಂಗೆಯ್ದು ಸಮಾಧಿ ಮರಣದಿಂ ಮುಡಿಪಿ ದೇವಲೋಕದೊಳ್ ಪುಟ್ಟಿದರ್

ಮತ್ತಿತ್ತ ಜಯಾವತಿಯುಂ ತನ್ನಂ ಬಾರಿಸೆವಾರಿಸೆ ಸುಕೌಶಲಸ್ವಾಮಿ ತಪಂ
ಬಟ್ಟನೆಂದು ಮುಳಿದು ಜಿನಧರ್ಮಮಂ ಪಟಿದು೨ ಉನ್ಮಾರ್ಗೋಪದೇಶದಿಂದಾರ್ತ
ಧ್ಯಾನದೊಳ್ ಕೂಡಿ ಸತ್ತು ಮೊಗ್ಗಳಗಿರಿಯೆಂಬ ಪರ್ವತದೊಳ್ ಪೆಣ್ಬುಲಿಯಾಗಿ
ಪುಟ್ಟಿದಳ್ ಮತ್ತಿತ್ತ ಸುಕೌಸಲಸ್ವಾಮಿ ದ್ವಾದಶಾಂಗ ಚತುರ್ದಶ ಪೂರ್ವಮಪ್ಪಾಗಮ
ಮೆಲ್ಲಮಂ ಕಲ್ತು ಗುರುಗಳೊಡನೆ ಗ್ರಾಮನಗರಖೇಡಖರ್ವಡಮಡಂಬಪತ್ತನ ೧೦
ದ್ರೋಣಾಮುಖಂಗಳಂ ವಿಹಾರಿಸುತ್ತಂ ಪಲಕಾಲಂ ತಪಂಬಟ್ಟು ಮೊಗ್ಗಳಗಿರಿ
ಯೆಂಬ ಪರ್ವತಕ್ಕೆ ವಂದು ಮಟಿಗಾಲದೊಳಿರ್ವರುಮೊಂದೆ ಗುಹೆಯೊಳ್ ಜೋಗು
ಗೊಂಡು ನಾಲ್ಕು ತಿಂಗಳಿರ್ವರುಮುಪವಾಸಂಗೆಯ್ದು ಜೋಗು ನೆಱೆದೊಡೆ ಚಾತು
ರ್ಮಾಸದ ಪಾರಣೆಯಂದು ಸುಕೌಸಲಸ್ವಾಮಿಯಪ್ಪ ರಿಸಿಯರ್ ಗುಹೆಯಿಂದಂ
ಮುನ್ನ ಪೊಱಮಟ್ಟು ದೆಸೆಗಳಂ ನೋಟ್ಪರನ್ನೆಗಂ ತಾಯಪ್ಪ ಪೆಣ್ಬುಲಿ ಪಲವು
ದಿವಸಮಾಹಾರಮಂ ಪೆಱದೆ ಪಸಿದು ಮಲ್ಮಲ ಮಱುಗುತ್ತಿರ್ದ್ದ ರಿಸಿಯರಂ ಕಂಡು
ಮುಳಿದು ಮಸಗಿ ಮೇಲ್ವಾಯಲ್ ಪರಿತಪ್ಪುದಂ ಕಂಡು ಸುಕೌಸಲಸ್ವಾಮಿ ಆಹಾರ
ಶರೀರಕ್ಕೆ ಯಾವಜ್ಜೀವಂ ನಿವೃತ್ತಿಯೆಂದು ಕಾಯೋತ್ಸರ್ಗಂ ಗೆಯ್ದು

ಗಾಹೆ ॥ ಖಮ್ಮಾಮಿ ಸವ್ವಜೀವಾಣಂ ಸವ್ವೇ ಜೀವಾ ಖಮಂತು ಮೇ
ಮೆತ್ತೀ ಮೇ ಸವ್ವಭೂದೇಸು ವೇರಂ ಮಜ್ಝ ಣ ಕೇಣಚಿ ॥ ೨೦
ಮಜ್ಝ ಸಸಿಹಾವಂ ಣಾಸಿಣಂ ದಂಸಣಚರಣಂ ಣಕೋವಿ ಲಾವಳಣ್ಣಂಳ
ಜೋ ಸವ್ವಯಣಗ್ಗಾಹಿ ಸೋ ಹಂ ಣೋ ಗಾಹವೇಯಾದಾ ॥ (?)
ಛಿಜ್ಜಉ ಛಿಜ್ಜಉ ಜಾಉ ಖಉ ಜೋಇಯ ಏಹು ಸರೀರು
ಅಪ್ಪಾ ಭಾಸವಸಿಹಿ ಣಿಟ್ಮಮ್ಮಲಉ ಜೀಂ ಪಾವಹಿ ಭವತೀರು ॥

ಎಂದಿಂತು ಕ್ಷಮೆಯಂ ಭಾವಿಸಿ ಧರ್ಮಧ್ಯಾನ ಶುಕ್ಲ ಧ್ಯಾನಂಗಳಂ ಧ್ಯಾನಿಸುತ್ತಮಿರೆ
ಪುಲಿ ಬಂದು ಪಾಯ್ದು ಬಸಿಱಿಂ ಪೋಟ್ಟು ನೆತ್ತರಂ ಕುಡಿದು ತೆಗಲೆಯಂ ಪೋಟ್ಟು
ತಿನ್ಬಾಗಳ್ ಸಿದ್ಧಾರ್ಥರಿಸಿಯುಂ ಗುಹೆಯಂ ಪೊಱಮಟ್ಟು ಬಂದು ಕಂಡು ಹಾ
ಪಂಚಮಹಾಪಾತಕಿ ಮಗನನೇಕೆ ಕೊಂದು ತಿಂದೆ ಮುನ್ನೆ ಕುಂಕುಮಪಂಕಿತ
ಮಪ್ಪ ದಿಬ್ಯದೇಹದೊಳ್ ಬೆಮರ ಬಂದುಗಳಂ ಕಂಡು ನೆತ್ತರೆಂದು ಬಗೆದು
ಮೂರ್ಛೆಗೆ ಸಲ್ವಾಕೆಯೆ ಈಗಳ್ ಮಗನಂ ಪೋಟ್ಟು ತಿಂದಪ್ಪಯ್ ಅಹೊ ಕಷ್ಟಂ ೩೦
ಸಂಸಾರಮೆಂದು ಸಿದ್ಧಾರ್ಥ ಭಟ್ಟಾರರ್ ನುಡಿವ ವಚನಮಂ ಕೇಳ್ದು ವಕ್ಷಃಸ್ಥಳದ
ಶ್ರೀಲಾಂಛನಮಂ ಕಂಡು ಜಾತಿಸ್ಮರೆಯಾಗಿ ಮೂರ್ಛೆಗೆ ಸಂದು ನೀಡಱಿಂದೆಬ್ಬಿರ್ತು

---

೧. ಪಾದಮೂಲದೊಳ್ (ಘ, ಚ, ಛ). ೨. (ಖ) ದಲ್ಲಿ ನಷ್ಟವಾಗಿದೆ. ೩. ಹೋವಣೊ (ಕ). ೪. ವರಣಂ (ಕ). ೫. ವಾ (ಗ). ೬. ವಾ (ಕ). ಕೊನೆಯ ಎರಡು ಗಾಹೆಗಳು (ಖ, ಘ, ಚ, ಛ) ಗಳಲ್ಲಿ ದೊರೆಯುವುದಿಲ್ಲ.

ಹಾ ಪಂಚಮಹಾಪಾತಕಿಯೆನ್ನೆನ್ನ ಮಗನಂ ಪೋಟ್ಟು ತಿಂದೆನೆಂದು ತನ್ನಂ ತಾಂ ನಿಂದಿಸಿ ತಲೆಯಂ ಕಾಲ್ಗಳಂ ಪಾಷಾಣವೃಕ್ಷಂಗಳೊಳ್ ಶತಚೂರ್ಣಮಾಗೆ ಬಡಿದು ಕೊಂಡು ಹಾ ಮಗನೆ ಪೊಲ್ಲದಂಗೆಯ್ದೆನೆಂದು ಪ್ರಳಾಪಂಗೆಯ್ದು [೧]ಮಹಾಶೋಕಂಗೆಯ್ಯುತ್ತಿರೆ ಭಟ್ಟಾರರದರ್ಕೆ ಧರ್ಮಶ್ರವಣಂಗೆಯ್ದು ಸಂಸಾರ ಸ್ಥಿತಿಯನಱಿಯೆ ಪೇಟ್ಟು ವ್ರತಂಗಳನೇಱಿಸಿದೊಡುಪಶಮಕ್ಕೆ ಸಂದಾಹಾರ ಶರೀರಕ್ಕೆ ಯಾವಜ್ಜೀವಂ ನಿವೃತ್ತಿಗೆಯ್ದು[೧] ಶುಭಪರಿಣಾಮದೊಳ್ ಕೂಡಿ ಮುಡಿಪಿ ಸೌಧರ್ಮ ಕಲ್ಪದೊಳ್ ಪುಟ್ಟಿತ್ತು [೨]ಸಿದ್ಧಾರ್ಥರಿಸಿಯರುಂ ಸಮ್ಯಗ್ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ ಕರ್ಮಕ್ಷಯಂಗೆಯ್ದು ಮೋಕ್ಷಮನೆಯ್ದಿದರ್[೨] ಸುಕೌಸಲಸ್ವಾಮಿಯುಂ ತಿರಿಕೋಪಸರ್ಗ್ಗಮಂ ಸೈರಿಸಿ ಸರ್ವಾರ್ಥ ಸಿದ್ಧಿಯೊಳ್ ಸಯಸತ್ತಮದೇವನಾಗಿ ಪುಟ್ಟಿ
೧೦ ಮೂವತ್ತುಮೂಱು ಸಾಗರೋಪಮಾಯುಷ್ಯಮನೊಡೆಯನಪ್ಪಹಮಿಂದ್ರನಾದೊನ್

ಎಂಬಿದೆಲ್ಲಮಂ ಯಶೋಧರ ಕೇವಲಿಗಳ್ ಪೇೞೆ ಚಂಪಾಪುರಾಧಿಪತಿಯಪ್ಪ ಗಂಧಭಾಜನನೆಂಬರಸಂ ಕೇಳ್ದಾದಮಾನುಂ ಸುಂತುಷ್ಟಚಿತ್ತನಾಗಿ ಭಟಾರ ರ್ಗ್ಗಱಿಗಿ ಪೊಡೆವಟ್ಟು ಸಂಸಾರ ಶರೀರ ಭೋಗ ನಿರ್ವ್ವೇಗ ಪರಾಯಣನಾಗಿ ಧಾತ್ರಿವಾಹನನೆಂಬ ತನ್ನ ಪಿರಿಯ ಮಗಂಗೆ ರಾಜ್ಯಪಟ್ಟಂಗಟ್ಟಿ ನೂರ್ವರರಸು ಮಕ್ಕಳ್ವೆರಸು ಯಶೋಧರ ಕೇವಲಿಗಳ ಪಕ್ಕದೆ ತಪಂಬಟ್ಟಂ ಮತ್ತಪ್ಪರಸೆಯಕ್ಕರ್ಕಳೊಳೋರನ್ನರಪ್ಪರಸಿಯರಯ್ನೂರ್ವರುಂ ಯಶೋಧರ ಕೇವಲಿಗಳ್ ಗುರುಗಳಾಗೆ ಪದ್ಮಾವತಿ ಕಂತಿಯರ್ ಕಂತಿಯರಾಗೆ ತಪಂಬಟ್ಟು [೩]ಸಮಾಧಿ ಮರಣದಿಂದಂ ಮುಡಿಪಿ ಸೌಧರ್ಮಂ ಮೊದಲಾಗೊಡೆಯ ದೇವಲೋಕದೊಳ್ ಪುಟ್ಟಿದರಿತ್ತ ಗಂಧಭಾಜನ ಮುನಿಯುಂ ದ್ವಾದಶಾಂಗ ಚತುರ್ದಶ ಪೂರ್ವಮಪ್ಪಾಗಮಮೆಲ್ಲಮಂ ಕಲ್ತು ಪಲ
೨೦ ಕಾಲ[೪]ಮುಗ್ರೋಗ್ರ ತಪಶ್ಚರಣಂಗೆಯ್ದು ಗ್ರಾಮನಗರಖೇಡಖರ್ವಡಮಡಂಬಪತ್ತನ ದ್ರೋಣಾಮುಖಂಗಳಂ ವಿಹಾರಿಸುತ್ತಂ ಪೋಗಿ ಪಾಂ[೪]ಡ್ಯ[೪] ವಿಷಯದೊಳ್ [೫]ಪಳಿಕುಂತಳೆಯೆಂ[೫]ಬ ಪರ್ವತದ ಮೇಗಿರ್ದು ಬಾಹ್ಯಾಭ್ಯಂತರ ಪರಿಗ್ರಹ ಪರಿತ್ಯಾಗ ಪೂರ್ವಕಂ ಕಾಯೋತ್ಸರ್ಗಂಗೆಯ್ದು ಧರ್ಮಧ್ಯಾನ ಶುಕ್ಲಧ್ಯಾನಂಗಳಂ ಜಾನಿಸಿ ಕರ್ಮಕ್ಷಯಂಗೆಯ್ದು ಸುರಾಸುರೇಂದ್ರಕ್ಕರ್ಕಳಿಂ ಪೂಜೆಯನೆಯ್ದಿ ಮೋಕ್ಷಕ್ಕೆ ವೋದರ್

ಮತ್ತಾರಾಧಕರಪ್ಪವರ್ಗಳ್ ಸುಕೌಶಲಸ್ವಾಮಿಯ ತಿರಿಕೋಪಸರ್ಗಮಂ ಮನದೆ ಬಗೆದುಪಸಿವುಂ ನೀರಟ್ಟೆಗಾಹವಾತಂ ಸೂಲೆಯೆಂದಿವು ಮೊದಲಾಗೊಡೆಯ ವೇದನೆಗಳಂ ಸೈರಿಸಿ ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ ಸಮಾಧಿ ಮರಣದಿಂ ಮುಡಿಪಿಯಭ್ಯುದಯ ನಿಶ್ರೇಯಸ ಸುಖಂಗಳನೆಯ್ದುಗೆ

---

೩೦ ೧. ಈ ಭಾಗ (ಕ, ಖ, ಗ) ಪ್ರತಿಗಳಲ್ಲಿಲ್ಲ. ಇದಕ್ಕೆ ಬದಲಾಗಿ "ತೊಱೆದು" ಎಂದಿಷ್ಟೇ ಇದೆ. ೨. ಈ ಭಾಗ (ಕ, ಖ, ಗ) ಪ್ರತಿಗಳಲ್ಲಿಲ್ಲ. ೩. ಈ ಭಾಗ (ಕ, ಖ, ಗ)ಗಳಲ್ಲಿಲ್ಲ. ೪. ಡು (ಘ, ಚ, ಛ). ೫. ಪಿಳಿಕುಂಥಮೆಂ (ಘ, ಚ, ಛ).

(೩) ಗಜಕುಮಾರನ ಕಥೆ

ಗಜಕುಮಾರನ ಕಥೆಯಂ ಪೇೞ್ವೆಂ:

ಗಾಹೆ ॥ ಭೂಮಿಾಎ ಸಮಂ ಖೀಲಾಭಾಇದದೇಹೋವಿ ಅಲ್ಲಚಮ್ಮಂ ವ ।
ಭಗವಂ ಪಿ ಗಜಕುಮಾರೋ ಪಡಿವಣ್ಣೋ ಉತ್ತಮಂ ಅಟ್ಠಂ ॥

[೧ಭೂಮಿಾ ಎ ಸಮಂ – ನೆಲದೊಳೋರಂತಾಗೆ ಮಲಚ್ಚಿರ್ಕ್ಕೆಯುರದಿಂ ತಗುಳ್ದು ನಾಭಿವರೆಗಂ ಬಸಿಱಿಂ ಪೋೞ್ದು, ಅಲ್ಲಚಮ್ಮಂ – ಪಂದೊವಲಂ ತೆಗೆದು, ಖೀಲಾಭಾಇದದೇಹೋವಿ೧– ಕಾಯ್ದ ಕರ್ಬ್ಬಿನ್ನ ನಿಡಿಯವುಂ ತೋರಮುಮಪ್ಪ ಕೀೞ್ಗಳಿಂದಂ ಮೆಯ್ಯೆಲ್ಲಮುಂ ನಿರಂತರಮುರ್ಚಿ ಪೋಗಿ ನೆಲನಂ ೨ತಾಪಿನಂ ಕೀೞಿಱಿಯೆಪಟ್ಟ ಮೆಯ್ಯನೊಡೆಯನಾಗಿಯುಂ, ಭಗವಂ–ಪಿರಿದಪ್ಪ ಪೆರ್ಮೆಯನೊಡೆಯಂ, ಗಜಕುಮಾರೋಪಿ–ಗಜಕುಮಾರನುಂ, ಪಡಿವಣ್ಣೋ– ಪೊೞ್ದಿರ್ದಿ ದೊಂ, ಉತ್ತಮಂ ಅಟ್ಠಂ– ಮಿಕ್ಕದರ್ಶನ ಜ್ಞಾನ ಚಾರಿತ್ರಂಗಳಾರಾಧನೆಯಂ] ಅದೆಂತೆಂದೊಡೆ :

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ಸುರಳ್ಟಳೆಮೆಂಬುದು ನಾಡಲ್ಲಿ ದ್ವಾರಾವತಿಯೆಂಬುದು ಪೊಟಿಲದನಾೞ್ವೊಂ ೩ವಿಷ್ಣು ಅರ್ಧ ಚಕ್ರಿ೪ಯಾತನ ತಂದೆ ವಸುದೇವ ಸ್ವಾಮಿಯೆಂಬೊನಾ ೫ವಸುದೇವಸ್ವಾಮಿಯಱಸಿ ಗಾಂಧರ್ವದತ್ತೆಯೆಂಬೊಳಾಯಿರ್ವರ್ಗರ್ಂ ಗಜಕುಮಾರನೆಂಬೊಂ ಮಗ೬ನಪ್ಪೊನಂತವರ್ಗಳಿಷ್ಟ ವಿಷಯಕಾಮಭೋಗಂಗಳನನುಭವಿಸುತ್ತಂ ಕಾಲಂ ಸಲೆ ಮತ್ತಿತ್ತ ಸೂರದತ್ತ ಮೆಂಬುದು ನಾಡಲ್ಲಿ ಪೌದನಪುರಮೆಂಬುದು ಪೊಟಿಲದನಾೞ್ವೊನಪರಾಜಿತನೆಂಬೊನರಸ೭ನಾದಮಾನುಂ ಪ್ರಚಂಡ ಬಳಗರ್ವಿತನಾರುಮನುಱಿದೊಂ ವಿಷ್ಣು೮ರಂ ಬೆಸರ್ಕೆಯ್ಯನೊಂದು ದಿವಸಂ ವಿಷ್ಣು ಪೊಟಿಲೊಳ್ ೯ಗೋಸಣ್ಣೆಯಂ ತೊಟ್ಟಿ೧೦ಲ್ಚಿದ ನಾ೧೦ವನೊರ್ವಂ ಪೌದನಪುರಾಧಿಪತಿಯಪ್ಪ ಪರಾಜಿತನಂ ಸಂಗ್ರಾಮದೊಳ್ ಕಾದಿ ಗೆಲ್ದು ಪಿ೧೧ಡಿ೧೧ಕೊಂಡು ಬರ್ಕುಮಾತಂಗೆಯಾತನ ಬೇಡವುದೆಲ್ಲಮುಂ ಕುಡುವೆನೆಂದು ತೊಟಿಲ್ವ ಗೋಸಣೆಯಂ ಗಜಕುಮಾರಂ ಪಿಡಿದೊಡಾ ಮಾತನರಸಂ ಕೇೞ್ದು ಗಜಕುಮಾರನಂ ಕರೆಯಿಸಿಯಾತನೊಡನೆ ಚಾತುರ್ದಂತ ಬಳಮಂ ಕೂಡಿಯಟ್ಟಿದೊಡಾತನುಂ ಪೋಗಿಯಪರಾಜಿತನೊಡನ ಮಹಾಯುದ್ಧಂಗೆಯ್ದು ಗೆಲ್ದು

---

೧. ಭೂಮಿಾಎ – ಸಮನೆಲ ತೆವರಂ, ಅಲ್ಲಚಮ್ಮಮಂ ಪಪಟಿ – ಒರ್ವನ ತೋಳಂ ತೆಗಪು, ನಿರಖಾ ಇರದೇಹೋಪಿ (ಪು, ಚ, ಛ,). ೨. ತಾಂಗ (ಪು, ಛ). ೩. ೞಿ (ಕ, ಖ, ಗ.) ೪. ಥ (ಪು, ಚ, ಛ). ೫. ವಿಷ್ಣು ಅರ್ಧಚಕ್ರವರ್ತಿ (ಗ), ವಿಷ್ಣುವರ್ಧನ ಚಕ್ರವರ್ತಿ (ಪು, ಛ), ಅರ್ಧ ಚಕ್ರವರ್ತಿಯಪ್ಪ ವಿಷ್ಣುವೆಂಬನಾ (ಚ). ೬. ತನ (ಪು, ಚ, ಛ). ೭. ಕ, ಖ, ಗ)ಗಳಲ್ಲಿ ಇಲ್ಲ. ೮. ಗಮಿಂಬು (ಪು, ಚ, ಛ). ೯. ಘೋಷಣೆ (ಕ, ಖ, ಗ). ೧೦. ಟ್ಟಿಯಾ (ಕ, ಖ, ಗ). ೧೧. ಡಿದು ಕಟ್ಟ (ಪು, ಛ).

ಪೆಡಂಗೆಯ್ಯುಡಿಯೆ ಕಟ್ಟಿ ಗಜತುರಗವಸ್ತುವಾಹನ ಸಹಿತಂ ತಂದು ವಿಷ್ಣುಗೊಪ್ಪಿಸಿ ದೊಡಾತನುಮೊಸೆದು ನೀನ್ ಮೆಚ್ಚಿದುದಂ ಬೇಡಿಕೊಳ್ಳಿನೆ ಪೆಱತೇನುಮನೊಲ್ಲೆನ್ ನಿಮ್ಮ ಪ್ರಸಾದದಿಂದೆನಗೆಲ್ಲಮುಂಟು ಒಂದಂ ಬೇಟ್ಪೆಂ ನಿಮ್ಮಂತಃಪುರಮುಟಿಯೆ ಪೊಟಲೊಳಗೆನ್ನ ಮೆಚ್ಚಿದ ಪೆಂಡಿರನೆ ಕೊಂಡೆನ್ನಿಚ್ಚೆಯೊಳ್ ಮೆಚ್ಚಿದಂತೆ ಬಾೞ್ವೆನೀ ದಾಯಮಂ ಬೇಡಿರ್ದೆನಿದನೆನಗೆ ದಯೆಗೆಯ್ದು ಸಲಿಸುವುದುದೆಂದೊಡರಸನುಮಂತೆಗೆಯ್ಯೆಂದು ಗಜಕುಮಾರಂಗೆ ಬೇಡಿದುದಂ ಕೊಟ್ಟಂ

ಗಜಕುಮಾರನುಂ ತನ್ನ ಬೇಡಿದ ವರಮುಂ ಪೆತ್ತು ಪರದರ ಪಾರ್ವರೊಕ್ಕಲಿಗರ ಸಾಮಂತರ ಪೊಟಲೊಳಗುಳ್ಳ ಒಪ್ಪಿಂಡಿರೆಲ್ಲರಂ ಕಣ್ಗಂ ಮನಕ್ಕಂ ಮೆಚ್ಚಿದವರೊಳ್ ತನ್ನಿಚ್ಚೆಯಿಂದಂ ಮೊಱೆದು ಮೊಟ್ಟಯಿಸಿ ಯುಯ್ದು ಬಾೞ್ತಿರೆ ಮತ್ತಮಾ ಪೊಟಲೊಳ್ ೪ಪಂಗುಳಿನೆಂಬ ಸುವರ್ಣಗಾಱಿನ ಪೆಂಡತಿ ವಸುಂಧರಿಯೆಂಬೊಳತ್ಯಂತ ರೂಪಲಾವಣ್ಯಸೌಭಾಗ್ಯಕಾಂತಿ ಹಾವಭಾವವಿಲಾಸ ವಿಭ್ರಮಂಗಳನೊಡೆಯೊಳಂ ಕಂಡು ಗಜಕುಮಾರನಾಕೆಗಾಟಿಸಿ ತನ್ನ ಮನೆಯೊಳಿಟ್ಟಾಕೆಗಾಸಕ್ತನಾಗಿ ಬಾೞುತ್ತಿರ್ಪುಮಾ ಎರಣಿಗನುಂ ಪೆಂಡತಿಯ ವಿಯೋಗದೊಳ್ ಸಂತಾಪದಿಂದಮಿರುಳುಂ ಪಗಲುಮನವರತಂ ಬೇಱ[ಯು]ತ್ತಮಸಮರ್ಥನಪ್ಪುದಱಿಂದಂ ಮನದೊಳ್ ಗಜಕುಮಾರಂಗೆ ಮುಳಿಯುತ್ತಿರ್ಪುಂ

ಇಂತು ಪಲಕಾಲಂ ಸಲೆ ಮತ್ತೊಂದು ದಿವಸಮರಿಷ್ಟನೇಮಿ ಭಟ್ಟಾರರ ಸಮವಸರಣಂ ವಿಹರಿಸುತ್ತಂ ದ್ವಾರಾವತಿಗೆ ವಂದೊಡೆ ವಿಷ್ಣುವಿನೊಡನೆ ಗಜಕುಮಾರಂ ತ್ರಿಭುವನ ಪರಮೇಶ್ವರನಲ್ಲಿಗೆ ವೋಗಿ ವಂದಿಸಿ ಪೂಜಿಸಿರ್ದು ಭಟಾರರ್ ಧರ್ಮಮಂ ಪೇೞ್ವಿಲ್ಲಿಯಗವ್ಯಾಗಮನಂ ಗೆಯ್ವೊಡಂ ಪೆಱರ ಸಜ್ಜನಂಗಳೊಳ್ ಬಿರ್ದೊಡಮೆಯ್ದುವ ದುರ್ಗತಿಗಳೊಳಪ್ಪ ದುಃಖಂಗಳಂ ಪೇೞ್ದು ಕೇಳ್ದು ನಾವ್ಯಥಾಜಿನಭಾಷಿತಮೆಂದು ನಂಬಿ ಭೋಗಂಗಳ್ಗೆ ಪೇಸಿ ವೈರಾಗ್ಯಮಾಗಿ ಎಲ್ಲಮಂ ತೊಱೆದರಿಷ್ಟನೇಮಿ ಭಟ್ಟಾರರ ಪಕ್ಕದೆ ತಪಂಬಟ್ಟುಗ್ರೋಗ್ರ ತಪಶ್ಚರಣಂಗೆಯ್ದು ಪನ್ನೆರಡು ವರ್ಷಂ ಪೋದೊಡೆ ೯ಗ್ರಾಮನಗರಖೇಡಖರ್ವಡಮಡಂಬಪಟ್ಟಣ ದ್ರೋಣಾಮುಖಂಗಳಂ೯ ವಿಹರಿಸುತ್ತಂ ಮತ್ತಮಾ ದ್ವಾರಾವತಿಗೆ ವಂದು ೯ಶೇವತೋದ್ಯಾನ ವನದೊಳ್ ರಾತ್ರಿ ಪ್ರತಿಮೆನಿಂದೊನಂ ಸ್ವಜನ ಪರಿಜನ ಬಂಧುವರ್ಗಮುಂ ಶ್ರಾವಕರ್ಕಳುಂ ಬಂದರ್ಚಿಸಿ ಪೊಡೆವಂಟು ಪೋಪರಂ ೧೦ಪಂಗುಳ೧೦ನೆಂಬ ಸುವರ್ಣಕಾರಕಂ ಕಂಡು ಬೆಸಗೊಂಡು ಭಟಾರರ ಬರವಂ ಕೇೞ್ದಱಿದು ಪಗೆ೧೧ವನ೧೧ನಿಱಿಯಲ್ಪೆತ್ತೆನೆಂದು ರಾಗಿಸಿ ಪಲವು ನಿಡಿಯವುಂ ಘೋರಮುಮುಪ್ಪ ಕರ್ಬ್ಬಿನ್ನ ಕೇಲ್ಗಳಂ ಕೊಂಡು ಬಂದು ಕ್ಷಮಾಂಗನಾಲಿಂಗಿತ

೧. ದುದಂ (ಛ). ೨. ದ ಮೆಳೆದು (ಕ,ಖ,ಗ), ದಂ ಮೆಱೆದು (ಘ, ಚ). ೩. (ಘ, ಚ, ಛ) ಗಳಲ್ಲಿಲ್ಲ. ೪. ಪಿಂಗಲ (ಘ, ಚ), ಪಿಂಗಳ (ಛ). ೫. ಕಾರ (ಘ, ಚ), ಕಾರಕ (ಛ). ೬. ವು (ಕ,ಖ,ಗ,ಘ,ಜಞ), ಡು (ಛ). ೭. ರ್ದುಗೆಯ್ದ (ಚ), ರ್ದಡುಮೆಯ್ದುವ (ಕ,ಖ,ಗ). ೮. (ಘ) ಬಲ್ಲಿ ಇಲ್ಲ; ಗ್ರಾಮೇಳರಾತ್ರಂ ನಗರೇ ಪಂಚರಾತ್ರಮಟವ್ಯಾಂ ದಶರಾತ್ರಮೆಂಬೀ ನ್ಯಾಯದಿಂ ಶಾಖಾ ದೇಶಂಗಳಂ (ಚ, ಛ). ೯. ಪ್ರಮುಖೋ (ಘ, ಚ, ಛ). ೧೦. ಪಿಂಗಲ (ಘ, ಚ, ಛ)॰ ೧೧. ಯು (ಕ, ಖ, ಗ).

ನಪ್ಪ ಮಹಾಮುನಿಯಂ [೧]ಮಲಚ್ಚಿ[೧] ಪಟ್ಟಿರಿಸಿಯುರಃಸ್ಥಲಮಂ ನಾಭಿವರೆಗಂ [೨]ವಿದಾರಿಸಿ ಪಂದೊವಲ್ ಪೊರೆತಾಪಿನೆಗಂ[೨] ಸಮ[೩]ನ್ತ[೩]ವಯವ ಪ್ರದೇಶಂಗಳೊಳ್ ಕಾಯ್ದು ಕರ್ಬೊಪ್ಪ ಕೀಲ್ಗಳಂ ನೆಲನಂ ತಾಪಿನಮುರ್ಚಿಪೋಗಿ[೪]ಲಿ[೪]ಜೊಡೆ ಕ್ಷಮೆಯಂ ಭಾವಿಸಿ ಧರ್ಮಧ್ಯಾನ ಶುಕ್ಲಧ್ಯಾನಂಗಳಂ ಜಾನಿಸಿ ರತ್ನತ್ರಯಮಂ ಸಾಧಿಸಿ ಸಮಾಧಿಮರಣದಿಂ ಮುಡಿಪಿ ದೇವಲೋಕಮೆಂಬ ಪ್ರಾಸಾದಕ್ಕೆ ಕಳಸಮಾಗುತ್ತಿರ್ದ್ದ ಸರ್ವಾರ್ಥಸಿದ್ಧಿಯೆಂಬ ಸ್ವರ್ಗದೊಳ್ ಮೂವತ್ತಮೂಲು ಸಾಗರೋಪಮಾಯುಷ್ಯ ಸ್ಥಿತಿಯನೊಡೆಯನೇಕ ಹಸ್ತಪ್ರಮಾಣನುಂ [೫]ಪುಂಡಂಕ ವರ್ಣ[೫]ಂಗಳನೊಡೆಯೊ[೫]ನಹಮಿಂದ್ರ ದೇವನಾಗಿ ಪುಟ್ಟಿದೊಂ

ಮತ್ತಂ ಪೆಱರುಮಾರಾಧಕರಪ್ಪವರ್ಗಳ್ ಗಜಕುಮಾರನ ಮನುಷ್ಯಕ್ಕೇಱಿ ಸರ್ಗದೊಳಾದ ವೇದನೆಯಂ ಮನದೊಳ್ ಭಾವಿಸುತ್ತಂ ಪಸಿವು ನೀರಬ್ಬೆ ದಾಹ ವಾತಂ ಸೂಲೆ ಮೊದಲಾಗೊಡೆಯ ವೇದನೆಗಳಂ ಸೈರಿಸಿ ದರ್ಶನ ಜ್ಞಾನ ಚಾರಿತ್ರಗಳಂ ಸಾಧಿಸಿ ಸಮಾಧಿಮರಣದಿಂದಂ ಮುಡಿಪಿ ಸ್ವರ್ಗಾಪವರ್ಗ ಸುಖಂಗಳನೆಯ್ದುಗೆ

ಮುರಲ್ಚಿ (ಘ, ಛ), ಮುರಲ್ಚಿ (ಙ). ೨. ಬಂಡೋಲ್ತೊಲುಗಿದು (ಕ, ಖ, ಗ). ವಿಪರೀತವಾದ ದೊಲ್ಪರಿತಾಪಿನೆಗಂ (ಘ, ಛ). ೩. ಸ್ತ (ಕ, ಖ, ಗ). ೪. ೪ (ಛ). ೫. (ಕ, ಖ, ಗ) ಗಳಲ್ಲಿಲ್ಲ.

(೪) ಸನತ್ಕುಮಾರ ಚಕ್ರವರ್ತಿಯ ಕಥೆ

ಸನತ್ಕುಮಾರ ಚಕ್ರವರ್ತಿಯ ಕಥೆಯಂ ಪೇೞ್ವೆಂ:

ಗಾಹೆ॥ ೧ಕಚ್ಚು೧ಜರಖಾಸ ಸೋಸೋ ಭತ್ತಚ್ಛದಿ ಅಚ್ಛಿಕುಚ್ಛಿದುಕ್ಖಾಣಿ ।
ಅ೨[ಧಿಯಾಸಿ]೨ದಾಣಿ ಸಮ್ಮಂ ಸಣಂಕುಮಾರೇಣ ವಾಸಸದಂ ॥

[೩ಕಚ್ಚು–ಕೆರಕುಂ, ಜರ–ನರೆಯುಂ,೩ ಖಾಸ–ಕೆಮ್ಮುಂ, ಸೋಸೋ–ಬಾಯ್ ಬತ್ತುವುದುಂ, ಭತ್ತಚ್ಛದಿ–ಛರ್ದಿಯುಂ, ಅಚ್ಛಿಕುಚ್ಛಿದುಕ್ಖಾಣಿ–ಕಣ್ಣು ಬಸಿಱು ಬೇನೆಗಳುಮೆಂದಿವು ಮೊದಲಾಗೊಡೆಯ, ಅ[ಧಿಯಾಸಿ]ದಾಣಿ–ಸೈರಿಸೆ ಪಟ್ಟವು, ಸಮ್ಮಂ–ಒಳ್ಳಿತ್ತಾಗಿ, ಸಣಂಕುಮಾರೇಣ–ಸನತ್ಕುಮಾರ ಚಕ್ರವರ್ತಿರಿಸಿಯಿಂದಂ, ವಾಸಸದಂ–ನೂಱು ವರುಷಂ]

೧೦ ಅದೆಂತೆಂದೊಡೆ:

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ಕುರುಜಾಂಗಣಮೆಂಬುದು ನಾಡಲ್ಲಿ ಹಸ್ತಿನಾಪುರಮೆಂಬುದು ೪ಪೊಲಿಲ೪ದನಾಳ್ವಂ ವಿಶ್ವಸೇನ ಮಹಾರಾಜನೆಂಬರಸ ನಾತನ ಮಹಾದೇವಿ ಸಹದೇವಿಯೆಂಬೊಳಾಯಿರ್ವ್ವರ್ಗ್ಗಂ ಸನತ್ಕುಮಾರನೆಂಬೊಂ ೫ಪುಟ್ಟಿದೊನಾತಂ ಸರ್ವಲಕ್ಷಣಸಂಪೂರ್ಣಂ ಸಕಳಕಳಾಪಾರಗಂ ಚೆಲ್ವಿನಿಂ ದೇವಾಸುರಕ್ಕೞ್ಕಳಂ ಗೆಲ್ವ ರೂಪನೊಡೆಯನಾತಂಗೆ ಕೆಳೆಯಂ ಸಿಂಹವಿಕ್ರಮನೆಂಬ ಸಾಮಂತನ ಮಗಂ ಮಹೇಂದ್ರಸಿಂಹನೆಂಬೊನಂತವರ್ಗ್ಗನ್ಯೋನ್ಯ ಪ್ರೀತಿಯಿಂದಂ ಕಾಲಂ ಸಲೆ

ಮತ್ತೊಂದು ದಿವಸಂ ಏಕಚಕ್ರಪುರಾಧೀಶಂ ಭೂರಾಮನಾಮಧೇಯನಪ್ಪ ೬ಶತ್ರುಂದಮಂ೬ ವಿಶ್ವಸೇನ ಮಹಾರಾಜಂಗೆ ಪಾಗುಡ೧೦ಮನಟ್ಟಿ೧೦ಪಟ್ಟ೧೧ವಾರ
೨೦ ಮರಗಮೆಂಬ೧೧ದುಷ್ಟಾಶ್ವಮಂ ಕುಮಾರನೇಱಿ ಲಕ್ಷ್ಮೀಗೃಹಮೆಂಬುದ್ಯಾನವನದ ಮಧ್ಯ೧೨ಸ್ಥಮಪ್ಪ[ಸ್ಥಲದೊಳ್]ಸಲ್ವನಾ ದುಷ್ಟಾಶ್ವಮಂ ಕೊಸೆಗೊಳೆ ಗಾಳಿಯಿಂದಂ ಬೇಗಮಾಗಿ ವಾರಿತಪೂರಿತಂ ಪರಿದು ಕುಮಾರನಂ ಕೊಂಡು ಮಹಾಟವಿಯಂ ಪೊಕ್ಕೊಡಿತ್ತ ವಿಶ್ವಸೇನ ಮಹಾರಾಜನ ಮಹಾಸಾಮಂತಕ್ಕೞ್ಕಳುಂ ಪರಿವಾರಮು ಮೆಲ್ಲಂ ಕುದುರೆವಡಿವಜ್ಜೆಯಂ ನೋಡಿ ನಾಡೆ*ಗೆಟ್ಟುಪೋಗಿ೧೨ಮೂಱನೆಯ ದಿವಸದಂದು ಅಡಿವಜ್ಜೆ ಕೆಟ್ಟೊಡೆ ಪೋದ ದೆಸೆಯನಱಿಯದೆ ಹಾ ಪುತ್ರಾ ಎಂದು ಮಹಾ

---

೧. ಕಂಛಂಕಂ ಕಂಛ (ಘ, ಚ, ಛ). ೨. ಡಿಹಾಸಿ (ಕ, ಖ, ಗ), ವಿಹಾಸ (ಘ, ಚ, ಛ). ೩. ತಪ್ಪ-ಕೆರಕುಂ ಜ್ವರಮೆಯ್ಗುಳುಂ (ಕ, ಖ, ಗ), ಕಂಛಂಕಂ-ಕೆರಕುಂ ಜ್ವರನರೆಯುಂ (ಛ). ೪. ಪುರಮು (ಕ, ಖ, ಗ). ೫. +ಮುಗಂ (ಛ). ೬. ೞ್ಕಂ (ಗ). ೭. ಗ (ಕ, ಖ, ಘ). ೮. ಧಿಪತಿ (ಕ, ಖ) ಧಿಪಂ (ಗ). ೯. ಶತ್ರುವಿಂದಂ (ಕ, ಗ). ಶತ್ರುವಿಂದಂ (ಖ). ೧೦. ಮಟ್ಟಿ (ಕ, ಖ, ಗ).
೩೦ ೧೧. ವಾರಕುರಗವೆಂಬ (ಗ), ವಾಂತ (ಘ, ಛ), ವಾಹನ (ಙ). ೧೨. ಈ ಭಾಗ (ಕ,ಖ,ಗ) ಗಳಲ್ಲಿ ಮಾತ್ರವಿಡಿದ; ಸ್ಥಲದೊಳ್ ಕುಮಾರನಂದು ದುಷ್ಟಾಶ್ವಮೆತ್ತಿ ಕೊಂಡು ಪೋಗೆ (ಘ, ಚ), ಸ್ಥಿತಿಕದೊಳು (ಛ). *ಗೆಂಟು ಎಂದಿರಬಹುದೆ?

ದುಃಖಾಕ್ರಾಂತನಾಗಿ ಪ್ರಲಾಪಂಗೆಯ್ವ ನೃಪತಿಯಂ ಮಹೇಂದ್ರಸಿಂಹಂ ಸಂತ
ಯಿಸಿ ಇಂತೆಂದು ನುಡಿದಂ ಕುಮಾರನಂ ಪಾತಾಳಮಂ ಪೊಕ್ಕನಪ್ಪೊಡಮಲಿಸಿ
ಕೊಂಡು ಬಪ್ಪೆಂ ನಿಮ್ಮಡಿ ನೀಮುಬ್ಬಿಗಂಬಡದೆ ಮಗುಟಿಮೆಂದರಸನಂ ಮಗುಟ್ಟಿ
ಪರಿವಾ೧ರಂಬೆರಸು೧ ಮಹಾಟವಿಯಂ ೨ಪೊಕ್ಕು೨ ತೊಟಲ್ದು ನೋ೩[ಟ್ಪಿ]೩ನಂ
ಪರಿಜನಂಗಳ್ ಕುಮಾರನನಱಿಸಿ ಕಾಣದೆ ಬೇಸತ್ತು ಮಹೇಂದ್ರಸಿಂಹನಂ
ಬಿಸುಟ್ಟು ಪೊಟಲ್ಗೆ ವೋದರ್

ಇತ್ತ ಮಹೇಂದ್ರಸಿಂಹನೊರ್ವನೆ ನಾನಾ ವಿಧ ಗಿರಿಗಹನ ವಿಷಯ
ವಿಷಮ ಪ್ರದೇಶಂಗ೫[ಳುಮಂ]೫ ವ್ಯಾಧನಿವಾಸಂಗ೫[ಳುಮಂ]೫ ಯಥಾ೬ಕ್ರಮ
ದಿಂದಂ೬ ಕಟಿದು ಪೋಗಿ ಪ್ರಿಯಂಗು೭ಷಂಡ೭ಮೆಂಬ ವನಮನೆಯಿದ್ದ ತದ್ವನ
ಮಧ್ಯಸ್ಥ ಗೃಹದೊಳಿರು೮ಳಿದ್ದುರ್ ಮಿತ್ರನ ವಿಯೋಗದೊಳಪ್ಪ ದುಃಖದಿಂದಂ ೧೦
ಕಾರುಣ್ಯಮಾಗೆ ಪ್ರಳಾಪಂ ಗೆಯ್ದ೯ಟ್ಟು೯ ದೇವತೆಯ ಮುಂದೆ ನಿದ್ರೆಗೆಯ್ದೊಂ
ಮನೋಹರಿಯೆಂಬ ಜಾವ೧೦ದಾಗಳ್೧೦ ಕರಿಣೀ ಶತಂಗಳಿಂ ಪರಿವೇಷ್ಟಿತನಾಗಿ
ತಿಳಿನೀರ ಕೊಳದೊಳಗೆ ಕ್ರೀಡಿಸುವ ಸೊಕ್ಕಾನೆಯುಮಂ ಫಲಭರಿತಮಾದ
ಮಾವಿನಮರನುಮಂ ಕನಸಿನೊಳ್ ಕಂಡು ಮನೋರಥ ಸಿದ್ಧಿಯಾಯ್ತೆಂದು ಒಸೆದು
ಮಗುಟ್ಟಿ ನಿದ್ರಾವಶಗತನಾದೊನಂ ಕಂಡು ಕರುಣಿಸಿ ಭೂತಾಂಬರನೆಂಬ ವ್ಯಂತರ
ದೇವನೆತ್ತಿಕೊಂಡು ಪೋಗಿ ವಿಜಯಾರ್ಧ ಪರ್ವತಕ್ಕಾಸನ್ನಮಪ್ಪ ಭೂತರಮಣ
ಮೆಂಬ ವನದ ನಡು೧೧ವಿನೊಳಿದ್ದ೧೧ ಕ್ಷುಲ್ಲಕಮಾನಸಮೆಂಬ ಸರೋವರದ ತಡಿ
ಯೊಳಿಕ್ಕಿ ಪೋದನ್

ಆಗಳಾತನುಂ ನೇಸಮ್ಮೂಡುವಾಗಳ್ ತೂಂಕಡುಗೆಟ್ಟು ದೆಸೆಗಳಂ
ನೋ೧೨ಟ್ಪಿಂ೧೨ ಸಮುದ್ರದೊಳೋರಂತಪ್ಪ ೧೩ಕೋಕನದ೧೩ ಕುಮುದ ಕುವಲಯ ೨೦
ಕಲ್ಹಾ೧೪ರೇಂದೀವರಾದಿಗಳಿಂದಂ೧೪ ಹಂಸ ಚಕ್ರ೧೫ವಾ೧೫ಕ ಬಳಾಕವಿಪಕ್ಷಿಗಣಂ
ಗ೧೬ಳ್೧೬ ನೀರೊಳಗಾಡುತ್ತಿಂ೧೭ ಮುಟುಗುತ್ತುಂ ನಾನಾ ಪ್ರಕಾರದಿಂ೧೮ದಂ
ಮಾ೧೮ಜುಲಿವ ದನಿಗಳಿಂದಮತಿರಮಣೀಯಮಪ್ಪ ಕೊಳನಂ ಕಂಡಾದಮಾನುಂ
ವಿಸ್ಮಯಚಿತ್ತನಾಗಿ ೮ ಭೂತರಮಣವೆಂಬ ವನದೊಳಶೋಕ ಪುನ್ನಾಗ ವಕುಲ
ಚಂಪಕಸಹಕಾರಲವಂಗ ಕ್ರಮುಕ ನಾಳಿಕೇರನಾಗವಲ್ಲೀ೧೯ಪಿನದ್ಧ೧೯ ದ್ರುಮಷಂಡ
ಮಂಡಿತ೨೦ಮನಿಂ೨೦ ದ್ರವನದೊಳೋರಂತಪ್ಪುದಂ ನೋಡುತ್ತುಂ ತೊಟಲ್ವೊಂ
ತನಗನುಕೂಲಮಪ್ಪ ಶಕು೨೧ನನಿಮಿತ್ತಂಗ ೨೧[ಳುಮಂ]೨೧ ಕಂಡಿಂದಮೋಘಮೆನ್ನ
ಸ್ವಾಮಿಯಂ ಕಾಣ್ಬೆನೆಂದು ಸಂತುಷ್ಟಚಿತ್ತನಾಗಿಯಾ ಬನದ ನಡುವೆ ತೊಟಲ್ವೊಂ

---

೧. ರಜನಂಗಳಿಂ ಬೆರಸಿ (ಕ, ಖ, ಗ). ೨. (ಕ, ಖ, ಗ)ಗಳಲ್ಲಿಲ್ಲ. ೩. ಪ್ಪ (ಕ, ಖ, ಗ).
೪. +ವಾರ (ಕ, ಖ, ಗ). ೫. ಳ್ಮಂ (ಸ). ೬. ಮ್ಮಂಗಳಿಂ (ಕ, ಖ, ಗ). ೭. ಷ್ಮ (ಘ, ಚ, ಛ). ೩೦
೮. ಳ್ (ಘ, ಚ). ೯. ಟ್ಟು (ಕ, ಖ, ಗ, ಛ). ೧೦. ದೊಳ್ (ಘ, ಚ). ೧೧. ವೆ (ಚ, ಛ).
೧೨. ಳ್ಪನ್ನಿಗಂ (ಚ). ೧೩. ಕೊಳದ (ಘ). ೧೪. ರ ಕಲ್ಹಾಮರೇಂದ್ರ ದೇವಾದಿಗಳಿಂದಂ (ಕ,ಖ,ಗ).
೧೫. ಬ (ಘ). ೧೬. ಳಿಂದಂ (ಕ, ಖ, ಗ). ೧೭. +ಮೂಡುತ್ತುಂ (ಘ, ಚ, ಛ). ೧೮. ದವ
(ಕ, ಖ, ಗ). ೧೯. ವಿನವ್ರ (ಘ, ಚ, ಛ). ೨೦. ಮಹೇಂ (ಕ, ಖ). ೨೧. ಳ್ಮಂ (ಸ).

ಮೃದುಮಧುರಗಂಭೀರಧ್ವನಿಯೊಳ್ ಕೂಡಿದ ಮೃದಂಗವಂಶ ತಾಳಾದಿಗಳ ಧ್ವನಿ
ಗ[ಳುಮಂ]ಂ ಮಂದ್ರತಾರಲಯಾನ್ವಿತಮಾಗೆ[೨] ಕಿವಿಗಂ ಮನಕ್ಕಂ ಸೊಗ
ಯಿಸುವಂತಪ್ಪ [೩]ಪಾಟಮುಂ[೪]ಮಂ ಕೇಳ್ದು ಹರಿಚಂದನ ಕಾಳಾಗರು ಮಲಯಜ
ತುರುಷ್ಕಾದಿಗಳ ಕಂಪು ಬಂದು ತೀಡಿದೊಡಿದು ದೇವನಿವಾಸಮಕ್ಕುಮೆಂದು ಬಗೆದು
ಭಯಾಶ್ಚರ್ಯದಿಂದಂ ವ್ಯಾಕುಳಿತ ಮನದೊನಾಗಿ ಇನ್ನಿದನಮೋಘಂ ನೋಟ್ಪೆ
ನೆಂದಾ ದೆಸೆಗಾಗಿ [೫]ಸಲ್ವನಾಂ[೬] ಕನತ್ಕನಕ ವಿನಿರ್ಮಿತಮುಂ ನಾನಾಮಣಿಗಣ
[೭]ಖಿನದ್ಧಮುಂ [೮]ಚಳತ್ಕೇತುಪತಾಕಾದ್ಯಮುಂ[೯] ವಿದ್ಯಾಧರ ಯುವತೀ ಜನಕ್ರೀಡ
ನಾರ್ಥಮಪ್ಪ ಪ್ರಾಸಾದಮಂ ಕಂಡು ವಿಸ್ಮಯಚಿತ್ತನಾಗಿಯದಱ ಸಮೀಪಕ್ಕೆ
ಸಾರ್ದೊಂದು ಮರನಂ ಮಱೆಗೊಂಡು ನೋಟ್ಪೊಂ ತತ್ಪುರಃಸ್ಥಿತಮಪ್ಪ ಮಣಿ
೧೦ ಮಂಟಪದೊಳ್ ದಿವ್ಯಸ್ತ್ರೀಜನಂಗಳ್ [೧೦]ವಿಲಾಸದಿಂ[೧೧] ಚಾಮರಮಿಕ್ಕೆ ದಿವ್ಯಶಯ್ಯಾ
ತಳದ ಮೇಗಿರ್ದು ನಾಟಕಮುಂ ನೋಟ್ಪ ಕುಮಾರನಂ ಕಂಡು ಹರ್ಷಚಿತ್ತದಿಂದಂ
ಕುಸುಮಿತ ಕದಂಬ ವೃಕ್ಷಂಬೊಲ್ ಕಂಟಕಿತ ರೋಮಾಂಚಿತಗಾತ್ರನಾಗಿ[೧೨] ಪರಿದು
ವರ್ಪೊನಂ[೧೩] ಕಂಡಿದಿರ್[೧೪]ಯ್ದಿ [ಯಾ]ರ್ತನುಂ ಕುಮಾರನ ಚರಣಾರವಿಂದಂಗಳ್ಗೆ
೧೦ಱಗಿ ಬಿದ್ದು ಮೂರ್ಛಾಗತನಾದೊಡಾಗಳ್ ಶೀತಳ ಕ್ರಿಯೆಗಳಿಂದೆಬ್ಬಿತ್ತಜುದಿಂ
ಗ೧೧ಳಿಂ೧೧ಕಂಡೆಂ ಸ್ವಾಮಿ ೧೨ನಿನ್ನಂ ನಂಬಿರ್ದೆ೧೨ನಾನೆಂದು ಮಹಾದುಃಖದಿಂದ
ಬ್ಬಿನಂ ಸಂತಯಿಸಿ ವಿಪುಳಶ್ರೀಯೆಂಬ೧೩ವಿದ್ಯಾಧರ೧೩ನಿವಿಳಾಸಿನಿಯಂ ಕರೆದಿಂತೆಂದು
ಪೇೞ್ದಿನೆನ್ನ ಸಹೋದರನೆಂತುಂ ಶ್ರಮಮಂ ನೀಗಿ ಸುಖದಿಂ ತಣಿದೊನಕ್ಕುಮಂತಾಗೆ
ಸ್ನಾನಪಾನಭೋಜನಾದಿ ಕ್ರಿಯೆಗಳಿಂ ಬೇಗಂ ಮಾಡೆಂದು ಪೇೞ್ದೊಡಾಕೆಯು
ಮಂತೆಗೆಯ್ವೆನೆಂದಾತನಂ ಮಹಾ ವಿಭೂತಿಯಿಂದಂ ವಿದ್ಯಾಧರ ವಿಲಾಸಿನಿ ಮಜ್ಜನಂ
೨೧ ಬುಗಿಸಿ ದಿವ್ಯಾಹಾರಮನೂಡಿ ವಸ್ತ್ರಾಭರಣ ಗಂಧಮಾಲ್ಯಾದಿ ತಾಂಬೂಲಾದಿಗಳಿಂ
ತಣಿಪಿದಾಗಳಾತನುಂ ಮುನ್ನಿನ ದುಃಖಮೆಲ್ಲಮುಂ ಮಱೆದಂ ಮುನ್ನಂ ಕ್ಲೇಶಭಾಗಿ
ಯಪ್ಪ ಪುರುಷಂ ಸ್ವರ್ಗಮನೆಯ್ದಿ ೧೪ಮಾಱು[ಪ್ಪವೊ]ಲೆ[ಳಿ]ಯ್ತಾ೧೪ಗಳಲ್ಲಿಂ ಬಂದು
ಕುಮಾರನೋರಾಸನದೊಳಿರ್ದು ಸರ್ವಾಭರಣ ಭೂಷಿತನಾಗಿ ನೇತ್ರ ಮನೋ
೧೫ಹರಿಯೆಂಬ೧೫ ದಿವ್ಯ ಸಭೆಯಂ ನೋಡಿ ವಿಸ್ಮಯಚಿತ್ತನಾಗಿ ಇಂತೆಂದಂ ಸ್ವಾಮಿ
ವ್ರತಶೀಲೋಪವಾಸ ತಪಶ್ಚರಣ ಸಂನ್ಯಸನಾದಿ ೧೬ಶುಭಾ೧೬ನುಷ್ಠಾನ ಕ್ರಿಯೆಗಳಿಂ
ಸತ್ಪುರುಷಂ ಮಱುಭವದೊಳ್ ದೇವಾಂಗನೆಯ೧೭ರ್ಕಳಿ೧೭ಜೆಯನಕ್ಕುಂ ನೀಮಿಾ
ಭವದಿಂದಿಂತಪ್ಪ ವಿಭವಮನೆಯ್ದಿದಿರಿದೆನಗೆ ಮಹಾ ವಿಸ್ಮಯಮೆನೆ ಕುಮಾರನಿಂತೆಂದ
ನಿವರ್ಗ್ಗಳ್ ದೇವಕನ್ನೆಯರಲ್ಲರ್ ವಿದ್ಯಾಧರಿಯರ್ಕಳೆನೆ ಇವರ್ಗ್ಗಳಂ ನೀಮೆಂತು

---

೧. ಳ್ಗಂ (ಸ). ೨. +ಪಾಡುವಂ (ಕ, ಖ, ಗ). ೩. ಗೀತಮು (ಘ, ಚ, ಛ). ೪. ಸಾರ್ವಂ
೩೦ (ಘ, ಚ, ಛ). ೫. ವಿನದಮಪ್ಪ ಪಲತೆಱದ ಕೌತುಕಮಂ (ಘ, ಚ, ಛ). ೬. ಲಟಿಹದಿಂ
(ಘ, ಚ, ಛ). ೭. + ಮಹೇಂದ್ರಸಿಂಹಂ (ಘ, ಚ, ಛ). ೮. ಸನತ್ಕುಮಾರಂ (ಘ, ಚ, ಛ)॰
೯. ಳ್ದು ಮಾ (ಕ, ಖ, ಗ), ಯ್ದಿ ಮಾ (ಖ), ಳ್ದು ಬಂದ (ಘ, ಚ, ಛ). ೧೦. +ಮಹೇಂದ್ರಸಿಂಹನೆ
(ಘ, ಚ ಛ). ೧೧. ಳಿಂಗೆ (ಘ, ಚ, ಛ). ೧೨. ನಿನ್ನಿಂ ಬಾೞ್ವೆ (ಘ, ಚ, ಛ). ೧೩. ಬಿಂಬಾಧರ
(ಘ, ಚ, ಛ). ೧೪. ಮಾಱುಪ್ಪೊಲೆಯಾ (ಗ), ಮಾಱುಪ್ಪೊಲಿಂದಾ (ಕ, ಖ), (ಘ, ಚ, ಛ).
೧೫. ಹಾರಿಯಪ್ಪ (ಘ, ಚ, ಛ). ೧೬. ಸುಖಾ (ಕ, ಖ, ಗ). ೧೭. ರ್ಗೆ (ಘ, ಚ, ಛ).

ಪೆತ್ತಿರೆಲ್ಲಿ ಮೇಣಾವ ಸ್ವರೂಪದಿಂ ಬಂದಿರಿದನೆನಗೆ ತಿಳಿಯೆ ಪೇೞಿಮೆನೆ ಕುಮಾರ ನಿರುಳಿಲ್ಲಮತಿರಂಜನೆಯೆಂಬ ನಾಟಕಮಂ ನೋಡಿ ನಿದ್ರಾಸುಖಮಂ ೧ಪೆಱದೊನಾ೧ ಕಮಳಮತಿಯೆಂಬ ವಿದ್ಯಾಧರ ವಿಳಾಸಿನಿಯಂ ವಿದಗ್ಧೆಯಂ ಕರೆದೆನ್ನ ಸಂಬಂಧಿ ಯಪ್ಪ ಕಥೆಯೆಲ್ಲಮಂ ಮಹೇಂದ್ರಸಿಂಹಂಗೆ ಪೇೞಿಂದು ನಿದ್ರಾವಶಗತನಾಗಿ ವಾಸ ಗೃಹಮಂ ಪೊಕ್ಕನಿತ್ತಾ ಕೆಯುಮಾತಂಗಿಂತೆಂದು ಪೇೞಲ್ ತಗುಳ್ದಳ್

ಕುಮಾರನಿಂದಾರೂಢಮಪ್ಪ ದುಷ್ಟಾಶ್ವಂ ಕುಮಾರನಂ ಕೊಂಡು ಮನೋ ವೇಗದಿಂ ಗಿರಿವನ ದರಿ ನದೀಪ್ರದೇಶಂಗಳೊಳ್ ಮೂಱುದಿವಸಮಿರುಳುಂ ಪಗಲುಂ ಪರಿಯುತ್ತಿರ್ದುದು ಕರುಳ್ ಪಱಿದು ತೆಗಲೆಯೊಡೆದು ಕಾಲಂಗೆಯ್ದುತ್ತಾಗಳ್ ಕುಮಾರನುಂ ಪಸಿವುಂ ನೀರಟ್ಟಕ್ಕೆಯಿಂದಿವಮಾದಂ ಬಾಧಿಸೆಪಟ್ಟು೨ ಬಸಮಱಿದು ಪಿರಿದೊಂದಾಲ೩ ಮರದ ಕೆಟಿಗೆ ಶಿಲಾತಳದ ಮೇಗೆ ೩ಪಟ್ಟಿರ್ದ೩ನಾಗಳಲ್ಲಿಯಾ ೧೦ ವಟವೃಕ್ಷವಾಸಿಯಪ್ಪ ಮನೋಹರನೆಂಬ ಯಕ್ಷಂ ಕಂಡೀ ಪುರುಷಂ ಸಕಲಚಕ್ರವರ್ತಿ ಯಪ್ಪನೆಂದಱಿದು ಗಂಧೋದಕಮಂ ಮೇಲೆ ತಳಿದು ತಣ್ಣಾಳಿಯಂ ವಿಗುರ್ವಿಸಿ ದೇಹಕ್ಕಾಪ್ಯಾಯನಂ ಮಾಡೆ ಸ್ವರ್ಣ ಭಾಜನದಿಂದಾಮೋದ ಸುಗಂಧಮಪ್ಪ ಕೋಡುವ ನೀರನಾತಂಗೆ ಕುಡಿಯಲೆಱೆದನಾಗಳ್ ಕುಮಾರಂ ನೀನಾರ್ಗ್ಗೀ ನೀರ ನೆಲ್ಲಿಂ ತಂದಯ್ ಪೇೞಿಂದು ಬೆಸಗೊಂಡೊಡಾತನಿಂತೆಂದನಾನೀ ವಟವೃಕ್ಷನಿವಾಸಿ ಯೆನ್ ಮನೋಹರನೆಂಬ ಯಕ್ಷನೆನ್ ಕ್ಷುಲ್ಲಕಮಾನಸಮೆಂಬ ೪ಸರೋವರದಿಂ೪ ತಂದೆನೀ ನೀರನೆನೆ ಆಂತಪ್ಪೊಡೆ ನೀನೆನ್ನನಾ ಕೊಳ೫ಕ್ಕೊಡಗೊಂಡು೫ ಪೋಗ ಲ್ಲಿಯಾ ನೀರಂ ಮಿಂದು ಕುಡಿದೊಡಲ್ಲದೆನಗೆ ನೀರಟ್ಟಿಕೆ ಕಿಡದೆಂದು ಪೇೞ್ದೊಡೆ ಕುಮಾರನನೆತ್ತಿಕೊಂಡು ಪೋಗಿ ಯಕ್ಷನಾ ಸರೋವರದ ತಡಿಯೊಳ೬ಟ್ಟಿ೬ ಪೋದನ್

ಆ ೭ಅವಸರದೊಳ್೭ ಸಿತಯಕ್ಷನೆಂಬ ವ್ಯಂತರದೇವಂ ೮ಕುಮಾರನ ಪೂರ್ವ ೨೦ ವೈರಿ ಭೌಮವಿಹಾರಕ್ಕೆ ಬಂದು ಕುಮಾರನಂ ಕಂಡು ಕ್ರೋಧಾಗ್ನಿ ಪೆಚ್ಚಿ ಭೈರವ ರೂಪಧಾರಿಯಾಗಿ ಕಳಕಳಧ್ವನಿಯಿಂದಂ ಗರ್ಜಿಸಿ ಬಪ್ಪೊನಂ ಕಂಡಾಗಳ್ ಸಿಂಹ ನಾದಂಗೆಯ್ದು ಖಲ್ಗ ಸನ್ನಿಭಮಪ್ಪ ಮಹಾಶಿಲೆಯಂ ಕಿಲ್ತೆತ್ತಿಕೊಂಡು ಪ್ರತಿರಾಕ್ಷಸಂ ಬೊಲ್ ನಿಂದ ಕುಮಾರನಂ ನೋಡಿ ವ್ಯಂತರದೇವಂ೮ ನಾಗಪಾಶದಿಂದಂ ವೇಷ್ಟಿಸಿ ದೊಡೆ ಕುಮಾರನದಂ ಹಸ್ತತಳದಿಂ ಪಱಿಯೆ ಪೊಯ್ದನಾಗಳಾ ದೇವಂ ನಾನಾವಿಧ ಮಾಯಾ ಯುದ್ಧಂಗಳಿಂ ಕಾದೆ ಕುಮಾರನಂ ಯಷ್ಟಿ ಮುಷ್ಟಿ ಪ್ರಹಾರಾದಿಗಳಂ ಗೆಲ್ದಿರ್ದೊನನೆತ್ತಿಕೊಂಡು ಸಮುದ್ರದ ಬಡವಾಮುಖದೊಳಿಕ್ಕೆ ಕೊಲ್ವೆನವೋಳ್ ಮೆಂದು ನೆಲದಿಂದು ೯ರ್ಬ್ಬಿ೯ ಬಂದಾಕಾಶಕ್ಕೆ ನೆಗಪಿದೊನ ಸ್ಕಂಧಮಂ ತಿವಿದೊಂ ಕುಮಾರನ ೧೦ಅವೃಷ್ಟಿ ವಜ್ರಘಾತಂಬೊಲಪ್ಪ೧೦ ಮುಷ್ಟಿಯಿಂ ದಿವ್ಯಪುರುಷನ ಹಸ್ತ

---

೧. ಪಿರಿದೊಂವ (ಕ, ಖ), ಪಿರಿದೊಂವ (ಗ), ಪಿಱೆದೊನನಾ (ಘ, ಛ). ೨. ಸೇದೆವಟ್ಟು ಮಱಿವಂತಾ (ಘ, ಚ, ಛ). ೩. ನಿದ್ರೆಗೆಯ್ದ (ಕ, ಖ, ಗ). ೪. ಕೊಳದಿಂ (ಘ, ಚ, ಛ). ೫. ಕೈ ಕೊಂಡು (ಕ, ಖ, ಗ). ೬. ರಿಸಿ (ಚ, ಛ). ೭. ಸರೋವರದೊಳ್ (ಘ, ಚ, ಛ). ೮. (ಘ, ಚ, ಛ) ಗಳಲ್ಲಿ ಇಲ್ಲ. ೯. ರ್ಬ್ಬಿ (ಕ, ಗ). ೧೦. ನುಂ ಅವುಷ್ಟಿ ವಜ್ರಘಾತಮೆಂಬೊಲಾ (ಕ, ಗ), ನವಜ್ರಘಾತಂಬೊಲಪ್ಪ (ಘ, ಚ, ಛ).

ಪ್ರಹಾರಮೆಂಬ ೧ಮುದ್ರಾಪೀಡೆಯಿಂ೧ ತ್ರಸ್ತಾ೨ಭಿಭೂ೩ತನಾಗಿ ಬೆನ್ನಿತ್ತೋಡಿದ ನಾಗಳ್ ತನ್ನಿವಾಸಿಗಳಪ್ಪ ಯಕ್ಷಕಿನ್ನರಾದಿಗಳ್ ಮಸ್ತಕದೊಳ್ ನ್ಯಸ್ತಹಸ್ತಕ್ಕ೪ಳಾಗಿ ಜಯಜಯ ೫ಶಬ್ದಂಗಳಿಂದಂ೫ ಪುಷ್ಪಾ೬ದಿಗಳಿಂ ಕುಮಾರನಂ ಪೂಜಿಸಿದರ್

ಆ ಅವಸರದೊಳಿಂದ್ರಪ್ರಭನೆಂಬ ವಿದ್ಯಾಧರಂ ಬಂದು ಕುಮಾರನ ಚರ ಣಾರವಿಂದಂಗಳ್ಗೆಱಗಿ ಪೊಡೆವಟ್ಟಿಂತೆಂ೫ದನ್ ಸ್ವಾ೫ಮಿ ಮೂವ೬ತ್ತಾಱು ವರುಷಂ ನಿನ್ನ ಬರವನಾನೆನ್ನರಸನ ಬೆಸದಿಂ ಪಾರುತ್ತಿರ್ದೆಂ ನೀನೆನ್ನ ಭಾಗ್ಯದಿನಿಲ್ಲಿಗೆ ಬಂದಯ್ ಏಱು ವಿಮಾನಮನೆನೆ ಅಂತೆಗೆಯ್ವೆನೆನ್ನ ಬಯಕೆಯಂ ತೀರ್ಚಿ೭ದ ಬಟಿಕ್ಕೇ೭ಱುವೆನೆಂದು ಕೊಳನಂ ಪೊಕ್ಕು ಸ್ವೇಚ್ಛೆಯಿಂ ೮ಕ್ರೀಡಿಸಿ೮ ಪೊಱ ೧೦ ಮಟ್ಟನನಾ ಖೇಚರಂ ಕೊಂಡುಪೋಗಿ ತದ್ವನದೊಳತಿ ರಮಣೀಯಮಪ್ಪ ಪ್ರದೇಶ ದೊಳಾಡುತ್ತಿರ್ದ ವಿದ್ಯಾಧರ ಕನ್ನೆಯಕ್ಕ೪ಳ ಪಕ್ಕದಿರಿಸಿ ಪೋದನ್ ಇತ್ತ ಖೇಚರ ಕನ್ನೆಯಕ್ಕ೪ಳ ಕಣ್ಗಳೆಂಬ ಮಿಾಂಗಳ್ ಕುಮಾರನ ರೂಪೆಂಬ ಗಾಳದಿಂ ತೆಗೆಯೆ ಪಟ್ಟು ೯ತಪನ್ ತಾಪನ ದಹನ ವಿ೧೦ಮೋಹನ ಮ೧೦ರಣ ಸ್ವರೂಪದ ಕಾಮ ಶರಂಗಳವರ್ಗ್ಗಳಿರ್ದಿಯನುರ್ಚಿವೋಗಿ ಪರವಸೆಯರಾಗಿ ಮಱುಗಿದಱುನೀರ ಮಿಾಂಗಳ್ವೊಲಾದರಿದೇಂ ಚೋದ್ಯಮೊ ಕುಸುಮಬಾಣನ ಬಿಲ್ಬಲ್ಮೆ

ಶ್ಲೋಕ॥ ಆಹೋ ಧನುಷಿ ಕೌಶಲ್ಯಂ ಮನ್ಮಥಸ್ಯ ಮಹಾತ್ಮನಃ।
ಅಸ್ಪೃಶನ್ನಪಿ ಗಾತ್ರಾಣಿ ಭಿನತ್ತ್ಯಂತರ್ಗತಂ ಮನಃ ॥

ಇವರ್ಗ್ಗಳ್೧೧ತ೧೧ನ್ಮುಖ ನಿರೀಕ್ಷಣದೊಳಾಸಕ್ತೆಯರಾಗಿರ್ದ್ದರಾಗಳಾ ಇಂದ್ರಪ್ರಭ ನೆಂಬ ವಿದ್ಯಾಧರಂ ಪ್ರಿಯ೧೨ಸಂಗ೧೨ಮನೆಂಬ ಪೊಟಿಲನೆಯ್ದಿ ಭಾನುವೇಗನೆಂಬ ೨೦ ವಿದ್ಯಾಧರಂಗೆ ಪೇೞ್ದನಾದೇಶ ಪುರುಷನಂ ತಂದು ಭೂತರಮಣದ ಜ್ಯೋತಿರ್ವಿ ತಾನಮೆಂಬ ಮಣಿಮಂಟಪದೊಳ್ ಕನ್ನೆಯರ ಪಕ್ಕದಿರಿಸಿ ಬಂದೆನೆನೆ ಆಗಳಾತಂಗೆ ತಣಿವಿನೆಗಂ ತುಷ್ಟಿದಾನಂಗೊಟ್ಟು ವಿಪುಳಶ್ರೀಯೆಂಬ ಖೇಚರಿಯಂ ಕರೆದಿಂತೆಂದಂ ಶೀಘ್ರಂ ಪೋಗಿ ಕೇರ್ತಿಧವಳಂಗೆ ಭೋಜನಾದಿ ವಿಧಿಯಂ ಮಾಡೆಂದು ಪೇೞ್ದೊಡಾಕೆಯುಮಂತೆಗೆಯ್ವೆನೆಂದು ಸಪರಿವಾರಂಬೆರಸು ಬಂದಾತಂಗೆ ಮಜ್ಜನ ಭೋಜನ ೧೩ಪ್ರಸಾಧ೧೩ನಾದಿಗ೧೪ಳುಮಂ ಮಾಡಿ೧೪ಳಿ ಮತ್ತೆ ಕುಮಾರನಂ ದಿವ್ಯ ಶಯ್ಯಾತಳದೊಳ್ ಸುಖದಿನಿರಿಸಿ ಆನಂಗ೧೫ಸುಂ೧೫ದರಿಯೆಂಬ ವಿದ್ಯಾಧರಿಯ ನಾಡವೇೞ್ದು ನಾಟಕಮ೧೬ನಭಿನಯಿ೧೬ಸುತ್ತಂ ಕುಮಾರನ ಮುಂದೆ ವಿನಯಾನ್ವಿತೆ ಯಾಗಿರ್ದ್ದಳಂ ಕುಮಾರಂ ನೋಡಿ ಇಂತೆಂದಂ ನೀಮೆನಗೀದೃಗ್ವಿಧಮಪ್ಪು ಪಕಾರಮನೇಕೆ ಗೆಯ್ದಪ್ಪಿರ್ ನೀಮೇನಾಗ್ಗೆಂದು ಬೆಸಗೊಂಡೊಡಾಕೆಯಿಂತೆಂದಳ್

---

೫೦ ೧. ಮಹಾಮುದ್ರೆಯಂ ಪಿಡಿಯೆ (ಘ,ಚ,ಛ). ೨. ಭೀ (ಕ,ಖ,ಗ). ೩. ನಿನಾದಪೂರ್ವಕಂ (ಘ,ಚ,ಛ). ೪. ಜ್ಞಾ (ಕ,ಖ,ಗ). ೫. ದನಾ (ಸ-ಘ.) ೬. ತ್ತು (ಘ,ಚ,ಛ). ೭. ದೊಡೇ (ಛ). ೮. ನೀರಂಕುಡಿದು (ಘ,ಚ,ಛ). ೯. ತೊಟ್ಟನೆ (ಘ,ಚ,ಛ), ತರ್ಪಣ (ಖ). ೧೦. ರಹಕಾ (ಘ, ಚ, ಛ). ೧೧. ಮ (ಕ, ಖ, ಗ). ೧೨. ವಂಶ (ಘ, ಛ). ೧೩. (ಘ, ಚ, ಛ)ಗಳಲ್ಲಿಲ್ಲ. ೧೪. ೪ಂ ಸಂತೊಸಂಬಡಿಸಿ (ಘ, ಚ, ಛ). ೧೫. ಸೌಂ (ಕ, ಖ, ಗ). ೧೬. ನಾಡಿ (ಘ, ಛ).

ಕೇಳ್ ಪೇಟ್ಪೆಂ ಸ್ವಾಮಿ ವಿಜಯಾರ್ಧ ಪರ್ವತದೊಳ್ ಪ್ರಿಯಸಂಗಮ
ಪುರಾಧಿಪತಿಯಪ್ಪ ಭಾನುವೇಗನೆಂಬ ವಿದ್ಯಾಧರಂಗೆ ಶ್ರೀಮಾಲೆ ಮೊದಲಾಗೊಡೆಯ
ಮಹಾದೇವಿಯರೆಣ್ಬರವರ್ಗ್ಗೆ ಪುಟ್ಟದೊರೀ ಯೆಣ್ಬರುಂ ಕನ್ನೆಯರ್ಕಳ್ ಲ[1]ಕ್ಷ್ಮೀ[2]
ಮತಿ ಕನಕಕಾಂತೆ ಮಂದಾರಸೇನೆ ಅಳಕೆ ಅಲಂಭೂಷೆ ಹೇಮವತಿ ಹೇಮವಾಳಿನಿ
ವಿಜಯಾರ್ಧವತಿಯೆಂದೀ ಪೆಸರ್ಗಳನೊಡೆಯರೆಣ್ಬರುಂ ಮಿ[3]ಕ್ಕಿಳನಾರ್ಗೆ ಕುಡುವ
ಮೆಂದೊಂದು ದಿವಸಂ ನೈಮಿತ್ತಿಕನಂ ಭಾನುವೇಗಂ ಬೆಸಗೊಂಡೊಡಾತನಿಂ
ತೆಂದಂ ಕ್ಷುಲ್ಲಕವಾನಸಮೆಂಬ ಕೊಳದೊಳ್ ಸಿತಯಕ್ಷನೆಂಬ ದೇವನಂ ಸಂಗ್ರಾಮ
ದೊಳಾವೊಂ ಗೆಲ್ದುಮಾತಂಗೆ ಕೂಸುಗಳಂ ಕುಡಿಮೆಂದು ಪೇಟ್ದಿನದಱಿಂ ನೀನೆಮ್ಮ
ಸ್ವಾಮಿಯೆಂದು ಪೇಟ್ಪವಸರದೊಳ್ ಮಹಾವಿಭೂತಿಯಿಂ ಬಪ್ಪರ್ ಖೇಚರೇಂದ್ರನಂ
ತೋಱಿದೊಡೀತಂ ನಿಮ್ಮ ಮಾವನೆಂದಾಗಳ್ ಕುಮಾರನುಮಿದಿರೆಬ್ದು ತದ್ಯೋಗ್ಯ ೧೦
ಮಪ್ಪ ವಿನಯಮುಂ ಗೆ[4]ಯ್ದಿರ್ದೊನಂ[5] ವಿದ್ಯಾಧರೇಂದ್ರಂ ಕುಮಾರನಂ ನೋಡಿ
ತ್ರಿಭುವನಕ್ಕೆಲ್ಲಂ ತಿಳಕಮಾಗಿರ್ದ್ದಳಿಯನಂ ನಾನೆ ಪೆ[6]ತ್ತೆ[7]ನೆಂದಾದಮಾನುಂ
ಸಂತುಷ್ಟಚಿತ್ತನಾಗಿ ಕುಮಾರನಂ ಕೊಂಡುಪೋಗಿ ತನ್ನ ಪೊಬಲಂ ಪೊಕ್ಕಾ ದೆವಸ
ದೊಳಿಣ್ಬರ್ ಕನ್ನೆಯರ್ಕ್ಕಳಂ ಕೈನೀರೆಱೆದು ಕುಮಾರಂಗೆ ಕೊಟ್ಟಂ ಕುಮಾ
ರನುಂ ದಿವ್ಯಾಂಗನೆಯರ್ಕ್ಕ[8]ಳೊಡನೆ[8] ಸುಖದಿಂ[9]ದೊಂದಿದ[9]ನಾಗಳೊಂದು
ವನದೇವತೆ ಬಂದು ಸುನಂದೆಯೆಂಬ ಕನ್ನೆಯ ದುಃಖಮುಂ ಕಾಣಲಾಱದೆ ಕರುಣಿಸಿ
ಕುಮಾರನನೆತ್ತಿಕೊಂಡು ಪೋಗಿ ಹರಿಕೂಟಮೆಂಬ [8]ಪರ್ವತದ[8] ಜ್ಯೋತಿರ್ವನ
ದೊಳ್ ದಿವ್ಯಶಯ್ಯಾತಳಮಂ ವಿಗುರ್ವಿಸಿಯದಱ ಮೇಗೆ ಕುಮಾರನನಿಟ್ಟು
ಪೋದೊಡಾತನುಂ ಪ್ರಭಾತಸಮಯದೊಳೆಬ್ಬಿತ್ತು ದೆಸೆಗಳಂ ನೋಟ್ಪೊನಾ
ವನಮುಮಂ ತನ್ನಿರ್ದ್ದ ಲತಾ[10]ಮಂಟಪ[10]ಮುಮಂ ನೋಡಿ ಎನಗಿದು ಮಹಾ ೨೦
ವಿಸ್ಮಯಂ ರಾತ್ರಿಯೊಳ್ ವಿವಾಹಕಲ್ಯಾಣಮೆನಗೆ ಸ್ವಪ್ನದೊಳಾದುದೊ ನಿರುತ್[11]ಮೊ[11]
ಎಂದು ಸಂ[12]ದೇಹ[12]ಚಿತ್ತನಾಗಿ ತನ್ನ ಕೈಯೊಳ್ [13]ಕಟ್ಟಿದ[13] ಕಂಕಣಮುಂ
ನೋಡಿಕಂಡು ಕುಮಾರನಿಂತೆಂ[14]ದು ಬಗೆದಂ[14]

ಶ್ಲೋಕ॥ ಭವಿತವ್ಯಂ ಭವತ್ಯೇವ ಕರ್ಮಣಾಮೇಷ ನಿಶ್ಚಯಃ ।
ವಿಪತ್ತೌ ಕಿಂ ವಿಷಾದೇನ ಸಂಪತ್ತೌ ವಿಸ್ಮಯೇನ ಕಿಂ ॥

ಎಂದಿಂತು ವಸ್ತುಸ್ವರೂಪಮಂ ಕುಮಾರಂ ಬಗೆಯುತ್ತಿರ್ಪಿನೆಗಂ ದೂರಾಂತರ
ದೊಳ್ [15]ಸಂಛ[15]ನ್ನಮಾಗುತ್ತಿರ್ದ್ದ [16]ವನದೊಳಿರ್ದ[16] ಕನ್ನೆಯಿಂತೆಂದು ಪುಯ್ಯ ೩೦
ಲಿಟ್ಟಳ್ ಸಾಕೇತಪುರಾಧಿಪತಿಯಪ್ಪ ಸುರಥನೆಂಬರಸಂಗಂ ಚಂದ್ರ[17]ಯಶಿ[17]ಯೆಂಬ
ಮಹಾದೇವಿಗಂ ಪುಟ್ಟಿದೆನ್ ಸನತ್ಕುಮಾರನ ಭಾರ್ಯೆಯೆನ್ ಸುನಂದೆಯೆನೆಂಬೆ

---

೧. ಕ್ಷ (ಕ, ಖ). ೨. ಕ್ಕ್ರ (ಕ, ಖ, ಗ). ೩. ಯ್ದೆಱ್ದನಂ (ಕ, ಖ, ಗ). ೪. ಳ್ತೆ (ಕ, ಗ).
೫. ಳುಂತಾನುಂ (ಕ, ಖ, ಗ). ೬. ನಿದ್ರೆಗೈದ (ಘ, ಚ, ಛ). ೭. (ಘ, ಚ, ಛ) ಗಳಲ್ಲಿಲ್ಲ.
೮. ವನ (ಕ, ಖ, ಗ). ೯. ಮೇಯಾದುದೊ (ಕ, ಖ, ಗ). ೧೦. ದೆಗ (ಕ), ತುಷ್ಟ (ಚ, ಛ).
೧೧. (ಘ, ಚ, ಛ) ಗಳಲ್ಲಿಲ್ಲ. ೧೨. ದಂ (ಘ, ಚ, ಛ). ೧೩. ಸ್ವಚ್ಛ (ಕ, ಗ). ೧೪. (ಕ, ಗ) ಗಳಲ್ಲಿಲ್ಲ.
೧೫. ಲೇಖೆ (ಘ, ಚ, ಛ).

ನೆನ್ನನನ್ಯಾಯದಿಂ ವಜ್ರವೇಗನೆಂಬ ವಿದ್ಯಾಧರಂ ತಂದಂ ಕಿನ್ನರ ಕಿಂಪುರುಷ ಗರುಡ ಗಂಧರ್ವ ಯಕ್ಷ ರಾಕ್ಷಸಾದಿ ದೇವರ್ಕ್ಕಳಿರಾ ವಿದ್ಯಾಧರರ್ಕ್ಕಳಿರಾ ಶರಣಾಗಿಮಾರ ಪ್ಪೊಡಮೆನ್ನಂ ರಕ್ಷಿಸಿಮೆಂಬ ಕಾರುಣ್ಯಸ್ವರಮಂ ಕೇಳ್ದಾಶ್ಚರ್ಯ ಮನದೊನಾಗಿ ದೆಸೆಯಂ ನೋಡಿ ಸಲ್ವಂ ಸ್ಫಟಿಕಮಯಮಪ್ಪ ಶಿಲಾ[೧]ಗೃಹ[೧]ದ ಕೆಲಗಿರ್ದ್ದ [೨]ಯಕ್ಷಿಕನ್ನೆಯಂ ಕಂಡು ನೀನಾರ್ಗ್ಗೀನೆಂಬೆಯಾ ಸನತ್ಕುಮಾರನೆಂಬೊ ನಾರ್ಗ್ಗೆಂದು ಕುಮಾರಂ ಬೆಸಗೊಂಡೊಡಾಕೆಯಿಂತೆಂದು ಪೇಳ್ದಳ್

ಅಯೋಧ್ಯಾಪುರಮನಾಳ್ವಂ ಸುರಥನೆಂಬೊನರಸನಾತನ ಮಹಾದೇವಿ ಚಂದ್ರಯಶಿಯೆಂಬೊಳಾಯಿರ್ವರ್ಗ್ಗಂ ಪುಟ್ಟದೆಂ ಸುನಂದೆಯೆಂಬೆಂ ಸನತ್ಕುಮಾರಂಗೆ ಗರ್ಭದೊಳಿರ್ದ್ದಂತೆ ನಿವೇದಿ[೩]ಸಪಟ್ಟಿ[೩]ನೆನ್ನಂ ಮದನೋದ್ಯಾನದೊಳುಯ್ಯಲಾಡುತ್ತಿರ್ದೊಳಂ ಭೌಮವಿಹಾರಾರ್ಥಂ ಬಂದು ವಜ್ರವೇಗನೆಂಬ ವಿದ್ಯಾಧರಂ ಕಂಡೆನ್ನನೆತ್ತಿಕೊಂಡು [೪]ಪುಯ್ಯಲಿಡೆಯಿಡೆ[೪] ಬಂದನಿಂದಿಂಗೇಟು ದಿವಸಮುಂಟು ಮತ್ತಾ ಸನತ್ಕುಮಾರನೆಂಬೊಂ ಹಸ್ತಿನಾಪುರಮನಾಳ್ವಂ ವಿಶ್ವಸೇನ ಮಹಾರಾಜನೆಂಬೊನರಸನಾತನ ಮಹಾದೇವಿ ಸಹದೇವಿಯೆಂಬೊಳಾಯಿರ್ವ್ವರ್ಗ್ಗಂ ಪುಟ್ಟಿದಂ ಸನತ್ಕುಮಾರನೆಂಬೊನೆಂದು ಪೇಟಿ[೫]ಪ್ಪೊಡೆ ಕುಮಾರನೆಂದನಾತನಂ ಕಂಡೊಡೇನಱಿ[೫]ವೋ[೫] ಎಂದು ಬೆಸಗೊಂಡೊಡೆ ಸುನಂದೆಯಿಂತೆಂದಳ್ ಎನ್ನ ತಂದೆ ವಿಶ್ವಸೇನ ಮಹಾರಾಜನೊಳಪ್ಪ ಮಿತ್ರಸಂಬಂಧದಿನೊಂದು ದಿವಸಂ ಹಸ್ತಿನಾಪುರಕ್ಕೆ ವೋಗಿ ಕುಮಾರನಂ ಕಂಡಾತನ ರೂಪಂ ಪಟದೊಳ್ ಬರೆದು ತಂ[೬]ದಾ[೬] ರೂಪನೆಲ್ಲಾ ಪೊಟ್ಟುಂ ನೋಟ್ಪೆನುಂ ಬರೆವೆನುಂ ಭಾವಿಸುತ್ತಿರ್ಪೆನಪ್ಪುದಱಿಂದಱಿವೆನಾ ರೂಪುಂ ನಿಮ್ಮನೆ ಪೋಲ್ಕುಮೆನೆಯಂತಪ್ಪೊಡಾಂ ಸನತ್ಕುಮಾರನೆನಪ್ಪೆನೆಂದಾಗಳ್ ಹರ್ಷರೋಮಾಂಚ ಕಂಚುಕಿತೆ ವಿಕಸಿತವದನೆಯಾಗಿ[೭]ಯಱಪ ಬಳ್ಕಿ ಕಾಲ್ತೊಡರ್ದತ್ತೆಂ ಬಂತೆವೊಲಾಯ್ತೆನ್ನ[೭] ಭಾಗ್ಯದಿಂದಂ ಸ್ವಾಮಿ ನೀಮಿಲ್ಲಿಗೆ ಬಂದಿರಾ ವಜ್ರವೇಗಂ ತನ್ನ ತಂಗೆಯನೆನಗೆ ಕಾಪಿಟ್ಟು ತನ್ನ ಪೊಟಿಲ್ಗೆ [೮]ನಿದ್ರೆಗೆಯ್ಯ[೮] ಪೋದನಾಕೆಯುಂ ಜಳಕ್ರೀಡೆಗೆ ಪೋದಳವಳ್ ಬಾರದನ್ನೆಗಂ ಬೇಗಂ ಪೋಪಮೆನೆ ಕುಮಾರನಿಂತೆಂದನಂಜದಿರ್ ನಿನ್ನ ತಂದೊನನಮೋಘಂ ಮೃತ್ಯುಮುಖ[೯]ಕ್ಕುಯ್ದೊಡಲ್ಲದೆ[೯] ಪೋಗೆನೆನೆ ಭಯದಿಂದಂ ನಡುಗಿ ಇಂತೆಂದಳಾತನಾಕಾಶಗಾಮಿ ನೀಮೆಂತು ಕೊಲ್ವಿರೆನೆ ಕುಮಾರಂ ನಕ್ಕಿಂತೆಂದಂ ಆಕಾಶಗಾಮಿಯಪ್ಪ ಕಾಗೆಯನೇಂ ಕೊಲ್ವುದರಿದೆ ಎಂದು ನುಡಿಯುತ್ತಿರ್ಪನ್ನೆಗಂ ವಜ್ರವೇಗನ ಬರವಂ ಕಂಡಾ ಕನ್ನೆಯಂಜಿ ಪ್ರಾಸಾದದೊಳಗೆ ಪೋಗಿ ಪೊಕ್ಕಿರ್ದಳ್

ಖೇಚರನುಂ ಕುಮಾರನಂ ಕಂಡು ಪುರುಡಿಂ ಮುಳಿಸು ಪೆಚ್ಚಿಯೆನ್ನ ಪೆಂಡತಿಯೊಡನೆ ನುಡಿಯುತ್ತಿರ್ದ್ದೊನನಮೋಘಂ ಕೊಲ್ವೆನೆಂದು ಕೆಟ್ಟಿ ಬಾಳ್ವೆರಸು ಬಂದೆಱಗಿ ಇಱಿದಾತನೇಱಂ ಬಂಚಿಸಿ ಸಿಂಹಲಂಘನದಿಂ ಮೇಗೆ ನೆಗೆದು ವಜ್ರ

---

೧. ತಳ (ಕ, ಗ). ೨. ಳ್ವ (ಘ, ಛ). ೩. ಸಲ್ಪಟ್ಟಿ (ಕ, ಗ). ೪. (ಕ, ಖ, ಗ) ಗಳಲ್ಲಿಲ್ಲ. ೫. ವಾ (ಕ, ಖ, ಗ), ವೆಯೊ (ಚ). ೬. ದೊಡಾ (ಘ, ಚ, ಛ). ೭. ಯಱಪಸಿ ಪೋಪಬಳ್ಕಿ ಕಾಲೊಳ್ ತಗುಳ್ವತ್ತೆಂಬವೊಲೆನ್ನ (ಘ, ಚ, ಛ). ೮. (ಘ, ಚ, ಛ)ಗಳಲಿಲ್ಲ. ೯. ಕ್ಕೊಯ್ದಲ್ಲದೆ (ಕ, ಖ, ಗ).

ಸಮಾನಮಪ್ಪ ಕೈಯಿಂದಂ ಕುಮಾರನಾತನ ತೆಗಲೆಯಂ ತಿವಿದೊಡಾತನಲ್ಲಿ ತನ್ನ
ವಿದ್ಯಾಧರ[೧]ಕರಣ[೨]ಮಂ ತೋಪ್ಪ[೩]ಂಬೊಲೆ ಮೇಗುಚ್ಚಳಿಸಿ ಬಿಟ್ಟಾಗಡೆ ಮಡಿದಂ
ಕುಮಾರನಿಂತೆಂದು ಬಗೆದನೊರ್ವಳಿ ಇರ್ದ ಸ್ತ್ರೀಯ ಪಕ್ಕದೆ ಸತ್ಪುರುಷಂಗಿರಲ್
ತಕ್ಕುದಲ್ಲೆಂದು ಮುನ್ನೆ ತನ್ನಿರ್ದ ಲತಾಮಂಟಪದೊಳ್ ಪೋಗಿರ್ದನನ್ನೆಗಮಿತ್ತ
ವಜ್ರವೇಗನ ತಂಗೆ ಸಂಧ್ಯಾವಳಿಯೆಂಬೊಳ್ ಮಾನಸ[೪] ಸರೋವರದೊಳ್ ಜಲ
ಕ್ರೀಡೆಯಾಡಿ ಬರ್ಪೊಳನ್ನೆಗಂ ತಮ್ಮಣ್ಣಂ ಸತ್ತುದಂ ಕಂಡು ಮೂರ್ಛಾಗತೆಯಾಗಿ
ಬಿಟ್ಟು ನೀಡಱಿಂದೆಬ್ಬಿತ್ತು ಕ್ರೋಧಾಗ್ನಿ ಪೆರ್ಚಿ ಎಮ್ಮಣ್ಣನಂ ಕೊಂದ ದುರಾತ್ಮ
ನಂ ಪಾತಾಳಮಂ ಪೊಕ್ಕಿರ್ದನಪ್ಪೊಡಮಱಿಸಿ ಕೊಲ್ವೆನಮೋಘಮೆಂದು ಭಯಂಕರ
ರೂಪಂ ಕೈಕೊಂಡು ದೆಸೆಗಳಂ ನೋಟ್ಪೊಳನ್ನೆಗಮಾರುಮಂ ಕಾಣದೆ ಸುನಂದೆಯಂ
ಬೆಸಗೊಂಡೊಡಾಕೆಯಿಂತೆಂದಳ್ ದುಷ್ಟನಿಗ್ರಹ ಶಿಷ್ಟಪ್ರತಿಪಾಲನ ಸ್ವರೂಪದಿಂ ೧೦
ಪೃಥ್ವಿಯಂ ರಕ್ಷಿಸುವ ಸ್ವಾಮಿ [೫]ಚೋರದಾರ ಪಾದರಿಗ[೫]ರ್ಕ್ಕಳಂ ಕೊಲ್ಲದಿರ್ಕ್ಕುಮೆ
ಎಂದೊಡಾತನಾವೊನೆಲ್ಲಿದೊಂ ತೋಱೆಂದು ಬೆಸಗೊಂಡೊಡೆ ಸುನಂದೆಯುಂ
ಪೋಗಿ ಕುಮಾರನಂ ತೋಱಿದೊಡಾಕೆಯುಮಸಿಖೇಟಕಹಸ್ತೆಯಾಗಿ ವಿಭೀಷಣ
ಮಪ್ಪ ರೂಪುಮಂ ವಿಗುರ್ವಿಸಿ ಕೊಲ್ವೆನೆಂದು ಸಾರ್ದಾಗಳ್ ಕುಮಾರಂ ಸೌಷ್ಠವ
ದೊಳಿರ್ದ್ದೊನಂ ನೋಡಿ ಕ್ರೋಧಂಗೆಟ್ಟು ಸ್ನೇಹಂ [೬]ಪೆರ್ಚಿ[೬] ಕಾಮಶರಂಗಳಿಂ
[೭]ಸ್ಮರ[೭]ವಶಹೃದಯೆಯಾಗಿ ಇಂತೆಂದು ತನ್ನೊಳ್ ಬಗೆದೊಳೆಮ್ಮಣ್ಣಂ ತನ್ನ
ದೋಷದಿಂ ಸತ್ತೊನೀತಂಗೇನುಂ ದೋಷಮಿಲ್ಲೆಂದು ವಿಕಾರ[೮]ಮಪ್ಪ[೮] ರೂಪಮ
ನುಪಸಂಹರಿಸಿ ತನ್ನ ಮುನ್ನಿನ ಸ್ವಾಭಾವಿಕಮಪ್ಪ ರೂಪಂ ಕೈಕೊಂಡು ತಮ್ಮಣ್ಣನಂ
ಸಂಸ್ಕರಿಸಿ ನೀರಿಟ್ಟಿದು ತದ್ವಿರಹಾನಳನಿಂ ಬೆಂದು ಕರಗಿ ಕೊರಗಿ ಬಸಮಟ್ಟಿರ್ದ್ದ
ಮೆಯ್ಯನೊಡೆಯೊಳ್ ಬಂದು ಸುನಂದೆಗಿಂತೆಂದಳ್ ನಿನ್ನ ಪ್ರಸಾದದಿಂ ಬಾಟ್ವೆಂ ೨೦
ನೀನೆನಗೆ ಸೋದರಮುಂ ಕಲ್ಯಾಣಮಿತ್ರೆಯುಮಾದಯ್ ಅದಱಿಂ ನೀನೀ
ಕುಮಾರಂಗೆ ಪೋಗಿ ಇಂತೆಂದು ಪೇಟು ವಿಜಯಾರ್ಧ ಪರ್ವತದೊಳಗ್ರಮಂದಿರ
ಪುರಾಧಿಪತಿಯಪ್ಪಶನಿವೇಗನೆಂಬ ವಿದ್ಯಾಧರಂಗಂ ವಿದ್ಯುತ್ಪ್ರಭೆಯೆಂಬ ಮಹಾ
ದೇವಿಗಂ ಮಗಳ್ ಸಂಧ್ಯಾವಳಿಯೆಂಬೊಳ್ ನೀಮೆ ಶರಣೆಂದಿರ್ದ್ದೊಳಾಕೆಯಂ
ನೀಮಮೋಘಂ ಕೈಕೊಳಲ್ವೇಟ್ಕುಮೆಂದಿಂತು ನುಡಿಯೆಂದು ಕಲ್ಪಿಸಿಯಟ್ಟ
ದೊಡಾಕೆಯುಂ ಕುಮಾರಂಗೆ ತದ್ವೃತ್ತಾಂತಮೆಲ್ಲಮಂ ಪೇಟ್ಟೊಡಾತನುಂ ಪಿತೃ
ಮಾತೃಗಳೀಯದ ಸ್ತ್ರೀಯರಂ ಕೈಕೊಳ್ವುದೆನಗಯೋಗ್ಯಮೆಂದು ಮಱುಮಾತು
ಗೊಟ್ಟೊಡೆ ಸುನಂದೆಯೆಂಬೊಳ್ ಮಿತ್ರಸಂಬಂಧಿಗಳಪ್ಪ ಜನಂಗಳ್ ಮುಂ
[೯]ತಿಟ್ಟು[೯] ಕುಡೆ ಕೊಳಲ್ ತಕ್ಕುದೆಂದು ನುಡಿದೊಡಂಬಡಿಸಿ ದಿವ್ಯದೇವತೆಗಳನೆ
ಬಾಂಧವಜನಮಾಗೊಡೆಯಳಂ ಮಹಾವಿಭೂತಿಯಿಂದಂ ಪ್ರಾಣಿಗ್ರಹಣ ಪುರಸ್ಸರಂ ೩೦
ಸಂಧ್ಯಾವಳಿಯಂ ಕುಮಾರಂಗೆ ಕೊಟ್ಟಳ್ *ಸಂಧ್ಯಾವಳಿಯುಂ ಸುನಂದೆಯಂ

---

೧. ಗುಣ (ಚ), ಗರಣ (ಛ). ೨. ಳಾ (ಚ, ಛ). ೩. ಜಾರ ಚೋರ (ಘ, ಚ), ಚೋರ ಜಾರ (ಛ). ೪. ಪುಟ್ಟ (ಛ). ೫. ಸರ (ಚ, ಛ). ೬. ಸ್ವ (ಕ, ಗ). ೭. ದಿರ್ದು (ಕ, ಖ, ಘ). * * (ಘ, ಚ, ಛ) ಗಳಲ್ಲಿಲ್ಲ.

ಕುಮಾರಂಗೆ ಕೊಟ್ಟಳಿಂ*ತನ್ಯೋನ್ಯ ಸಂಬಂಧದಿಂ ಗಾಂಧರ್ವವಿವಾಹದಿಂ
[೧]ಕಲ್ಯಾಣದೊಳ್ಕೂಡಿ[೧] ಸುಖದಿಂದಿರ್ದೊರ್

ಅನ್ನೆಗಮಿತ್ತ ಶನಿವೇಗಂ ತನ್ನ ಮಗಂ ಪಿರಿದು ಪೊಟ್ಟು ಪೋಗಿ ತಡೆದನೆಂದು
ಮಗನವಸ್ಥೆಯನಱಿದು ಬಾಯೆಂದವಳೋಕಿನಿಯೆಂಬ ವಿದ್ಯೆಯನಾರಯ್ಯಲಟ್ಟಿ
ದೊಡಾ ವಿದ್ಯೆಯುಂ ಪಾರಾವತ ರೂಪದಿಂದಾರೈದು ಪೋಪುದಂ ಸಂಧ್ಯಾವಳಿಯಱಿ
ದಿಂತೆಂದು ತನ್ನ ಭರ್ತಾರಂಗೆ ಪೇೞ್ದುಂ ಸ್ವಾಮಿ ಎನ್ನ ತಂದೆ ವಿದ್ಯಾಧರನಾದ
ಮಾನುಂ ಪ್ರಚಂಡ ಮಹಾಬಳ ಪರಾಕ್ರಮಂ ವಜ್ರವೇಗನ ಸಾವನಱಿದಮೋಘಂ
ನಿಮ್ಮ ಮೇಲೆ ಬರ್ಕುಮದಱಿಂ ನೀಮಿಾ ಪ್ರಜ್ಞಪ್ತಿಯೆಂಬ ಮಹಾವಿದ್ಯೆಯಂ
ಕೊಳ್ಳಿಮೆನೆ ಕುಮಾರಂ ನಕ್ಕು ಪ್ರಹಸಿತವದನನಾಗಿ ಖೇಚರರೆಂಶಿಬೆರಲೆಶಿಗಳಂ
೧೧ ೪ನಿಪಾತಿಸಲ್ಕೆನಗೆ ವಿದ್ಯೆ೫ಯುಂ ಬೇಟ್ಟುಮೆ ಎಂ೫ದೊಲ್ಲದಿರ್ದೊನ ಪಾದದ್ವಯಂ
ಗಳ್ಗೆಱಗಿ ಪೊಡೆವಟ್ಟಮೋಘಂ ಕೊಳಲೆವೇಟ್ಟುಮೆಂದು ಬಲ್ಕಾತಾರದಿಂ ವಿದ್ಯೆಯಂ
ಕೊಟ್ಟೊಡಾ ಅವಸರದೊಳ್

ಮತ್ತಿತ್ತ ರಥನೂಪುರ ಚಕ್ರವಾಳ ಪುರಾಧಿಪತಿಯಪ್ಪ ಚಂದ್ರಯಶನೆಂಬ
ವಿದ್ಯಾಧರಂಗಂ ವಿದ್ಯುದ್ವೇಗೆಯೆಂಬ ಮಹಾದೇವಿಗಮಂತರ್ವರ್ಗಂ ಪುಟ್ಟದರ್
ಚಂದ್ರವೇಗನುಂ ಭಾನುವೇಗನುಮೆಂಬರ್ ಮಕ್ಕಳಾಗಿ ಇಂತಿಷ್ಟವಿಷಯಕಾಮ
ಭೋಗಂಗಳನುಭವಿಸುತ್ತಿರೆ ಮತ್ತೊಂದು ದಿವಸಂ ನೃಪತಿಗೆ ಸಂಸಾರವೈರಾಗ್ಯ
ಮಾಗಿ ಚಂದ್ರವೇಗನೆಂಬ ಪಿರಿಯ ಮಗಂಗೆ ರಾಜ್ಯ ಪಟ್ಟಂಗಟ್ಟಿ ಕಿಱಿಯಾತನಪ್ಪ
ಭಾನುವೇಗಂಗೆ ಯುವರಾಜ ಪಟ್ಟಮಂ ಕಟ್ಟಿ ಗುಣಧರರೆಂಬ ಚಾರಣರಿಸಿಯರ
ಪಕ್ಕದೆ ಜೈನದೀಕ್ಷೆಯಂ ಕೈಕೊಂಡು ಪಲಕಾಲಂ ತಪಂಗೆಯ್ದು ಸಮ್ಮೇದ ಪರ್ವತ
೧೦ ದೊಳ್ ಮೋಕ್ಷಕ್ಕೆ ವೋದರ್ ಮತ್ತಾ ಚಂದ್ರವೇಗಂಗೆ ನೂರ್ವರ್ ಪೆಣ್ಗೂಸುಗಳಾ
ದೊರವರ್ಗ್ಗಳತಿಶಯ ರೂಪುಲಾವಣ್ಯಮನೊಡೆಯೊರವರನಾ ಅಶನಿವೇಗಂ †ತನ್ನ
ಮಗಂ ವಜ್ರವೇಗಂಗನವರತಂ ಪಾಗುಡಮುಂ ಪೆರ್ಗ್ಗಡೆಗಳುಮನಟ್ಟುತ್ತಿರ್ಕ್ಕುಂ
ಮತ್ತಂ ಪೆಱರುಂ ವಿದ್ಯಾಧರರ್ಕ್ಕಳನವರತಂ ಕೂಸುಗಳಂ ಬೇಡಿಯಟ್ಟುತ್ತಿರೆ
ಆರ್ಗಂ ಕುಡಲೊಲ್ಲದೆ ಮತ್ತೊಂದು ದಿವಸಂ ಮಕ್ಕಳನಾರ್ಗೆ ಕುಡುವಮೆಂದು
ದೈವಜ್ಞನಂ ಬೆಸಗೊಂಡೊಡಾತನಿಂತೆಂದು ಪೇೞ್ದಂ ಮಾನಸಸರೋವರದೊಳ್
ಸಿತಯಕ್ಷನಂ ಯುದ್ಧದೊಳಾವೊಂ ಗೆಲ್ವೊಂ ಮತ್ತಶನಿವೇಗನ ಮಗಂ ವಜ್ರವೇಗನು
ಮಂ ಮುಷ್ಟಿಪ್ರಹಾರದಿಂ ಕೊಲ್ವೊನಾ ಅಶನಿವೇಗನುಮಂ ಸಂಗ್ರಾಮದೊಳ್
ನಿಪಾತಿಸುವನಾವನೊರ್ವ್ವನಾತಂಗೆ ನಿಮ್ಮ ಮಗಳಂ ಕುಡಿಮೆಂದು ದೇವಗುರು
ವೆಂಬ ನೈಮಿತ್ತಿಕಂ ಪೇೞ್ದಿಂ ಮತ್ತೆಯಾತನುಪದೇಶದಿಂ ತಱಿಸಂದ ಮನದೊ
೩೧ ನಾಗಿ ಸರ್ವಾಯುಧ ಸನ್ನದ್ಧರಾಗಿ ದಿವ್ಯರಥಂಬೆರಸು ಹರಿಶ್ಚಂದ್ರ ಚಂದ್ರಸೇನಕ್ಕ್ಕ
ಳೆಂಬ ಮಕ್ಕಳನಟ್ಟೊಡವರ್ಗ್ಗಳುಂ ಬಂದು ಕುಮಾರಂಗೆಱಗಿ ಪೊಡೆವಟ್ಟಂತೆಂದರ್
ರಥನೂಪುರಚಕ್ರವಾಳಪುರೇಶ್ವರನಪ್ಪ ಚಂದ್ರವೇಗಂಗಂ ಮಣಿದೇವಿಗಂ ಪುಟ್ಟ

---

೧. ಕಯ್ಗೂಡಿ (ಘ, ಚ, ಛ) ೨. ನಾರವಿಂದ (ಘ, ಚ). ೩. ಬೊರತಿ (ಕ, ಖ), ಬೊರತ್ತಲೆ (ಗ).
೪. ಹತಿಯಿ (ಘ, ಚ, ಛ). ೫. ಯೇವುದೆಂ (ಘ, ಚ, ಛ). †† (ಘ, ಚ, ಛ) ಗಳಲ್ಲಿ ಈ ಭಾಗ ಇಲ್ಲ.

ದೆವು ಹರಿಶ್ಚಂದ್ರ ಚಂದ್ರಸೇನಕ್ಕಳೆಮೆಮ್ಮಮ್ಮನ ಬೆಸದಿಂ ನಿಮ್ಮನೋಲಗಿಸಲ್ ಬಂದೆಮೆಂದು ಪೇಟ್ದು ಸುಖಸಂಕಥಾವಿನೋದದಿಂದಿರ್ಪನ್ನೆಗಮವರ ಬಟಿಯನೆ ಸಹೋದರರ್ಕಳಪ್ಪ ಚಂದ್ರವೇಗನುಂ ಭಾನುವೇಗನುಂ ತಮ್ಮುಳ್ಳ ಸಮಸ್ತಬಲಂ ಬೆರಸು ಕುಮಾರನಂ ಕೂಡಿದರ್

ಮತ್ತಿತ್ತ ಶನಿವೇಗಂ ತನ್ನ ಮಗನ ಕಟ್ಟಿದ ವೃತ್ತಾಂತಮೆಲ್ಲಮನವಳೋಕಿನಿ
ಯೆಂಬ ವಿದ್ಯೆ ಪೇಟೆ ಕೇಳ್ದಱಿದು ಮುಳಿದು ಗರ್ಜಿಸಿ ಮಸಗಿ ಸಮಸ್ತ ಬಲಂ
ಬೆರಸಿಂದ್ರನ ಮಱೆವೊಕ್ಕಡಮಮೋಘಂ ಕೊಲ್ವೆನೆಂದು ಮೇಲೆಟ್ಟಿಂದನಂ ಚಂದ್ರ
ವೇಗಂ ಕಂಡು ಸನತ್ಕುಮಾರಂಗಿಂತೆಂದಂ ದೇವಾ ನಾನಾವಿಧಮಪ್ಪ ವಿದ್ಯಾಧರ
ಯುದ್ಧಮಂ ನೀಂ ಕೆಮ್ಮನೆ ನೋಡುತ್ತಿರಾನೆ ಸಾಲ್ವೆನೆಂದು† [೧]ಸಂಗ್ರಾಮಕ್ಕ[೧]ಭಿ
ಮುಖನಾಗಿ ಕಾದಲ್ ತಗುಳ್ದನಿತ್ತ ಕುಮಾರನುಂ ಗಗನ ತಳದೊಳ್ ವಜ್ರಸಾರ
ಮೆಂಬ ರಥಮನೇಱಿ ಛತ್ರ ಚಾಮರ ಪಿಂಛಾತಪತ್ರ ಪಾಳಿಧ್ವಜ ಪತಾಕಾದ್ಯನೇಕ
ಮಹಾ ವಿಭೂತಿಯೊಳ್ ಕೂಡಿ ಸಂಗ್ರಾಮಮಂ[೨] ನೋಡುತ್ತಮಿರೆ ಮತ್ತ ಶನಿವೇಗಂ
ಕುಮಾರನಂ ಕಂಡು ಕ್ರೋಧಾಗ್ನಿ ಪೆರ್ಚಿ ಎನ್ನ ಮಗನಂ ಕೊಂದೊನಂ ಬೇಗಂ
ಮೃತ್ಯು [೩]ರಾಜನಂ ಕಾಣ್ಬಂತಿರೆ ಮಾಟ್ಪೆ[೩]ನೆಂದು ಮುಳಿದು ಮಸಗಿ ಬಪ್ಪೊನಂ
ಕುಮಾರಂ ಕಂಡಾಗಡೆ ಬಾಣಾಸನ ಹಸ್ತನಾಗಿ ಅರ್ಧಚಂದ್ರಮೆಂಬ ಸರದಿಂದಾತನ
ತಲೆಯಂ ಮೊಕ್ಕನೆವೋ[೪]ಗೆಚ್ಚಂ ಅಳೆದು ಜ್ವಲನ್ಮಣಿಮಕುಟಕುಂಡಲಂಗಳಿದೊಪ್ಪು
ತ್ತಿರ್ದುದು ವಿದ್ಯುತ್ಕಪಾಲಂಬೊಲ್ ನೆಲದೊಳ್ ಬಿಟ್ಟಿತ್ತಾಗಳಾ ತಲೆಯಂ ಮಱು
ವಕ್ಕದವರ್ ಕಂಡು ಕೆಲರಂಜಿ ತ್ರಸ್ತಾ[೫]ಭಿಭೂ[೫]ತರಾಗಿಯೋಡಿ ಕೆಲರ್ ಶರಣೆಂದು
ಕುಮಾರನ ಕಾಲ್ಗೆಱಗಿ ಪುಲ್ಲಂ ಕರ್ಚಿ ಪೊಡೆವಟ್ಟರ್ ಕುಮಾರನುಮಾಗಳಭಯ
ಘೋಷಣೆಯಂ ಪೊಯ್ಸುಯವಗ್ಗರ್ಭಯ ದಾನಮಂ ಕೊಟ್ಟನಾಗಳ್ ಚಂದ್ರ
ವೇಗನುಂ ಸಂಗ್ರಾಮ ಭೂಮಿ[೬]ಯನರ್ಚಿಸಿ[೬] ಮಹಾವಿಭೂತಿಯಿಂ ಕುಮಾರನನೊಡ
ಗೊಂಡು ಪೋಗಿ ಪೊಟಲಂ ಪೊಕ್ಕು ಪ್ರಶಸ್ತ ದಿನ ವಾರ ನಕ್ಷತ್ರ ಹೋರಾಮುಹೂರ್ತ
ಲಗ್ನದೊಳ್ ತನ್ನ ಮಕ್ಕಳ್ ಚಂದ್ರಮತಿ ಚಂದ್ರಶ್ರೀ ಚಂದ್ರಲೇಖೆ ಶಶಿಕಾಂತೆ
ಮನೋ[೭]ಹಾರಿಣಿ[೭] ಹರಿಣಾಂಕೆ ಕಮಲಮುಖಿ ಪ್ರಿಯದರ್ಶನೆಯೆಂದಿವರ್
ಮೊದಲಾಗೊಡೆಯ ನೂರ್ವರ್ ಕನ್ನೆಯರ್ಕ್ಕಳಂ ಪಾಣಿಗ್ರಹಣ ಪುರಸ್ಸರಂ [೮]ಕೊಟ್ಟ
ನಂತಾ ನೂರ್ವರ್ ಕನ್ನೆಯರ್ಕ್ಕಳುಂ [೯]ಮುನ್ನಿನ ಖೇಚರಿಯರ್ಕ್ಕಳುಂ[೯] ಪೆಱ[೧೦]ವು
ಮೆಂದಿವರೊಳ್[೧೦] ಕೂಡಿ ಕುಮಾರಂ ವಿದ್ಯಾಧರ ಶ್ರೇಣಿಯೊಳ್ ಸುಖಮನನುಭವಿ
ಸುತ್ತಿರ್ಪನ್ನೆಗಂ

---

೧. ಕುಮಾರಂಗ (ಘ, ಚ, ಛ). ೨. + ನಡೆ (ಘ, ಚ, ಛ). ೩. ಜಂಗೆ ಪಾಗುಡಮಟ್ಟುವೆ (ಘ, ಚ, ಛ). ೪. ಗಲೆಸುವುದುಮು (ಘ, ಚ, ಛ). ೫. ಭೀ (ಕ, ಖ, ಗ). ೬. ಯಂ ಪೊಱಮಟ್ಟು (ಛ). ೭. ರಮೆ (ಘ, ಚ). ೮. +ಕುಮಾರಂಗೆ (ಘ, ಚ, ಛ). ೯. (ಘ, ಚ, ಛ) ಗಳಲ್ಲಿಲ್ಲ. ೧೦. ರ್ ಕನ್ನೆಯರೊಳಂ (ಘ, ಚ, ಛ).

*ಮತ್ತೊಂದು ದಿವಸಂ ಚಂದ್ರವೇಗಂ ಸಿದ್ಧಕೂಟಕ್ಕೆ ವಂದನಾಭಕ್ತಿಗೆ ವೋಗಿ ದೇವರನರ್ಚಿಸಿ ವಂದಿಸಿ ಸುಮಾಳಿಗಳೆಂಬ[೧]ವಧಿ[೧]ಜ್ಞಾನಿಗಳಪ್ಪ ಚಾರಣ ರಿಸಿಯರಂ ಗುರುಭಕ್ತಿ ಗೆಯ್ದು ವಂದಿಸಿ ಧರ್ಮಮಂ ಕೇಳ್ದು ತದನಂತರಮಿಂತೆಂದಂ ಭಟಾರಾ ಸನತ್ಕುಮಾರಂಗಂ ಸಿತಯಕ್ಷಂಗಂ ವೈರಸಂಬಂಧಕ್ಕೆ ಕಾರಣಮೇನೆಂದು ಬೆಸಗೊಂಡೊಡೆ ಭಟಾರರುಂ ತತ್ಸಂಬಂಧಿಯಪ್ಪ ಕಥೆಯನಿಂತೆಂದು ಪೇಟಲ್ ತೊಡಗಿದರ್

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ಮಗಧೆಯೆಂಬುದು ನಾಡಲ್ಲಿ ಕಾಂಚನ ಮೆಂಬುದು ಪೊಟಲದನಾಳ್ವೊಂ ಪ್ರತಿಮುಖನೆಂಬರಸನಷ್ಟಶತಮಂತಃಪುರಕ್ಕಧಿಪ ನಾಗಿ ಕಾಲಂ ಸಲೆ ಮತ್ತಾ ಪೊಟಲೊಳ್ ನಾಗಚಂದ್ರನೆಂಬೊಂ ಸಾರ್ಥಾಧಿಪತಿ
೧೦ ಯಾತನ ಭಾರ್ಯೆ ವಿಷ್ಣುಶ್ರೀಯೆಂಬೊಳತ್ಯಂತ ರೂಪಲಾವಣ್ಯ ಸೌಭಾಗ್ಯ ಕಾಂತಿ ಹಾವಭಾಷವಿಳಾಸವಿಭ್ರಮಂಗಳಿಂ ಕೂಡಿದೊ[೨]ಳೊಂದು ದಿವಸಂ ಅರಸನು[೨] ದ್ಯಾನವನಕ್ಕೆ ಪೋಗುತ್ತಂ ಪ್ರಾಸಾದ[೩]ದೊಳಿರ್ದ ದೇವಾಂಗನಾಸನ್ನಿಭೆಯಪ್ಪ[೪]ಳಂ ಕಂಡು ಕಾಮಶರಂಗಳಿಂ ಜರ್ಝರಿತ ಹೃದಯನಾಗಿ [೫]ಮಂ[ತ್ರ][೫] ಪ್ರಯೋಗ ದಿಂದಂ ವಿಷ್ಣುಶ್ರೀಯನೊಳಕೊಂಡನಾಕೆಯು ಮಾತಂಗಗ್ರ ವಲ್ಲಭೆಯಾಗಿ ಸಲ್ವೊಳಂ [೬]ಸಮಸ್ತಮಂತಃಪುರಮಾ[೬]ಕೆಗೆ ಮುಳಿಯುತ್ತಿ[೭]ರ್ಕುಮೊಂ[೭]ದು ದಿವಸಂ ಸಾರ್ವ ಭೌಮನೆಂಬ ಪಟ್ಟವರ್ಧನ ಗಜಂ ಸೊರ್ಕಿ ಮಸಗಿ [೮]ಕ[೮]ಟ್ಟುಗಳೆಲ್ಲಮಂ ಪಱಿದು ಹತತವಿತತ ಕೋಳಾಹಳಮೆಟೆದು ಪೊಟಲೆಲ್ಲಮಂ ಕೊಲ್ವುದನರಸಂ ಕೇಳಾ ನೆಯಂ ಕಟ್ಟಸಲೆಂದು ಪೋದನನ್ನೆಗಮಿತ್ತ ಅನಿಬರರಸಿಯರ್ಕಳ್ ನೆರೆದು ವಿಷಪ್ರಯೋಗದಿಂದರ್ [೯]ಕೊಂದಾರುಮಱಿಯದಂತಿರೆ ಶ್ಮಶಾನದೊಳೀಡಾ[೧೦]ಡಿ
೨೦ ದೊ[೧೦]ರನ್ನೆಗಮರಸನುಮಾನೆಯುಮಂ ಕಟ್ಟಿಸಿ ಬಂದರಸಿಯಂ ಕಾಣದೆಲ್ಲಿರ್ದಳೆಂದು ಬೆಸಗೊಂಡೊಡೆ ಸತ್ತಳೆಂ[೧೧]ಬಾ[೧೧] ಮಾತಂ ಕೇಳ್ದು ಮೂರ್ಛಿತನಾಗಿ ನೀಡಱಿಂ ದೆಚ್ಚಿರ್ದು ಮಹಾದುಃಖಂ ಗೆಯ್ದು ಶ್ಮಶಾನಕ್ಕಾಕೆಯ ದೇಹಮಂ ನೋಡಲೆಂದು ಪೋಗಿಯದಱ ಭೀಭತ್ಸಮಂ ಕಂಡಾದಮಾನುಂ ಪೇಸಿ ಶರೀರವೈರಾಗ್ಯಮನೊಡೆಯ ನಾಗಿ ಅನ್ಯಾಯದಿಂ ಪರಸ್ತ್ರೀಹರಣಂಗೆಯ್ದೆಂ ಮಹಾಪಾತಕನೆನೆಂದು ತನ್ನಂ ತಾನಾದಮಾನುಂ ನಿಂದಿಸಿ ವಿಮಳವಾಹನನೆಂಬ ಪಿರಿಯ ಮಗಂಗೆ ರಾಜ್ಯಪಟ್ಟಂ ಗಟ್ಟಿ ಸುವ್ರತರೆಂಬಾಚಾರ್ಯರ ಪಕ್ಕದೆ ದೀಕ್ಷೆಯಂ ಕೈಕೊಂಡು ಪಲಕಾಲಂ ತಪಂ ಗೆಯ್ದು[೧೨] ಸಮಾಧಿ ಮರಣದಿಂ ಮುಡಿಪಿ ಪ್ರಾಣತ ಕಲ್ಪದೊಳಿರ್ಪತ್ತು ಸಾಗರೋಪ ಮಾಯುಷ್ಯಸ್ಥಿತಿಯನೊಡೆಯೊಂ ಪ್ರತೀಂದ್ರನಾಗಿ ಪುಟ್ಟಿ ದೇವಲೋಕದ ದಿವ್ಯ

---

* (ಖ) ದಲ್ಲಿ ನಷ್ಟವಾಗಿದೆ. ೧. ದಿವ್ಯ (ಘ, ಚ, ಛ). ೨. ಳ್ ಮತ್ತಾ ಪ್ರತಿಮುಖನೊಂದು
೩೦ ದಿವಸಂ ಬಹಿರು (ಘ, ಚ, ಛ). ೩. +ತಳ (ಘ, ಚ, ಛ). ೪. +ವಿಷ್ಣುಶ್ರೀಯಂ (ಘ, ಚ, ಛ). ೫. ಮಂತ್ರಿಯ (ಕ, ಖ, ಗ), ಮಂತ್ರಿ (ಘ, ಚ, ಛ). ೬. ಕಂಡಾತನುಳಿದರಸಿಯರಾ (ಘ, ಚ, ಛ). ೭. ದ್ದೊಂ (ಘ, ಚ, ಛ). ೮. ಕಾಲ್ಗ (ಘ, ಚ, ಛ). ೯. + ವಿಷ್ಣುಶ್ರೀಯಂ (ಘ, ಚ, ಛ). ೧೦. ಡಿಸಿದೋ (ಚ). ೧೧. ದೊಡಾ (ಚ). ೧೨. + ಸಮ್ಯಗ್ದರ್ಶನ ಜ್ಞಾನ ಚಾರಿತ್ರಮಂ ಸಾದಿಸಿ (ಘ, ಚ, ಛ).

ಸುಖಮಂ ಪಲಕಾಲಮನುಭವಿಸಿ ಬಂದಿಲ್ಲಿ ಜಂಬೂದ್ವೀಪದ ಭರತಕ್ಷೇತ್ರದೊಳ್ ಮಗಧೆಯೆಂಬುದು ನಾಡಲ್ಲಿ ಕನಕ[೧]ಮೆಂಬುದು ಪೊಬಲದನಾಳ್ವೊಂ ಹರಿವಾಹನ ನೆಂಬರಸಂ ಮತ್ತಮಾ ಪೊಬಲೊಳ್ ರಾಜಶ್ರೇಷ್ಠಿ ಅರ್ಹದ್ದಾಸನೆಂಬೊನಾತನ ಭಾರ್ಯೆ ಜಿನದತ್ತೆಯೆಂಬೊಳಾ ಇರ್ವ್ವರ್ಗ್ಗ[೨] ಮಗಂ ಜಿನವರ್ಮನೆಂಬೊನಾಗಿ ಪುಟ್ಟಿ ರೂಪಲಾವಣ್ಯ ಸೌಭಾಗ್ಯ ಕಾಂತಿತ್ವದಿಂದಾದಮಾನುಂ ನೆಟೆ[೩]ದೊನಾಗಿ ಇಂತು ಕಾಲಂ ಸಲೆ ಅರ್ಹದ್ದಾಸಂಗೇನಾನುಮೊಂದು ಕಾರಣದಿಂ[೪]ದಂ ವೈರಾಗ್ಯಮಾಗಿ ಜಿನವರ್ಮಂಗೆ ರಾಜಶ್ರೇಷ್ಠಿ ಪದಮಂ ಕೊಟ್ಟು ಶಿವಗುಪ್ತಾಚಾರ್ಯರ ಪಕ್ಕದೆ ದೀಕ್ಷೆಯಂ ಕೈಕೊಂಡು [೫]ತಪಂಗೆಯ್ದು[೫] ಮೋಕ್ಷಕ್ಕೆ ವೋದನ್ ಮತ್ತಿತ್ತ ಜಿನ ವರ್ಮನುಂ ಪಲವುಂ ಜಿನಾಲಯಂಗಳಂ ಮಾಡಿಸಿ ದಾನಪೂಜೆ ಶೀಲೋಪವಾಸ ಮೆಂದಿಂತು ಚತುರ್ವಿಧಮಪ್ಪ ಶ್ರಾವಕಧರ್ಮದೊಳಗ್ಗಳನಾಗಿ ನೆಗಟುತ್ತಮಿಂತು ೧೦
ಪಲಕಾಲಂ ಸಲೆ

ಮತ್ತಾ ಮುನ್ನಿನ ಭವದ ನಾಗಚಂದ್ರನೆಂಬೊಂ ಸಾರ್ಥಾಧಿಪತಿ ವಿಷ್ಣು ಶ್ರೀಯೆಂಬ ತನ್ನ ಭಾರ್ಯೆಯ ವಿಯೋಗಂ ಕಾರಣಮಾಗಿ ಆರ್ತರೌದ್ರಧ್ಯಾನದಿಂ ಸತ್ತು [೬]ತಿರ್ಯಜ್ಞರ[೬]ಕಾದಿಗಳೊಳ್ ಪಲಕಾಲಂ ತೊಟಲ್ದೀ ಭರತಕ್ಷೇತ್ರದೊಳ್ ಕಪಿಲ ನೆಂಬ ಪಾರ್ವ್ವಂಗಂ ಗಂಗೆಯೆಂಬ ಪಾರ್ವ್ವಂತಿಗಂ ಭಾರದ್ವಾಜನೆಂಬ ಮಗನಾಗಿ ಪುಟ್ಟಿ ಕನಕದಂಡಿಯೆಂಬ ಪರಿವ್ರಾಜಕಂಗೆ ಶಿಷ್ಯನಾಗಿ ನಾನಾದೇಶಂಗಳಂ ವಿಹರಿಸುತ್ತಂ ಕನಕಪುರಕ್ಕೆ ವಂದು ಮಾಸೋಪವಾಸಂಗೆಯ್ಯುತ್ತಂ ಮಹಾ ತಪಸ್ವಿಯಾಗಿ ನೆಗಟುತ್ತಿರೆ ತತ್ಪುರಾಧಿಪಂ ಹರಿವಾಹನನೆಂಬರಸಂ ಕಂಡಾದ ಮಾನುಮಾ ತಪಸ್ವಿಗೆ ಭಕ್ತನಾಗಿ ಬೆಸಕೆಯ್ಯೆ ಕಾಲಂ ಸಲೆ ಮತ್ತೊಂದು ದಿವಸ ಮರಸನೊಡನೆ ಜಿನವರ್ಮನಾ ಪರಿವ್ರಾಜಕನ ನಿವಾಸಕ್ಕೆ ವೋದೊಡೆ ಜಿನವರ್ಮನಂ ೨೦
ಕಂಡು [೭]ಪೂರ್ವ ವೈರ[೭]ಸಂಬಂಧದಿಂದಾದ ಕ್ರೋಧಾಗ್ನಿ ಪೆರ್ಚಿ ಮಱುಗುತಿರ್ದ್ದ ಮನಮನೊಡೆಯ [೮]ತಪಸ್ವಿಯ[೮]ನರಸನಿಂತೆಂದಂ ನೀಮೆಮ್ಮ ಮನೆಯೊಳ್ [೯]ಪಾರಿಸಲ್ವೇಟ್ಪುದೆಂ[೯]ದು ಪ್ರಾರ್ಥಿಸಿದೊಡಾತನಿಂತೆಂದಂ ಒಂದು ಪಾಂಗಿನೊಳ್ ನಿಮ್ಮ ಮನೆಯೊಳ್ [೯]ಪಾರಿಸು[೯]ವೆನೀ ಜಿನವರ್ಮನ ಬೆನ್ನೊಳಡಿಯಿಲ್ಲದ ತಳಿಗೆಯ ನಿಟ್ಟು ಬಿಸಿಯ ತುಯ್ಯಲನುಣ್ಬುದೆನಗಟ್ಟಿಯಾ ಪಾಂಗಿನೊಳೆನ್ನನೂಡಲಾರ್ಪೊಡುಣ್ಬೆ ನಲ್ಲದಾಗಳುಣ್ಣೆನೆಂದು ಪೇೞ್ದೊಡೆ ಕೇ[೧೦][ಳ್ದಚ್ಚಿ][೧೦]ಗನಾದರಸನಂ ಜಿನವರ್ಮಂ ಕಂಡಿಂತೆಂದಂ ದೇವಾ ತಪಸ್ವಿಗಾವ ಪಾಂಗಿನೊಳ್ ಮೆಚ್ಚು ಮೆಚ್ಚಿದ ಪಾಂಗಿ ನೊಳುಣ್ಗೆಂದೊಡಂಬಟ್ಟನಾಗಳಾ ಗರ್ಭಸುಖಿಯ ಬೆನ್ನೊಳ್ ಪಿರಿಯ [೧೦]ಪರಿ ಯಾಣಮ[೧೦]ನಿಟ್ಟದಂ ತೆಕ್ಕನೆ ತೀವಿ ಬಡ್ಡಿಸಿದೊಡೆ ಕುದಿಯುತ್ತಿರ್ದ್ದ ತುಯ್ಯಲಂ [೧೧]ತಣ್ಣಿತ್ತಾಗಿಯಾ[೧೧]ಜುವನ್ನೆಗಂ ಪಾರುತ್ತಿರ್ದ್ದು ನೀಡುಂ ಬೇಗಮುಂಡು ಸಮೆದ ೩೦

---

೧. +ಪುರ (ಛ). ೨. ದಾದಮಾನುಂ (ಛ, ಚ, ಛ). ೩. ಸಮ್ಯಗ್ದರ್ಶನ ಜ್ಞಾನ ಚಾರಿತ್ರಮುಂ ಸಾದಿಸಿ (ಛ, ಚ, ಛ). ೪. ನರಕತಿರಿ (ಕ, ಗ). ೫. (ಕ, ಗ)ಗಳಲ್ಲಿಲ್ಲ. ೬. (ಕ, ಗ) ಗಳಲ್ಲಿಲ್ಲ. ೭. ಪರಸಲ್ವೇಟ್ಪುದೆಂ (ಕ, ಖ, ಗ). ೮. ಪರಸು (ಕ, ಖ, ಗ). ೯. ಕಗಿಜ್ಜಿ (ಕ, ಗ), ಳ್ದಜ್ಜು (ಛ, ಚ, ಛ). ೧೦. ತಳಿಗೆಯ (ಛ, ಚ, ಛ). ೧೧. ತನ್ನಿಂ ತಾನಾ (ಕ, ಗ).

ಬಟ್ಟಿಕ್ಕೆ ತಳಿಗೆಯನೆತ್ತಿದೊಡಾ ತಳಿಗೆಯೊಡನೆ ಬೆನ್ನ ತೊ೧ವ೧ಲೆಲ್ಲಮೆದ್ದು ಪೋದುದ
ನರಸಂ ಕಂಡೀತಂ ತಪಸ್ವಿಯಲ್ಲಂ* ರಾಕ್ಷಸಂ ಪಂಚಮಹಾಪಾತಕನನೀ
ಪೊಟಲೊಳಿರಲೀಯದಟ್ಟಿ ಕೌಳಿಯಿಮೆಂದು ನೃಪತಿ ಮುಳಿದೊಡೆ ಜಿನವರ್ಮಂ
ತಪಸ್ವಿಗೆ ಮುಳಿಯಲ್ತೀಡೆಂದು ಬಾರಿಸಿ ಈತಂಗೇನುಂ ದೋಷಮಿಲ್ಲೆನ್ನ ಪೂರ್ವಕೃತ
ಕರ್ಮಫಳವಿಪಾಕಮೆಂದು ನೃಪತಿಗೆ ಪೇೞ್ದು ಪರಿವ್ರಾಜಕಂಗೆ ನಿಶ್ಶಲ್ಯಂಗೆಯ್ದು
ರಸನುಮಂ ಸ್ವಜನ ಪರಿಜನ ಬಂಧುವರ್ಗಮುಮಂ ಬಿಡಿಸಿ ಶ್ರೀವರ್ಮರೆಂಬಾ
ಚಾರ್ಯರ ಪಕ್ಕದೆ ದೀಕ್ಷೆಯಂ ಕೈಕೊಂಡು ಮಹಿಷಗಿರಿಯೆಂಬ ಪರ್ವತದೊಳೀ
ಪು೪[ಣ್]೪ ತೀರ್ವನ್ನೆಗಂ ಕೈಯನೆತ್ತಿಕೊಳ್ಳೆನೆಂದು ಕಾಯೋತ್ಸರ್ಗದಿಂ ನಿಂದೊನಂ
ಗೃಧ್ರವಾಯಸಾದಿಗಳ್ ಪುಣ್ಣಂ ತೋಡಿ ತಿನೆ ಮೇರುಪರ್ವತಂ ಬೊಲಚಳಿತ
೧೦ ಧೈರ್ಯನಾಗೊಂದು ತಿಂಗಳ್ವರೆಗಂ ಸೈರಿಸಿ೫ ಸಮಾಧಿಮರಣದಿಂ ಮುಡಿಪಿಯಚ್ಯುತ
ಕಲ್ಪದೊಳಿರ್ಪತ್ತೆರಡು ಸಾಗರೋಪಮಾಯುಷ್ಯಸ್ಥಿತಿಯನೊಡೆಯೊನಚ್ಯುತೇಂದ್ರ
ನಾಗಿ ಪುಟ್ಟಿಯಲ್ಲಿಯ ದೇವಲೋಕದ ದಿವ್ಯಸುಖಮಂ ಪಲಕಾಲಮನುಭವಿಸಿ
ಬಂದಿಲ್ಲಿ ಸನತ್ಕುಮಾರನಾದನಾ ಪರಿವ್ರಾಜಕನುಮಾಯಚ್ಯುತೇಂದ್ರಂಗೆ ವಾಹನ
ದೇವನಾ೬ದೊನ೬ಲ್ಲಿಂ ಬಟ್ಟಿಬಂದಿಲ್ಲಿ ಚತುರ್ಗತಿ ಸಂಸಾರದೊಳ್ ನೀಡುಂ
ತೊಟಲ್ದಂಜನಗಿರಿಯೆಂಬ ಪರ್ವತದ ತಟದೊಳ್ ತಾಪಸಾಶ್ರಮದೊಳ್ ವಸಿಷ್ಠ
ನೆಂಬ ತಾಪಸಂಗಂ ೭ಘೂಕೆ೭ಯೆಂಬ ತಾಪಸಿಗಂ ೮ಬಕ೮ನೆಂಬೊಂ
ಮಗನಾಗಿ ಪುಟ್ಟಿ ತಾಪಸ ತಪಮಂ ಕೈಕೊಂಡು ನೆಗಟ್ಟು ಮಡಿದು ಸಿತಯಕ್ಷನಾದ
ನೆಂದಿಂತಿರ್ವರ ಪೂರ್ವಭವವೈರಸಂಬಂಧಿಯಪ್ಪ ಕಥೆಯಂ ಸವಿಸ್ತರಮಾಗಿ
ಸುಮಾಳಿಗಳೆಂಬವಧಿಜ್ಞಾನಿಗಳಪ್ಪ ಚಾರಣರಿಸಿಯರ್ ಪೇೞೆ ಎಮ್ಮ ಸ್ವಾಮಿಯಪ್ಪ
೨೦ ಖಚರೇಂದ್ರಂ ಕೇಳ್ದಾದಮಾನುಂ ಸಂತುಷ್ಟಚಿತ್ತನಾಗಿ ಭಟಾರರಂ ಬಂದಿಸಿ
ತನ್ನ ಪೊಟಲ್ಗೆ ಪೋದನ್

ಎಂದಿಂತು ಕಥಾಸಂಬಂಧಮೆಲ್ಲಮುಂ ಕಮಳಮತಿಯೆಂಬ ಖೇಚರವಿಳಾಸಿನಿ
ಸನತ್ಕುಮಾರಂ ಪೇೞವೇೞ್ದೊಡೆ ಮಹೇಂದ್ರಸಿಂಹಂಗೆ ಪೇೞ್ದೊಳಾ ೯ಅವಸರ೯
ದೊಳ್ ಕುಮಾರಂ ನಿದ್ರಾಸುಖವಿಮುಕ್ತನಾದೊಡಾತನ ಸಮೀಪಕ್ಕೆ ಮಹೇಂದ್ರ
ಸಿಂಹಂ ಪೋಗಿ ಇಂತೆಂದಂ೧೦ ನಿನ್ನ ವಿಯೋಗದೊಳಪ್ಪ ದುಃಖದಿಂದಂ ೧೧ವಿಶ್ವಸೇನ
ಮಹಾರಾಜನುಂ ಸಹದೇವಿ ಮಹಾದೇವಿ ಮೊದಲಾಗೊಡೆಯವರ್ಗಳೆಲ್ಲಂ ಪ್ರಾಣ
ಸಂದೇಹಮಾಗಿರ್ಕ್ಕು೧೧ಮದಱಿಂ ನಿಮ್ಮ ಪೊಟಲ್ಗೆ ೧೨ಪೋಗಲ್ವೇೞ್ಕು೧೨ಮೆಂದು
ಪೇೞ್ದೊಡಾತನುಮಂತೆಗೆಯ್ವೆನೆಂದು ತಮ್ಮ ಮಾವಂಗಳಂ ೧೩ಬೀಡಿ೧೩ಸಿ ವಿಚಿತ್ರ
ಮಪ್ಪ ರಥಗಜ ತುರಗ ಗರುಡ ಕಳಹಂಸ ಮಯೂರ ಮಕರ ಸಿಂ೧೪ಹ ವಿಮಾನಾಧಿ
೩೦ ರೂಢಕ್ಕಳಪ್ಪ೧೪ ವಿದ್ಯಾಧರಕ್ಕಳುಮಷ್ಟಸಹಸ್ರ ಸಂಖ್ಯಾ ಪ್ರಮಾಣಮಪ್ಪರಸಿ

---

೧. ಗ (ಕ, ಗ). ೨. ಳಿಪಿ (ಘ, ಚ, ಛ). ೩. (ಕ, ಖ, ಗ) ಗಳಲ್ಲಿಲ್ಲ. ೪. ಂಣು (ಸ). ೫. +ಸಮ್ಯಗ್ದರ್ಶನ ಜ್ಞಾನ ಚಾರಿತ್ರಂಗಳಂ ಸಾದಿಸಿ (ಘ, ಚ, ಛ). ೬. ನಾಗಿ ಪುಟ್ಟಿಯ(ಕ,ಖ,ಗ). ೭. ಗಘ್ಯಂಗೆ (ಕ, ಖ, ಗ). ೮. ಜಠರ (ಕ, ಖ, ಗ). ೯. ಪ್ರಸ್ತಾವ (ಘ, ಚ, ಛ). ೧೦. +ನಿನ್ನ ತಾಯ್ಗಂ ತಂದೆಗಂ (ಚ, ಛ). ೧೧. ಪ್ರಾಣಸಂದೇಹಕ್ಕೆ ವಂದಿರ್ಕುಂ (ಚ, ಛ). ೧೨. ಬೇಗಂಪೋಪ (ಚ, ಛ). ೧೩. ಬರಿ (ಕ, ಗ). ೧೪. ಹಾದ್ಯನೇಕ ವಿವಿಧ ವಾಹನಾರೂಢರ್ಕಳುಮಪ್ಪ (ಛ).

ಯಕ್ಕರ್ಳುಂ ಬೆರಸು ಮಹಾವಿಭೂತಿಯಿಂದಂ ಬಂದು ಹಸ್ತಿನಾಪುರಮುಂ ಪೊಕ್ಕ
ನಿಬರುಂ ವಿಶ್ವಸೇನಮಹಾರಾಜಂಗಂ ಸಹದೇವಿ ಮಹಾದೇವಿಗಂ ಸಾಷ್ಟಾಂಗ
ಮೆಱಗಿ ಪೊಡೆವಟ್ಟು ಅವರಾಶೀರ್ವಚನ ಶತಸಹಸ್ರಂಗಳನಾಂತು ಕೊಂಡು ಸುಖ
ದಿಂದಿರೆ ಸನತ್ಕುಮಾರಂಗೆ ಚಕ್ರಂಪುಟ್ಟಿ ಸಕಳ ಚಕ್ರವರ್ತಿಯಾಗಿ ಭೋಗೋಪ
ಭೋಗಂಗಳೆಂಬ ಮಹಾ ಸಮುದ್ರದೊಳ್ ಪಲಕಾಲಂ ಕ್ರೀಡಿಸುತ್ತಿರ್ಪನ್ನೆಗಂ

ಮತ್ತೊಂದು ದಿವಸಂ ಸೌಧರ್ಮ ಕಲ್ಪದೊಳಾ ಸೌಧರ್ಮೇಂದ್ರಂ ತನ್ನ ದೇವ
ಸಭೆಯ ನಡುವೆ ಸಿಂಹಾಸನ ಮಸ್ತಕಸ್ಥಿತಂ ದೇವಕ್ಕರ್ಳಿಂ ಪರಿವೇಷ್ಟಿತನಾಗಿ
೧ಸೌದಾ[ಮಿ]ನಿ೧ಯೆಂಬ ನಾಟಕಮುಂ ನೋಡುತ್ತಿರ್ಪನ್ನೆಗಂ ಈಶಾನಕಲ್ಪ
ದಿಂದಂ ೨ಸಹೋ೨ತ್ಪನ್ನ ಸಂಗಮದೇವಂ ಬಂದು ಸೌಧರ್ಮೇಂದ್ರನ ಸಭೆಯ
೩ನವಯವ೩ದಿಂ ಪೊಕ್ಕಿರ್ದ್ದಾಗಳಾ ಸಭೆಯೊಳಿರ್ದ್ದ ದೇವಕ್ಕಳ ರೂಪುಂ ತೇಜಮುಂ ೧೦
ಲಾವಣ್ಯಮುಮೆಲ್ಲಮುಂ ಮಾಸಿಸಿ ತನ್ನ ತೇಜಮೆಯಗ್ಗಳವಾಗಿರ್ದ್ದೊಡೆಂತು ಚಂದ್ರ
ನುದಯಂಗೆಯ್ದಾಗಳ್ ಗ್ರಹನಕ್ಷತ್ರತಾರೆಗಳ ತೇಜಂ ಕುಂದುಗುಮಂತೆಲ್ಲರ ತೇಜ
ಮುಮುಂ ಕುಂದಿಸಿ ತಾನೆಯಗ್ಗಳಮಾಗೆ ೪ಬೆಳಗುತ್ತಿರ್ದೊನಂ೪ ದೇವಕ್ಕರ್ಕಳೆಲ್ಲಂ
ವಿಸ್ಮಯಂಬಟ್ಟು ನೋಡಿ ಸೌಧರ್ಮೇಂದ್ರನನಿಂತೆಂದು ಬೆಸಗೊಂಡರ್ ಸ್ವಾಮಿ
ಈ ಸಂಗಮನೆಂಬ ದೇವನತಿಶಯಮಪ್ಪ ರೂಪುಂ ಲಾವಣ್ಯಮುಂ ತೇಜಮುಂ ದ್ವಾದ
ಶಾದಿತ್ಯರ್ಕ್ಕಳೊರ್ಮೊದಲೆ ಉದಯಂಗೆಯ್ದಂತೆ ಬೆಳಗಿದಪ್ಪುದೇಕಾರಣದಿಂದಾದು
ದೆಂದು ಬೆಸಗೊಂಡೊಡಿಂತೆಂದು ಸೌಧರ್ಮೇಂದ್ರಂ ಪೇೞಲ್ ತೊಡಗಿದನ್

ಈತಂ ಮುನ್ನಿನ ಭವದೊಳ್ ಈ ಜಂಬೂದ್ವೀಪದ೫ ಪೂರ್ವವಿದೇಹದೊಳ್
೬ಸೀತೆಯೆಂಬ ತೊೞೆಯ ಬಡಗಣ ದೆಸೆಯೊಳ್೬ ಪುಷ್ಕಳಾವತಿಯೆಂಬುದು ನಾಡಲ್ಲಿ
ಪುಂಡರೀಕಿಣಿಯೆಂಬುದು ಪೊಟಿಲದನಾಳ್ವೊಂ ಸಕಳ ಚಕ್ರವರ್ತಿ ವಿಮಳವಾಹನ ೨೦
ನೆಂಬರಸನಾತನ ಮಹಾದೇವಿ ೭ವಿಮಳ೭ಮತಿಯೆಂಬೊಳಾ ಇರ್ವ್ವರ್ಗ್ಗಂ
ಪುಟ್ಟಿದೊಂ ಮಗಂ ಕ್ಷೀರಕುವಾರನೆಂಬೊನಾತಂ ವೈರಾಗ್ಯಮನೊಡೆಯನಾಗಿ
ತಪಂಬಡಲ್ಕೆಂದು ಬಗೆದಿರ್ದ್ದೊಡೆ ತಾಯ್ ತಪಂಬಡಲೀಯದೆನಿತಾನುಂ ತೆೞದಿಂ
ನುಡಿದು ೮ತಗುಳ್ದೊಡೆ೮ ತಾಯ ವಚನಮನತಿಕ್ರಮಿಸಲಾೞದೆ ಮನೆಯೊಳಿರ್ದ್ದಂತೆ
ಬ್ರಹ್ಮಚರ್ಯಂ ಮೊದಲಾಗೊಡೆಯ ವ್ರತಂಗಳಂ ಪ್ರತಿಪಾಳಿಸಿ ೯ಆಚಾಮ್ಲವರ್ಧನ್೯
ಮೆಂಬ ನೋಂಪಿಯಂ ಪನ್ನೆರಡು ವರ್ಷಂಬರಂ ನೋಂತು ಸಮಾಧಿಮರಣದಿಂದಂ
ಮುಡಿಪೆ ಇಂತಪ್ಪ ರೂಪುಂ ತೇಜಮುಂ ಲಾವಣ್ಯಮುಮದೞಿಂದೀತಂಗಾದುದೆಂದು
ಸೌಧರ್ಮೇಂದ್ರಂ ಪೇೞ್ದೊಡೆ ಮತ್ತಂ ದೇವಕ್ಕರ್ಕಳಿಂತೆಂದು ಬೆಸಗೊಂಡರ್ ಸ್ವಾಮಿ
ಈತನಂತಪ್ಪ ರೂಪುಂ ತೇಜಮುಂ ಲಾವಣ್ಯಮುಮನೊಡೆಯರ್ ಪೆೞರಾರಾನು
ಮೊಳರೆ ಎಂದು ಬೆಸಗೊಂಡೊಡೆ ಸೌಧರ್ಮೇಂದ್ರ೧೦ನೆಂದನೊಳನ್೧೦ ಹಸ್ತಿನಾಪುರ ೩೦

---

೧. ಸೋಕಾಮಣಿ (ಕ,ಖ,ಗ), ಸೌದಾಮನಿ (ಘ,ಚ,ಛ). ೨. ಸಾಹಸೋ (ಘ,ಚ,ಛ). ೩. ನೆವ (ಘ, ಚ, ಛ). ೪. ಸಭೆಯೊಳಿರ್ದ (ಕ, ಖ, ಗ). ೫. + ಭರತದ (ಖ). ೬. (ಘ, ಚ, ಛ) ಗಳಲ್ಲಿಲ್ಲ. ೭. ಲಕ್ಷ್ಮೀ (ಘ, ಚ, ಛ). ೮. ನಿಲಿಸಿದೊಡೆ (ಘ, ಚ, ಛ). ೯. ಯಾಯಲವರ್ಧಮಾನ (ಕ, ಗ), ಯಾಯಲವರ್ಗಮಾನ (ಖ), ಯಾಯಂಬಿಲವರ್ಧಮಾನ (ಚ). ೧೦. ನೊರ್ವನೊಳನಾತಂ (ಛ).

ದೊಳ್ ಕುರುವಂಶದಾತಂ. ಸನತ್ಕುಮಾರನೆಂಬೊಂ[೧] ಚಕ್ರವರ್ತಿಯಾತಂ[೨] ದೇವರ್ಕಳ ರೂಪುಂ ಲಾವಣ್ಯಮುಂ ತೇಜಮುಮನೊಡೆಯನಾದಮಾನುಮಗ್ಗಳ ಮೆಂದು ಪೇೞ್ದೊಡೆ

ಇಂದ್ರನ ಮಾತಂ ನಂಬದೆ ವಿಜಯ ವೈಜಯಂತರೆಂಬರಿರ್ವರ್ ದೇವರ್ಕಳ್ ಪಾರ್ವರ ರೂಪಂ ಕೈಕೊಂಡು ಹಸ್ತಿನಾಪುರಕ್ಕೆ ಸನತ್ಕುಮಾರ ಚಕ್ರವರ್ತಿಯ ರೂಪಂ ನೋಡಲೆಂದು ಬಂದು ಬಾಗಿಲೊಳಿರ್ದ್ದ ಪಡಿಯಱರನೆಂದರ್ ನಿಮ್ಮರಸಂಗಿಂತೆಂದು ಪೇೞಿಂ ಗೆಂಟಱಿಂ ಬಂದೆವು[೩] ನಿಮ್ಮ ರೂಪನಟ್ಟಿವಟ್ಟು ನೋಡಲ್ಕೆಂದೊಡವರುಂ ಪೋಗಿ ತಮ್ಮರಸಂಗಱಿಪಿದೊಡೆ ಅರಸನನುಮತದಿಂದವರರಮನೆಯಂ ಪೊಕ್ಕರಸನ ಸಾರೆವೋಗಿ ನೋಟ್ಪಾಗಳರಸಂ ಸುಗಂಧ ತೈಲದಿಂ ಮೆಯ್ಯನಭ್ಯಂಗ ನಂಗೆಯ್ದು ಮಜ್ಜನಂಬುಗಲೆಂದಿರ್ದ್ದವಸರದೊಳ್ ದೇವರ್ಕ್ಕಳ್ ಸನತ್ಕುಮಾರ ಚಕ್ರವರ್ತಿಯ ರೂಪಂ ವಾಳಾಗ್ರದಿಂ ತೊಟ್ಟು ನಖಾಗ್ರಂಬರೆಗಂ ನಖಾಗ್ರದಿಂ ತೊಟ್ಟು ವಾಳಾಗ್ರಂಬರೆಗಂ [೪]ಏಱೆಯುಮಿಟಿಯೆಯುಂ[೪] ನೀಡುಂ ಭಾವಿಸಿ ನೋಡಿ ಚೋದ್ಯಂಬಟ್ಟಂತು ರೂಪುಂ ತೇಜಮುಂ ಗಾಡಿಯುಂ ಯೌವನಮುಂ ದೇವರ್ಕ್ಕಳ್ಗಮಿಲ್ಲೆಂದು ಚಕ್ರವರ್ತಿಯ ರೂಪಂ ಪೊಗೞ್ದೊಡರಸನಿಂತೆಂದಂ ನೀಮಾರ್ಗ್ಗೀನೆಂಬಿರೆಲ್ಲಿಂ ಬಂದಿರೆಂದು ಬೆಸಗೊಂಡೊಡವರೆಂದರ್ ದೇವಲೋಕದಿಂ ಬಂದೆ[೫]ವು ದೇವರ್ಕಳೆವು ಸೌಧರ್ಮಕಲ್ಪದೊಳ್ ದೇವರ್ಕಳ ಸಭೆಯ ನಡುವೆ ಸೌಧರ್ಮೇಂದ್ರಂ ನಿಮ್ಮ ರೂಪನಾದಮಾನುಂ ನಚ್ಚಿ ಬಣ್ಣಿಸಿದೊಡಿಂದ್ರನ ಮಾತಂ ನಂಬದೆ ನಿಮ್ಮಂ ನೋಡಲ್ ಬಂದೆಮಿಂದ್ರನ ವ್ಯಾವರ್ಣಿಸುವುದರ್ಕ್ಕಗ್ಗಳಮೆ ನಿಮ್ಮ[೬] ರೂಪುಂ[೭] ಯವ್ವನಮುಂ ಲಾವಣ್ಯಮುಮಂ ಕಂಡೆಮೆಂದು ಪೇೞ್ದಾಮಿನ್ನೆಮ್ಮ ದೇವಲೋಕಕ್ಕೆ ಪೋಪೆಮೆಂದೊಡರಸಂ ಮನಂ ಪೆರ್ಚಿ [೮]ತನ್ನೊಳ್ ತನ್ನ ರೂಪಂ ನಚ್ಚಿ[೮] ಕಿಱಿದು ಬೇಗಂ ಮಾಣಿಮಭ್ಯಂಗನಂ ಗೆಯ್ದ ರೂಪಂ ಕಂಡಿರಿಂ ಮಜ್ಜನಂಬೊಕ್ಕು ಪಸದನಂಗೊಂಡಿರ್ದ್ದ ರೂಪಂ ನೋಡಿ [೯]ಪೋಗಿ[೯]ಮೆಂದರಸಂ ನುಡಿದೊಡಂತೆ ಗೆಯ್ವೆಮೆಂದು ದೇವರ್ಕ್ಕಳಿರ್ದ್ದೊಡರಸನುಂ ಮಜ್ಜನಂಬೊಕ್ಕು ಬೇಗಂ ಸರ್ವಾಭರಣ ಭೂಷಿತನಾಗಿ ಆಸ್ಥಾನ ಮಂಟಪದೊಳ್ ಸಿಂಹಾಸನ ಮಸ್ತಕ ಸ್ಥಿತನಾಗಿ ಸಾಮಂತ ಮಹಾಸಾಮಂತರ್ ಮೂವತ್ತಿರ್ವ್ವಾಸಿವರ್ ಮಕುಟ ಬದ್ಧರ್ಕಳುಂ ವಿದ್ಯಾಧರರ್ಕಳುಂ [೯]ಯಕ್ಷದೇವರ್ಕಳುಂ[೯] ಬಳಸಿಯುಮಿರ್ದ್ದೋಲಗಿಸೆ [೧೦]ಮೂವತ್ತೆರಡುಂ[೧೦] ಚಾಮರಂಗಳಿಕ್ಕೆ ಸೌಧರ್ಮೇಂದ್ರನಿಪ್ಪಂತಿರ್ದು ದೇವರ್ಕಳ್ಗೆ ಬಟ್ಟಿಯಟ್ಟಿ ಬರಿಸಿ ನೋಡಿ ಮಿನ್ನೆನ್ನ ರೂಪನೆಂದು ತನ್ನಂ ತೋಱಿದೊಡೆ ದೇವರ್ಕಳ್ ನೋಡಿ ವಿಸ್ಮಯಂಬಟ್ಟಿದೇಂ ಚೋದ್ಯಮೊ

ಶ್ಲೋಕ॥ ಅನೇಕ ರಾಗ ಸಂಕೀರ್ಣಂ ಘನಲಗ್ನ ಮಪಿ ಕ್ಷಣಾತ್ ।
ಮಾನುಷಂ ಯೌವನಂ ಕಷ್ಟಂ ನಶ್ಯತೀಂದ್ರಧನುರ್ಯಥಾ ॥

---

೧. + ಸಕಲ (ಜ, ಛ). ೨. + ಗೆ (ಸ). ೩. ಮುಂ (ಕ, ಖ, ಗ, ಛ). ೪. ಏಱಿಲುಮಿಳಿಯೆ (ಕ), ಏಱಿಮುಂಮಿಳಿಯೆಯು (ಖ, ಘ, ಚ), ನೇರಲುಮಿಳಿಯೆ (ಗ). ೫. ಮುಂ (ಕ, ಖ, ಗ). ೬. +ತೇಜಮುಂ (ಛ). ೭. ತನ್ನ ರೂಪ ನಚ್ಚಿ (ಕ,ಖ,ಗ). ೮. (ಕ,ಖ,ಗ)ಗಳಲ್ಲಿಲ್ಲ. ೯. (ಘ,ಜ)ಗಳಲ್ಲಿಲ್ಲ. ೧೦. ಮೂವತ್ತಿರ್ವರ್ ವಿಲಾಸಿನಿಯರ್ (ಘ, ಜ), ಮೂವತ್ತಿರ್ವರ್ ಕನ್ನೆಯರ್ (ಛ).

ಎಂ೧ದೀ ಕ್ಷಣಮಾತ್ರದೊಳೆ ಮನುಷ್ಯರ ರೂಪುಂ ಗಾಡಿಯುಂ ಚೆಲ್ವುಂ ತೇಜಮುಂ
ಯೌವನಮುಂ ಕುಂದಿತ್ತೆನೆ ಚಕ್ರವರ್ತಿಯೆಂದನೆನ್ನ ರೂಪಂ ಮುನ್ನೆ ನೀಮೆ
ಪೊಗಟ್ಪುರೀಗಳೀಕೆ ಪಟಿದಪ್ಪಿರೆನೆ ೩ದೇವರೆಂದರ್ ಕೇಳರಸಾ೩ ದೇವರ್ಕಳ
೪ತೇಜಮುಂ ಲಾವಣ್ಯಮುಂ೪ ಪುಟ್ಟಿದ ಪ್ರಥಮ ಸಮಯದಿಂ ತೊ೫ಟ್ಟು ಪೆರ್ಚುತ್ತುಂ
ಪೋಕುಮಾಯುಷ್ಯದ ನಡುವರೆಗಮಲ್ಲಿಂದತ್ತ ಕುಂದುತ್ತುಂ ಪೋಕುಮಾಯು
ಷ್ಯಾಂತಂಬರೆಗಂ೫ ಮತ್ತಾಮುಂ ನಿಮ್ಮ ರೂಪಂ ಯೌವನ ಭರದೊಳಿದ್ದುದುಮಂ
ಕಂಡೆವಿಗಳಾಯುಷ್ಯಮುಂ ತೇಜಮುಂ ರೂಪುಂ ಲಾವಣ್ಯಮುಂ ಯೌವನಮುಂ೬
ಕೆಱೆದು ಕುಂದಿದುದಂ ಕಂಡೆಮೆನೆ ಚಕ್ರವರ್ತಿ ನೀಮೆಂತಱಿದಿರೆಂದು ಬೆಸ
ಗೊಂಡೊಡೆ ದೇವರ್ಕಳೆಂದರೆಮಗವಧಿಜ್ಞಾನಮುಂಟಪ್ಪುದಱಿಂದಱಿ೭ದೆವು೭
ಮನುಷ್ಯರ್ಗ್ಗಱಿಯಲಾಗದೆಂದೊಂದು ದೋಣಿ೮ಕೊಂ೮ಡಮಂ ತರಿಸಿ ನೀರಂ ೧೦
ತೆಕ್ಕನೆ ತೀವಿಯದಱೊಳಗೆ ಚಮರಿಯನದ್ದಿ ತೆಗೆದು ಬಳಸಿಯಂ ಬೀಸಿದಾಗಳ್
ಸಭೆಯೊಳಿರ್ದ ಮಾನಸರ ಮೇಗೆಲ್ಲಂ ನೀರ್ ಪನಿತುದಂ ತೋಱಿ ದೇವರೆಂದರ್
ಪೇಟಿವಿಗಾ ಚಮರಿಯೊಳ್ ತಗುಳ್ದು ಬಿಯಮಾದನಿತು ನೀರಂ ಕೊಂಡದೊಳ್
ಕುಂದಿ೯ದುದಂ೯ ತೋಱಿಮೆಂದೊಡವರುಮಱಿಯದಿರ್ದೊಡೆಂತಿದಂ೧೦ ನೀಮು
ಱಿ೧೦ಯಲಾಗದಂತೆ ಮಾನಸರಾಯುಷ್ಯಮುಂ ತೇಜಮುಂ ಲಾವಣ್ಯಮುಂ
ಯೌವನಮುಂ ಪ್ರತಿಸಮಯಂ ಕುಂದು೧೧ತಿರ್ಕುಮಾ ವೀಚಿಮರಣಮಂ೧೧
ನಿಮಗಱಿಯಲಾಗದೆಂದು ಪೇಟ್ದು ಹೇತು ದೃಷ್ಟಾಂತಗಳಿಂದಂ ಪ್ರತ್ಯಕ್ಷಮಂ
ತೋಱಿ ಚಕ್ರವರ್ತಿಯಂ ನಂಬೆ ನುಡಿದು ದೇವರ್ಕಳ್ ತಮ್ಮ ಸೌಧರ್ಮ
ಕಲ್ಪಕ್ಕೆ ವೋದರ್

ಮತ್ತಿತ್ತ ಸನತ್ಕುಮಾರ ಚಕ್ರವರ್ತಿಗದುವೆ ೧೨ನಿರ್ವೇಗ೧೨ಕ್ಕೆ ಕಾರಣಮಾಗಿ ೨೦
ಶರೀರಭೋಗಕ್ಕೆ ಪೇಸಿ ಇಂತೆಂದು ಮನದೊಳ್ ಬಗೆಗುಂ :

ವೃ॥ ರೂಪಂ ಯೌವನಮಾಯುರಕ್ಷವಿಷಯಾ ಭೋಗೋಪಭೋಗಾ ವಪುಃ ।
ವೀರ್ಯಂ ಸ್ವೇಷ್ಟ ಸಮಾಗಮೋ ವಸುಮತಿಸ್ಸೌಭಾಗ್ಯಭಾಗ್ಯಾದಯಃ ॥
ನೋ ನಿತ್ಯಾಃ ಸ್ಫುಟಮಾತ್ಮನಸ್ಸಮುದಿತ ಜ್ಞಾನೇಕ್ಷಣಾಭ್ಯಾಮೃತೇ ।
ಶೇಷಾ ಇತ್ಯನುಚಿಂತಯಂತು ಸುಧಿಯಃ ಸರ್ವೇ ಸದಾಽನಿತ್ಯತಾಂ ॥

ಶ್ಲೋಕ॥ ಆದೌ ಜನ್ಮ ಜರಾರೋಗೌ ಮಧ್ಯೇಪ್ಯಂತೇ ಖಳಾಂತಕಃ ।
ಇತಿ ಚಕ್ರೈಕ ಸಂಭ್ರಾಂತಿರ್ಜಂತೋರ್ಮಧ್ಯೇ ಭವಾರ್ಣವಂ ॥

ಎಂದಿಂತು ವೈರಾಗ್ಯಮಂ ಭಾವಿಸಿ ವಿಜಯಕುಮಾರನೆಂಬ ಪಿರಿಯ ಮಗಂಗೆ ರಾಜ್ಯ
ಪಟ್ಟಂಗಟ್ಟಿ ಪರಿವಾರಕ್ಕೆಲ್ಲಂ ನಿಶ್ಶಲ್ಯನಾಗಿ ಬಾಹ್ಯಾಭ್ಯಂತರ ಪರಿಗ್ರಹಂಗಳೆಲ್ಲಮಂ

---

೧. ದೊಡೀ (ಘ), ದಾಡಿ (ಜ,ಛ). ೨. ಮುಂ (ಕ, ಖ, ಗ, ಘ, ಛ). ೩. ದೇವರ್ಕಳರಸಾ (ಛ). ೪. ಚೆಲ್ವುಂ ಯೌವನಮುಂ ವಿಭವಮುಂ (ಘ, ಚ, ಛ), ರೂಪುಂಗಾಡಿಯುಂ (ಛ). ೫. ಟ್ಟೞು ದಿಂಗಳಾಯುಷ್ಯಮುಂಟಿನೆಯೆಡೆಯೊಳೆಲ್ಲಿಯುಂ ಕಿಡದೇಕಸ್ಥಿತಿಯೊಳ್ ಸ್ಥಿರಮಾಗಿರ್ಕ್ಕುಮಲ್ಲಿಂದತ್ತ ಕುಂದತ್ತುಂ ಪೋಕು (ಘ,ಚ,ಛ). ೬. +ಕೆಱೆ (ಘ,ಚ,ಛ). ೭. ವೆಮುಂ (ಕ,ಗ,ಖ). ೮. ಗೊಂ (ಘ,ಚ). ೯. ದೆಡೆಯಂ (ಘ, ಚ, ಛ). ೧೦. ನಿಮಗ (ಘ, ಚ, ಛ). ೧೧. ತಿರ್ದುವೀಚಿಯೆಂಬ ಮರಣಮುಮುಂ (ಕ, ಖ, ಗ), ರ್ಕುಮಾವಿ ಚೆಮರಮಂ (ಘ, ಚ). ೧೨. ವೈರಾಗ್ಯ (ಛ).

ತೊಱೆದು ಪಲಂಬರ್ ಮಕುಟಬದ್ಧರ್ಕಳಪ್ಪರಸುಮಕ್ಕಳ್ವೆರಸುಂ ವಿನಯಂಧರ ಭಟಾರರ ಪಕ್ಕದೆ ತಪಂಬಟ್ಟು ದೀಕ್ಷೋಪವಾಸತ್ರಿರಾತ್ರಂ ಗೆಯ್ದು ಶರೀರಸಂಧಾರಣ ನಿಮಿತ್ತಂ ಚರಿಗೆವೊಕ್ಕೊಡೊರ್ವಳ್ ಬಡವಿಬಿರ್ದಿ ನಿಱಿಸಿ ಪ್ರಥಮ ದಿವಸದೊಳೆ ಪಾರಕಿನ ಕೂಟುಮಿವರೆಯುಮೆಣ್ಣೆಯುಮಾಡಿನಳೆಯುಮುಂ ಬಡ್ಡಿಸಿದೊಡದ ನಮೃತಮನುಣ್ಬಂತುಂಡು ಮತ್ತಂ ತ್ರಿರಾತ್ರಕ್ಕೆ ಉಪಚ್ಚಖ್ಖಾಣಂಗೊಂಡರಾ ಕಾಲದಿಂ ತೊಟ್ಟಾಹಾರದೊಳಪ್ಪ ದೋಷದಿಂದಂ 'ಕಚ್ಛುಜರಖಾಸಸೋಸೋ ಭತ್ತಚ್ಛದಿ ಅಚ್ಛಿಕುಚ್ಛಿದುಕ್ಖಾಣಿ' ಎಂದಿವು ಮೊದಲಾಗೊಡೆಯವೇಟುನೂಱು ವ್ಯಾಧಿಗಳಂ ನೂಱು ವರುಷಂಬರಂ ಒಳ್ಳಿತ್ತಾಗಿ ಸೈರಿಸಿ ಉಗ್ರೋಗ್ರ ತಪದಿಂ ದೀಪ್ತತಪಂ ಮಹಾತಪಂ ಘೋರತಪಮೆಂದಿವು ಮೊದಲಾಗೊಡೆಯ ತಪಂಗಳಂ ಗೆಯ್ದೆ ತಪದ ಮಾಹಾತ್ಮ್ಯದಿಂದಂ ಆಮೋಷಧಿ ಖೇಳೋಷಧಿ ಜವೋಷಧಿ ವಿಪ್ಪೋಷಧಿ ಸರ್ವೋಷಧಿಯೆಂದಿವು ಮೊದಲಾಗೊಡೆಯ ಋದ್ಧಿಗಳ್ ಪುಟ್ಟಿದೊಡಂ ವ್ಯಾಧಿಗೆ ತಕ್ಕ ಪ್ರತೀಕಾರಮುಂ ಮಾಡದಿಂತು ಘೋರವೀರ ತಪಶ್ಚರಣಂ ಗೆಯ್ದೆ

ಮತ್ತೊಂದು ದಿವಸಂ ಸೌಧರ್ಮೇಂದ್ರಂ ತನ್ನ ಸಭೆಯೊಳ್ ಸಿಂಹಾಸನ ಮಸ್ತಕಸ್ಥಿತನಾಗಿ ಧರ್ಮಶ್ರವಣಾನಂತರಂ ರಿಸಿಯರ್ಕಳ ಗುಣಂಗಳಂ ವ್ಯಾವರ್ಣಿಸುತ್ತಿರ್ದು ಸನತ್ಕುಮಾರ ರಿಸಿಯ ಗುಣಗಣಮನಾದಮಾನುಂ ಕೈಕೊಂಡಿಂತೆಂದು ಪೇೞಲ್ ತಗುಳ್ದೊನ್ ವಾತ ಪಿತ್ತ ಶ್ಲೇಷ್ಮ ಶ್ವಾಸ ಖಾಸ ಜರಾರುಚಿ ಛರ್ದ್ಯತಿಸಾರಾಕ್ಷಿಕುಕ್ಷಿ ವೇದನಾಸ್ಫೋಟಕಂ ಪಿಟಕಂ ಶೂಲ ಭಗಂದರಂ ಕುಷ್ಠಕ್ಷಯ ಗಂಡರ್ ಶಿರೋವೇದನೆ ಮೊದಲಾಗೊಡೆಯವೇಟುನೂಱು ವ್ಯಾಧಿಗಳೊರ್ಮೊದಲೆ ಮೆಯ್ಯೊಳ್ ಪುಟ್ಟಿದೊಡಂತು ತಾಮುಂ ಋದ್ಧಿಸಂಪನ್ನರಾಗಿಯುಂ ವ್ಯಾಧಿಗೆ ತಕ್ಕ ಪ್ರತೀಕಾರಂ ಗೆಯ್ಯದೆ ನೂಱು ವರುಷಂಬರೆಗಂ ಒಳ್ಳಿತ್ತಾಗಿ ಸೈರಿಸಿ ತಪಂಗೆಯ್ದಪ್ಪರೆಂದು ಸೌಧರ್ಮೇಂದ್ರಂ ಪೊಗೞ್ದೊಡೆ ಕೇೞ್ದು ಮುನ್ನೆ ಬಂದ ದೇವರ್ಕಳಿರ್ವರುಂ ವೈದ್ಯರ ರೂಪಿನೊಳ್ ಮರ್ದುಗಳಂ ಪಸುಂಬೆಯೊಳ್ ತೆಕ್ಕನೆ ತೀವಿ ಪರೀಕ್ಷಿಸಲ್ಕೆಂದು ಸಾರೆವಂದು ವಂದಿಸಿ ಇಂತೆಂದರ್ ಭಟಾರಾ ನಿಮ್ಮ ಮೆಯ್ಯ ಕುತ್ತಂಗಳೆಲ್ಲಮಂ ಮರ್ದಂ ಮಾಡಿ ಕಿಡಿಸಲ್ ನೆಱೆವೆರ್ವರ್ ಮರ್ದಂ ಮಾಂಡುವುದನೊಡಂ ಬಾಡವೇಟ್ಕುಮೆಂದೊಡೆ ಭಟ್ಟಾರರುಂ ಮೋನಂಗೊಂಡು ನುಡಿಯದೆ ಕೆಮ್ಮಗಿರ್ದೊಡೆ ಪಿರಿದುಂ ಬೇಗಮಿರ್ದಿಟ್ಟು ಪೋಗಿ ಮಱುದಿವಸಂ ಮಗುಟ್ಟು ಬಂದಿಂತೆಂದರ್ ಭಟಾರಾ ವೈದ್ಯಶಾಸ್ತ್ರದೊಳಾದಿದಮಾನುಂ ಕುಶಲರೆಮುಂ ಗ್ರಂಥಾರ್ಥ ಸ್ವರೂಪದಿಂದೆಲ್ಲಾ ಕುಶಲರೆಮುಂ ಕರ್ಮಜ್ಞರೆಮುಂ ಮರ್ದುಗಳುಮಖಿನ ವಂಗಳಾದಮೊಳ್ಪಿದವಿರ್ದುವುಂ ನಿಮ್ಮ ಮೆಯ್ಯ ಕುತ್ತಂಗಳೆಲ್ಲಮನೇಟು ದಿವಸದಿಂ

೧. ರ್ ವೆರಸು ಅರಸಿಯರ್ ಬೆರಸಿ (ಕ, ಗ), ರ್ ವೆರಸು ಅರಸಿಯರುಂವೆರಸಿ (ಖ), (ಘ, ಚ) ಗಳಲ್ಲಿಲ್ಲ. ೨. ೞ್ದಿ (ಕ, ಖ, ಗ), ದ್ದಿ (ಚ, ಛ). ೩. ಮಾವರೆಯೆಣ್ಣೆ (ಕ, ಗ). ೪. ಪ್ರತ್ಯಾಖ್ಯಾನಂ (ಘ, ಚ). ೫. ಡವಂ (ಕ, ಖ, ಗ) ೬. ಪರಿವಾರಂಬೆರಸು (ಘ,ಚ,ಛ). ೭. ಜೆರಾದ್ಯೋ (ಕ, ಖ, ಗ). ೮. +ಮಾಲಾ (ಘ, ಚ). ೯. ಮುಂ (ಕ, ಖ, ಗ). ೧೦. ಡಿಕೆಡಿಸು (ಛ). ೧೧. ಡುವಿರಪ್ಪೊಡೆನೆ (ಚ, ಛ). ೧೨. ೞ್ದಿ (ಕ, ಖ, ಗ). ೧೩. ದಂ (ಘ, ಚ, ಛ). ೧೪. ವು (ಘ, ಚ, ಛ). ೧೫. ಪ್ರಯೋಗಂಗಳೆಲ್ಲಮೆಮಗೆ ಪಾಠಂ (ಘ, ಚ, ಛ).

ದೊಳಗೆ ಕಿಡಿಸಿ ನೀರೋಗಮಪ್ಪಂತಿರೆ ಮಾಡುವೆವು ಬಬ್ಬಿಕ್ಕೇನುಂ ಸಂಕ್ಲೇಶ
ಮಿಲ್ಲದೆ ತಪಂಗೆಯ್ಯಿಮೆಂದೊಡೆ ಭಟಾರರವರೊಡನೆ ನುಡಿವಾಗಳುಗು೧ಟ ಸೀ೧ಕ
ರಂಗಳ್ ತಮ್ಮ ಮುಂಗೆಯ್ಯ ಮೇಗೆ ಬಿಟ್ಟೊಡೆ ಬೆರಲಿಂ ೨ಸೀಂಟಿ೨ ತೋಱಿದಾ
ಯೆಡೆ ಸುವರ್ಣಾಯಮಾನಮಾಗಿ ತೊಳಗುತ್ತಿರ್ದ ಮೆಯ್ಯ ತೇಜಮುಮಂ ದೇವ
ರ್ಕಳ್ ವಿಸ್ಮಯಂಬಟ್ಟು ನೋಡುತ್ತಿರೆ ಭಟಾರರಿಂತೆಂದರೆಮಗೆ ಮರ್ದು ಬಾಟ್ತೆ
ಯಪ್ಪೊಡೆಮಗಾಮೆ ಮರ್ದಂ ಬಲ್ಲೆಸಿಮೆಸಿಮಗದು ಬಾಟ್ತೆಯಲ್ತು ನೀಮುಂ
ಜಾತಿಜರಾಮರಣಂಗಳೆಂಬೆಮ್ಮ ಕುತ್ತಮುಂ ಕೆಡಿಸಲಾರ್ಪೊಡಾ ಮರ್ದನೊಡಂಬಡು
ವೆಮುಬಿದಾವ ಮರ್ದುಮನೊಡಂಬಡುವೆಳಮಲ್ಲಿಮೆಂಳದೊಡೆ ದೇವರ್ಕಳುಮಿಂ
ತೆಂದರ್ ಜಾತಿಜರಾಮರಣಂಗಳೆಂಬ ಕುತ್ತಮುಂ ಕೆಡಿಸಲ್ಕಾಮಾಱೆಮಾ ಕುತ್ತಮುಂ
ಕೆಡಿಸಲ್ಕೆ ಭಟಾರಾ ನೀಮೆ ಸಮ್ಯಗ್ದರ್ಶರಿರ್ ಪರಮವೈದ್ಯರಿರದರ್ಕೆಂದು ಮತ್ತಂ ೧೦
ದೇವರ್ಕಳಿಂದರ್ ಭಟಾರಾ ಸೌಧರ್ಮೇಂದ್ರಂ ನಿಮ್ಮ ತಪದೊಳಪ್ಪ ಗುಣಂ
ಗ[ಳುಮಂ] ವ್ಯಾಧಿಗಳಂ ಸೈರಿಸಿ ನೆಗಟ್ಪ ನೆಗಟ್ತೆಯುಮುಂ ದೇವರ್ಕಳ ಸಭೆಯ
ನಡುವೆಯಾದಮಾನುಂ ಕೈಕೊಂಡು ಪೊಗಟ್ಟೊಡಾಮಿಂದ್ರನ ಮಾತಂ ನಂಬದೆ
ನಿಮ್ಮಂ ಪರೀಕ್ಷಿಸಲ್ಕೆಂದು ಬಂದೆವು ಸೌಧರ್ಮೇಂದ್ರನ ಪೊಗಟ್ಪುದೇನುಂ
ತಪ್ಪಿಲ್ಲೆಂದು ನುಡಿದು ಗುಣಂಗೊಂಡು ಮಗುಟ್ಪು ವಂದಿಸಿ ಮರ್ದುಗಳೆಲ್ಲಮನೊಂದು
ಪಟವಾವಿಯೊಳ್ ಪೊಯ್ದು ದೇವರ್ಕಳ್ ತಮ್ಮ ದೇವಲೋಕಕ್ಕೆ ವೋದೊರಾ
ಮರ್ದಿನ ಬಾವಿಯ ನೀರಂ ಮಿಂದೊಗ್ಗೆಲ್ಲಂ ಕುತ್ತಂಗಳ್ ಕೆಡುವುವಾದವುೞ

ಸನತ್ಕುಮಾರ ಭಟಾರರುಮೇಟುನೂಱುಂ ವ್ಯಾಧಿಗಳಂ ೯ನೂಱುವರುಷಂ
ಬರೆಗರ್ ಸೈರಿಸಿ ೧೦ಘೋರವೀರತಪಶ್ಚರಣಂಗೆಯ್ದು ಆಲದ ಮರದ ಕೆಟಗೆ ಸಂನ್ಯಸ
ನಂಗೆಯ್ದು ಸಮಾಧಿಮರಣದಿಂ ಮುಡಿಪಿ ಮಿಕ್ಕ ರತ್ನತ್ರಯಂಗಳಂ ಸಾಧಿಸಿ೧೦ ೨೦
ಸನತ್ಕುಮಾರಕಲ್ಪದೊಳ್ ಏಟು ಸಾಗರೋಪಮಾಯುಷ್ಯಸ್ಥಿತಿಯನೊಡೆಯೊನಿಂದ್ರ
ನಾಗಿ ಪುಟ್ಟಿದೊಂ

ಮತ್ತಾರಾಧಕರಪ್ಪ ಭವ್ಯರ್ಕಳೆಲ್ಲಂ ಸನತ್ಕುಮಾರ ಭಟಾರರಂ ಮನದೊಳ್
ಬಗೆದು ವ್ಯಾಧಿಗಳೊಳಪ್ಪ ವೇದನೆಗ[ಳುಮಂ] ಪಸಿವುಂ ನೀರಟ್ಟೆ ಮೊದಲಾ
ಗೊಡೆಯ ೧೧ ಬಾಧೆಯುಮಂ ಸೈರಿಸಿ ೧೨ದೇವರಂ ಧ್ಯಾನಿಸುತ್ತಂ ಪಂಚನಮಸ್ಕಾರ
ಮಂ ಮನದೊಳುಚ್ಚರಿಸುತ್ತಂ ೧೩ಮಿಕ್ಕ ದರ್ಶನಜ್ಞಾನಚಾರಿತ್ರಂಗಳಂ ಸಾಧಿಸಿ೧೩
ಸ್ವರ್ಗಾಪವರ್ಗಸುಖಂಗಳನೆಯ್ದುಗೆ

---

೧. ಡಳಸಿಖ (ಖ). ೨. ತೊಡೆದು (ಘ, ಚ, ಛ). ೩. ವೆ (ಛ). ೪. ವಲ್ಲೆವೆಂ (ಘ). ೫. ರುಂ
ಖರ್ಪರವು (ಕ). ೬. ಳ್ಮಂ (ಸ). ೭. ಮುಂ (ಸ–ಛ). ೮. ಟ್ಟುಪೋಪವಾ (ಚ), ಟ್ಟುವಾ (ಛ).
೯. (ಘ, ಚ, ಛ) ಗಳಲ್ಲಿಲ್ಲ. ೧೦. (ಘ, ಚ, ಛ) ಗಳಲ್ಲಿಲ್ಲ. ೧೧. + ಪರೀಷಹಂಗಳೊಳಾದ (ಘ, ಚ, ಛ). ೩೦
೧೨. ಸಮ್ಯಗ್ದರ್ಶನಜ್ಞಾನ ಚಾರಿತ್ರಂಗಳಂ ಸಾದಿಸಿ (ಘ, ಚ, ಛ). ೧೩. ಮುಡಿಪಿ (ಘ, ಚ, ಛ).

(೫) ಅಣ್ಣಿಕಾಪುತ್ರನ ಕಥೆ

ಅಣ್ಣಿಕಾಪುತ್ರನ ಕಥೆಯಂ ಪೇಳ್ವೆಂ:

ಗಾಹೆ ॥ ಣಾವಾಎ ಣಿಬ್ಬುಡಾಏ ಗಂಗಾಮಜ್ಝೇ ಅಮೂಢಮಾಣಮದೀ ।
ಆರಾಧಣಂ ಪವಣ್ಣೋ ಕಾಲಗದೋ ೧[ಏಣಿಯಾ] ೧ ಪುತ್ತೋ ॥

[ಣಾವಾಎ–ನಾವೆ, ಣಿಬ್ಬುಡಾಏ–ಮುಟುಗಿದುದಾದೊಡೆ, ಗಂಗಾಮಜ್ಝೇ–ಗಂಗಾಮಹಾನದಿಯ ನಡುವೆ, ಅಮೂಢಮಾಣಮದೀ–ಮೋಹಿಸದ ಬುದ್ಧಿಯನೊಡೆಯನಾಗಿ, ಆರಾಧಣಂ–೨ನಿಜಾತ್ಮಾರಾಧನೆಯಂ,೨ ಪವಣ್ಣೋ–ಲೇಸಾಗಿ ಪೊದ್ದಿದೊಂ, ಕಾಲಗದೋ–ಕಾಲಂಗೆಯ್ದೊನಾಗಿ, ೧[ಏಣಿಯಾ]೧ಪುತ್ತೋ–ಅಣ್ಣಿಕೆಯ ಮಗಂ]

೧೦ ಅದೆಂತೆಂದೊಡೆ:

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ಮಗಧೆಯೆಂಬುದು ನಾಡಲ್ಲಿ ಉತ್ತರ ಮಧುರೆಯೆಂಬುದು ಪೊಟಲದನಾಳ್ವೊಂ ಪ್ರಜಾಪಾಳನೆಂಬೊನರಸನಾತನ ಮಹಾದೇವಿ ಸುಪ್ರಭೆಯೆಂಬೊಳಂತವರ್ಗ್ಗಳಿಷ್ಟವಿಷಯ ಕಾಮಭೋಗಂಗಳನನುಭವಿಸುತ್ತಿರೆ ಮತ್ತಾ ಪೊಟಲೊಳ್ ಸಾರ್ಥಾಧಿಪತಿ ಧನದತ್ತನೆಂಬೊಂ ಪರದಂ ಧನಕನಕ ಸಮೃದ್ಧನಾತನ ಭಾರ್ಯೆ ಧನಶ್ರೀಯೆಂಬೊಳಾಯಿರ್ವರ್ಗ್ಗಂ ಮಗಂ ಧನದೇವನೆಂಬೊನಂತವರ್ಗಳ್ಗಿ ಸುಖದಿಂ ಕಾಲಂ ಸಲೆ

ಮತ್ತೊಂದು ದಿವಸಂ ಧನದೇವಂ ಪರದಿಂಗೆಂದು ಪಿರಿದುಂ ಸಾರಸಿಮಪ್ಪ ಭಂಡಮಂ ತೀವಿಕೊಂಡು ಪಿರಿದುಂ ಸಾರ್ಥಂಬೆರಸು ದಕ್ಷಿಣ ಮಧುರೆಗೆ ವೋದೊಡಾ
ಪೊಟಲ ರಾಜಶ್ರೇಷ್ಠಿ ತಿಳಕಶ್ರೇಷ್ಠಿಯೆಂಬೊನಾತನ ಭಾರ್ಯೆ ನಂದೆಯೆಂಬೊಳಾ
೨೦ ಯಿರ್ವರ್ಗ್ಗಂ ಮಕ್ಕಳ್ ಪದ್ಮಾವತಿ೪ ಸುಮತಿ ಗುಣಮತಿಯೆಂದಿವರ್ ಮೊದಲಾ ಗೊಡೆಯ ಎಣ್ಬರ್ ಪೆಣ್ಗಾಸುಗಳಾದೊಡವರೊಳಗೆಲ್ಲರಿಂ ಕಿಱಿಯಳಣ್ಣಿಕೆಯೆಂಬೊಳಾಕೆಯಂ ಧನದತ್ತನ ಮಗನಪ್ಪ ಧನದೇವನಂ ರೂಪ ಲಾವಣ್ಯ ಸೌಭಾಗ್ಯ ಕಾಂತಿ ಗುಣಂಗಳಿಂ ಕೂಡಿದೊನಂ *ತಿಳಕಶ್ರೇಷ್ಠಿಯುಂ ನಂದೆಯುಂ ಕಂಡಾತಂಗೆ ಬಯಸಿ ಅಣ್ಣಿಕೆಯೆಂಬ ಕೂಸಂ ಕೊಟ್ಟೊಡೆ ಕೆಲವು ದಿವಸಮಾ ಪೊಟಲೊಳಿರ್ದ್ದು ತಮ್ಮ್ ಕೊಂಡು ಪೋದ ಭಂಡಮಂ ಮಾಱಿ ಪೆಱದಂ ತಮ್ಮ್ ನಾಟ್ಕಿ೫ ಪೂರ್ವಮಪ್ಪ ಭಂಡಮಂ ತೀವಿಕೊಂಡು ತಮ್ಮ ಪೊಟಲ್ಗುತ್ತರ ಮಧುರೆಗೆ ಬಂದಿರ್ದ್ದರನ್ನೆಗ ಮಣ್ಣಿಕೆಗೆ ಗರ್ಭಮಾಗಿ ಮಗಂ ಪುಟ್ಟಿದೊಡೆ ಧನದೇವನ ತಾಯುಂ ತಂದೆಯುಂ ನಂಟರುಮೆಲ್ಲಂ ನೆರೆದಣ್ಣಿಕೆಯ ಮಗನೆಂ೭ದಾತಂ೭ಗಣ್ಣಿಕಾಪುತ್ರನೆಂದು ಪೆಸರನಿ೮ಟ್ಟೊಡಾ೮ತಂ ಕ್ರಮಕ್ರಮದಿಂ ಸುಖದಿಂ ೯ರ್ಬೞೆದು ನವಯೌವನನಾಗಿ ೧೦ ಪ್ಪರ್ನ್ನೆಗಂ

---

೩೦ ೧. ಅಣ್ಣಿಕಾ (ಸ). ೨. ದರ್ಶನಜ್ಞಾನ ಚಾರಿತ್ರಂಗಳಾರಾಧನೆಯಂ (ಘ, ಚ, ಛ). ೩. + ಧನ (ಘ,ಚ,ಛ). ೪. + ಪ್ರಭಾವತಿ (ಘ,ಚ,ಛ). ೫. ರ (ಘ,ಚ). *ಪು. ೬೬–೬೯* (ಖ)ದಲ್ಲಿ ನಷ್ಟವಾಗಿದೆ. ೬. ಳ್ಗಳ್ಗೆ ಅ (ಕ, ಗ). ೭. ದೊಡಾತಂ (ಘ, ಛ). ೮. ಟ್ಟರಾ (ಘ, ಚ, ಛ). ೯. ಬೆ (ಕ, ಗ, ಚ). ೧೦. +ಸುಖಮಿ (ಘ, ಚ, ಛ).

ಇತ್ತ [೧]ದಮ[೧]ಸೂರಿಗಳೆಂಬವರವಧಿಜ್ಞಾನಿಗಳಪ್ಪ ಆಚಾರ್ಯರ್ ಪಿರಿದುಂ
ರಿಸಿ ಸಮುದಾಯಂಬೆರಸು ಗ್ರಾಮನಗರಖೇಡಖರ್ವಡಮಡಂಬಪಟ್ಟಣ ದ್ರೋಣಾ
ಮುಖಂಗಳಂ ವಿಹಾರಿಸುತ್ತಂ ಬರ್ಪೊರುತ್ತರ ಮಧುರೆಗೆ ಬಂದು ಬಹಿರುದ್ಯಾನ
ವನದೊಳಿರ್ದ್ದರನಣ್ಣಿಕಾಪುತ್ರಂ ಪೋಗಿ [೨]ವಂದಿಸಿ ಧರ್ಮಮಂ ಕೇಳ್ದು ಸಮ್ಯಕ್ತ್ವ
ಪೂರ್ವಕಂ ಶ್ರಾವಕವ್ರತಂಗಳಿಲ್ಲಮಂ ಕೈಕೊಂಡು ತದನಂತರಮೆ ಭಟಾರಾ ಎನ
ಗಾಯುಷ್ಯವೆನಿ[೩]ತೆಂದು[೩] ತನ್ನಾಯುಷ್ಯ ಪ್ರಮಾಣಮಂ ಬೆಸಗೊಂಡೊಡೆ ಭಟಾರರುಂ
ಕಿಱಿದೆ ನಿನಗಾಯುಷ್ಯಮೆಂದು ಪೇೞ್ದೊಡೆ ವೈರಾಗ್ಯಪರಾಯಣನಾಗಿ ತಾಯುಂ
ತಂದೆಯುಮಂ ನಂಟರುಮಂ ಬಿಡಿಸಿ ನಿಶ್ಯಲ್ಯಂಗೆಯ್ದು [೧]ದಮ[೧]ಸೂರಿಗಳಿಂಬಾ
ಚಾರ್ಯರ ಪಕ್ಕದೆ ತಪಂಬಟ್ಟು ದ್ವಾದಶಾಂಗ ಚತುರ್ದಶಪೂರ್ವಮಪ್ಪಾಗಮಮೆಲ್ಲಮಂ
ಕಲ್ತು ಗುರುಗಳನೊಡಂಬಡಿಸಿ ಏಕವಿಹಾರಿಯಾಗಿ ಗ್ರಾಮೇಕರಾತ್ರಂ ನಗರೇ ಪಂಚ ೧೦
ರಾತ್ರಂ ಅಟವ್ಯಾಂ ದಶರಾತ್ರಮೆಂಬೀ ನ್ಯಾಯದಿಂ [೪]ಗ್ರಾಮನಗರಖೇಡಖರ್ವಡ
ಮಡಂಬಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಂ[೪] ತೀರ್ಥಂಗಳೆಲ್ಲಮಂ
ವಂದಿಸಲ್ಕೆಂದು ಗಂಗಾಮಹಾನದಿಯಂ ಪಾಯ್ದು ಪೋಪ ಬಗೆಯಿಂದಂ ನಾವೆಯ
ನೇಱಿದೊಡದೊಂದುತ್ಪಾತ ವಾತದಿಂದಂ [೫]ಗಂಗಾಮಹಾನದಿಯ[೫] ನಡುವೆ ಮಡುವಿ
ನೊಳ್ ಭಯಂಕರಮಾಗುತ್ತಿರ್ದ್ದ ತೆರೆ[೬]ಯ[೬]ನೊಡೆಯದಱಿಂ[೭]ಳ್[೭] ಮುಟುಗಿ
ದೊಡಾ ಅಣ್ಣಿಕಾಪುತ್ರನೆಂಬರಿಸಿ ಪಿರಿದಪ್ಪ ಮಾಹಾತ್ಮ್ಯಮಂ ಮೋಹಿಸದ ಬುದ್ಧಿಯ
ನೊಡೆಯೊಂ ಚತುರ್ವಿಧಮಪ್ಪಾಹಾರಕ್ಕಂ ಶರೀರಕ್ಕಂ ಯಾವಜ್ಜೀವಂ ನಿವೃತ್ತಿಗೆಯ್ದು
[೮]ಕಾಯೋ[೮]ತ್ಸರ್ಗ್ಗಂ ನಿಂದು [೯]ಧರ್ಮಧ್ಯಾನ್[೯] ಶುಕ್ಲಧ್ಯಾನಂ[೧೦]ಗಳಂ[೧೦] ಜಾನಿಸಿ
ಸಕಳ ಕರ್ಮಂಗಳಂ ಕೆಡಿಸಿ [೧೧]ಅಂತರ್ಗತ[೧೧] ಕೇವಲಿಯಾಗಿ ಮೋಕ್ಷಕ್ಕೆ ವೋದರ್

ಮತ್ತಂ ಪೆಱರಾರಾಧಕರಪ್ಪವರ್ಗಳೆಲ್ಲಮಣ್ಣಿಕಾಪುತ್ರನೆಂಬರಿಸಿಯಂ ಮನ ೨೦
ದೊ[೧೨]ಳಿಟ್ಟು [ಅ][೧೨]ಚೇತನೋಪಸರ್ಗಂ ಮೊದಲಾಗೊಡೆಯ ಉಪಸರ್ಗಂಗಳು
ಮಂ [೧೩]ನೀರಟ್ಟೆ ಮೊದಲಾಗೊಡೆಯ ಪರೀಷಹಂಗಳುಮಂ ಸೈರಿಸಿ [೧೪]ದರ್ಶನ ಜ್ಞಾನ
ಚಾರಿತ್ರಂಗಳಂ ಸಾಧಿಸಿ ಸ್ವರ್ಗಾಪವರ್ಗದ ಸುಖಂಗ[೧೫]ಳಂ ಭವ್ಯರ್ಕಳ್[೧೫]ಗ್ಗುಗೆ

---

೧. ದಮುದರ (ಫ), ದಮುವರ (ಚ), ಯಮುಧರ (ಛ). ೨. +ಕಂಡು (ಛ). ೩. ತುಂಟಿಂದು (ಫ, ಚ). ೪. (ಫ, ಚ, ಛ) ಗಳಲ್ಲಿಲ್ಲ. ೫. (ಫ, ಚ, ಛ) ಗಳಲ್ಲಿಲ್ಲ. ೬. ಗಳ (ಫ, ಚ, ಛ). ೭. + ನಾವೆ (ಫ, ಛ). ೮. ಉ (ಕ, ಗ). ೯. ಸಮ್ಯಗ್ದರ್ಶನ ಜ್ಞಾನ ಚಾರಿತ್ರಂ ಗಳಂ ಸಾಧಿಸಿ (ಫ, ಚ, ಛ). ೧೦. ಮುಂ (ಚ). ೧೧. ಅನಂತರಂ (ಫ, ಚ, ಛ). ೧೨. ಳ್ ಬಗೆದ (ಫ, ಚ, ಛ). ೧೩. + ಪಸಿವುಂ (ಫ, ಚ, ಛ). ೧೪. + ಸಮ್ಯಕ್ (ಫ, ಚ, ಛ). ೧೫. ಳನೆ (ಚ).

(೬) ಭದ್ರಬಾಹು ಭಟ್ಟಾರರ ಕಥೆ

ಭದ್ರಬಾಹು ಭಟ್ಟಾರರ ಕಥೆಯಂ ಪೇೞ್ವೆಂ :

ಗಾಹೆ ॥ ಓಮೋದರಿಏ ಘೋರಾಏ ಭದ್ದಬಾಹೂ ಅಸಂಕಿಲಿಟ್ಠಮದೀ ।
ಘೋರಾಏ ತಿಗಿಂಚ್ಛಾಏ ಪಡಿವಣ್ಣೋ ಉತ್ತಮಂ ಅಟ್ಠಂ ॥

[ಓಮೋದರಿಏ–ಆರೆ ಉಣಿಸಿನಿಂದಂ, ಘೋರಾಏ–ಆದಮಾನುಂ ಕಡಿದಪ್ಪುದ ಱಿಂದಂ, ಭದ್ದಬಾಹೂ–ಭದ್ರಬಾಹು ಭಟ್ಟಾರರ್, ಅಸಂಕಿಲಿಟ್ಠಮದೀ–ಸಂಕ್ಲೇಶ ೧ಪರಿಣಾಮಮಿಲ್ಲದೊನಾಗಿ,೧ ಘೋರಾಏ–ಕಡಿದಪ್ಪ, ತಿಗಿಂಚ್ಛಾಏ–ಪಸಿವಿ ನಿಂದಂ,* ಪಡಿವಣ್ಣೋ–ಪೊಂದಿದೊಂ, ಉತ್ತಮಂ ಅಟ್ಠಂ–ಮಿಕ್ಕ ದರ್ಶನ ಜ್ಞಾನಚಾರಿತ್ರಾರಾಧನೆಯಂ]

೧೦ ಅದೆಂತೆಂದೊಡೆ :

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ೩ಪುರವರ್ಧನಮೆಂಬುದು ನಾಡಲ್ಲಿ೩ ೪ಕೌಂಡಿನೀ೪ ನಗರಮೆಂಬುದು ಪೊಲಲದನಾಳ್ವೊಂ ಪದ್ಮರಥನೆಂಬೊನರಸನಾತನ ಮಹಾದೇವಿ ಪದ್ಮಶ್ರೀಯೆಂಬೊಳಂತವರ್ಗಳಿಷ್ಟವಿಷಯಕಾಮಭೋಗಂಗಳನನು ಭವಿಸುತ್ತಿರೆ ಮತ್ತಾ ಅರಸನ ೫ಪುರೋಹಿತಂ೫ ೬ನಾಲ್ಕು ವೇದಮುಮಾಱಂಗ ಮುಂ೬ ಪದಿನೆಂಟು ಧರ್ಮಶಾಸ್ತ್ರಂಗಳುಮಂ ಬಲ್ಲೊಂ ಸೋಮಶರ್ಮನೆಂಬೊಂ ಪಾರ್ವನಾತನ ಭಾರ್ಯೆ ಪ್ರತ್ಯಕ್ಷ ಶ್ರೀಯಾದೇವತೆಯನೆ ಪೋಲ್ವ ಸೋಮ ಶ್ರೀಯೆಂಬೊಳಾಯಿರ್ವರ್ಗ್ಗಂ ಮಗಂ ಪುಟ್ಟಿದೊಂ ತಾಯ್ಗಂ ತಂದೆಗಮೆಲ್ಲಾ ನಂಟರ್ಗೆಯುತ್ಸಾಹಮುಂ ಸುಖಮುಂ ವಿಭವಮುಮಂ ಪಡೆವುದಱಿಂದಮಾ ಕೂಸಿಂಗೆ ಭದ್ರಬಾಹುವೆಂಬ ಪೆಸರನೆಲ್ಲರುಂ ನೆರೆದಿಟ್ಟೊಡಾತನುಂ ಬಿದಿಗೆಯ
೧೧ ಚಂದ್ರನಂತೆ ಕ್ರಮಕ್ರಮದಿಂ ಸುಖದಿಂ ಬೆಳೆದು ಮುಂಜಿಗಟ್ಟುವ ಪ್ರಾಯಮಾದೊಡೆ ಪ್ರಶಸ್ತ ದಿವಸ ವಾರ ನಕ್ಷತ್ರ ಮುಹೂರ್ತದೊಳ್ ೭ಮುಂಜಿಬಂಧನ ಕ್ರಿಯೆಯಂ೭ ಮಾಡಿದ ಬಟ್ಟಿಕ್ಕೆ ತನ್ನೋರಗೆಗಳಪ್ಪ ಪಲಂಬರ್ ೮ಮಾಣಿಗಳ್ವೆರಸು ಪೊಱವೊಟಿ ಲೊಳ್ ಬಟ್ಟಾಡುತ್ತಿರೆ ಭದ್ರಬಾಹುವೆಂಬ ಮಾರ್ಣಿಯೊಂದು ಬಟ್ಟಿನ ಮೇಗೆ ಪದಿನಾಲ್ಕು ಬಟ್ಟನೊಂದೊಂದಱ ಮೇಗೋಳಿಯೊಳಿಟ್ಟಾಡುತ್ತಿರ್ಪನ್ನೆಗಂ

ಇತ್ತ ವರ್ಧಮಾನಭಟ್ಟಾರರ್ ಮೋಕ್ಷಕ್ಕೆ ವೋದಿಂಬಟ್ಟಿಕ್ಕೆ ಚತುರ್ದಶಪೂರ್ವ ಧಾರಿಗಳಪ್ಪ ಶ್ರುತಕೇವಳಿಗಳ್ ನಾಲ್ಕನೆಯವರ್ ಗೋವರ್ಧನರೆಂಬ ಭಟಾರರುಜ್ಜ ಯಂತ೧೦ಮಂ೧೦ ವಂದಿಸಲೆಂದು ವಿಹಾರಿಸುತ್ತಂ ಬರ್ಪೊರಾ ೧೧ಕೌಂಡಿನೀ೧೧ ನಗರಕ್ಕೆ ವಂದು ಪೊಱವೊಟಿಲೊಳೊಂದು ಬಟ್ಟನಮೇಗೆ ಪದಿನಾಲ್ಕುಂ ಬಟ್ಟ

೧. ಮಿಲ್ಲದ ಪರಿಣಾಮಮನೊಡೆಯನಾಗಿ (ಘ, ಚ, ಛ). * +ಅಪಿ–ಮತ್ತೆ (ಸ). ೨. ಳ್ದಿ (ಕ, ಖ, ಗ). ೩. (ಘ, ಚ, ಛ) ಗಳಲ್ಲಿಲ್ಲ. ೪. ಕಾಳಿಂಗ (ಘ,ಛ), ಕಳಿಂಗ (ಚ). ೫. ಪಾರ್ವಂ (ಘ,ಚ,ಛ). ೬. (ಘ, ಚ, ಛ) ಗಳಲ್ಲಿಲ್ಲ. ೭. ಮುಂಜಿಗಬದ್ಧನ ಕ್ರಿಯೆಗಳಂ (ಕ, ಗ). ೮. ಮಕ್ಕ (ಗ), + ಬ್ರಹ್ಮಚಾರಿ ಗಳಪ್ಪ (ಘ, ಚ, ಛ). ೯. (ಘ, ಚ, ಛ) ಗಳಲ್ಲಿಲ್ಲ. ೧೦. ಗಿರಿಯಂ (ಛ). ೧೧. ಕಳಿಂಗ (ಘ, ಚ, ಛ).

೧ನೊಂದೊಂದಱಮೇಗೋಳಿಯೊಳಿಟ್ಟಾ೧ಡುತ್ತಿರ್ಪ ಭದ್ರಬಾಹುಮಾಣಿಯಂ ಗೋ
ವರ್ಧನ ಭಟ್ಟಾರರ್ ಪಿರಿದುಂ ಬೇಗಂ ನೋಡುತ್ತಿರ್ದಂತೆಂದು೨ದ್ದೀ೩ಶಂ ಗೆಯ್ದೊ
ರೀತನೆಮ್ಮಿಂಬಟ್ಟಿಕ್ಕೆ ಚತುರ್ದಶಪೂರ್ವಧಾರಿಯ೩ಪ್ಪ ಮಾಹಾತ್ಮ್ಯಮನೊಡೆಯೊಂ
ಭದ್ರಬಾಹು ಭಟಾರರೆಂಬೊರಪ್ಪೊರೆಂದು ಬಗೆದಾತನವರ ಮನೆಗೊಡಗೊಂಡು
ಪೋಗಿಯವರ ತಾಯ್ತಂದೆಗಮಿಂತೆಂದರೀತನನೆಮಗೊಪ್ಪಿಸಿಮೆಲ್ಲಾ ಶಾಸ್ತ್ರಂಗ
೪ಳುಮಂ೪ ೫ಕಲ್ಪಿಸಿ೫ ಪಂಡಿತನಂ ಮಾಡಿ ನಿಮಗೊಪ್ಪಿಸುವೊಮೆಂದೊಡವರು
ಮಂತೆ*ಗೆಯ್ಯಿಮೆಂದೊಡಾತನನೊಡಗೊಂಡು ಪೋಗಿ ಕೆಲವು ದಿವಸದಿಂದೊಳಗೆ
ವ್ಯಾಕರಣಂ ಪ್ರಮಾಣಂ ಛಂದಮಲಂಕಾರ ನಿಘಂಟು ಕಾವ್ಯ ನಾಟಕಂ ಮೊದ
ಲಾಗೊಡೆಯ ಲೋಕದೊಳುಳ್ಳ ಶಾಸ್ತ್ರಂಗಳೆಲ್ಲಮಂ ಕಲ್ಪಿಸಿ೬ದೊಡಧಿಗಮ ಸಮ್ಯಗ್
ದೃಷ್ಟಿಯಾಗಿಯಾಗಮದೊಳೆಲ್ಲಮನಱಿದು ಸಂಸಾರ ಶರೀರ ಭೋಗ ವೈರಾಗ್ಯ ೧೦
ಪರಾಯಣನಾಗಿ ಭಟ್ಟಾರಾ ಎನಗೆ ದೀಕ್ಷೆಯಂ ದಯೆಗೆಯ್ಯಿಮೆನೆ ಭಟಾರರೆಂದ
ರೆಮಗಂತು ದೀಕ್ಷೆಯಂ ಕುಡಲಾಗ ಮಗನೆ ನಿನ್ನ ಪೊಟಲ್ಗೆ ನೀಂ ಪೋಗಿ ನಿನ್ನ ಕಲ್ತ
ವಿದ್ಯೆಯಂ ಪಂಡಿತಿ೭ಕ್ಕೆ೭ಯುಮನಾ ಪೊಟಲೊಳ್ ನೆಗಟ್ಟಿ ನೆಗಟ್ಟಿ ಪಂಡಿತರ್ಕ
ಳೊಡನೆ ವಾದಂಗೆಯ್ದವರಂ ಗೆಲ್ದು ದಶದಿಶೆಗಳೊಳೆಲ್ಲಂ ನಿನ್ನ ಪಾಂಡಿತ್ಯದ ಯಶಮಂ
ಪ೮ಸರಿ೮ಸಿ ನಿನ್ನನಾಮೊಡಗೊಂಡು ಬಂದುದರ್ಕೆ ತಾಯ್ತಂದೆಗಂ ಸಂತೋಸಮಾಡಿ
ಯವರಂ ಬಿಡಿಸಿಯೊಡಂಬಡಿಸಿ ಬಂದೊಡೆ ತ೯ಪಮಂ ಕು೯ಡಲಕ್ಕುಮಂತೆಯಾಗ
ದೆಂದೊಡೆ ಭದ್ರಬಾಹು೧೦ಮಾಣಿಯುಂ೧೦ ಭಟ್ಟಾರರಂ ವಂದಿಸಿ ತನ್ನ ಪೊಟಲ್ಗೆ
ವೋಗಿ ತಾಯುಂ ತಂದೆಯುಮುಂ ಕಂಡು ಪೊಟಲೊಳ್ ನೆಗಟ್ಟಿ ಪಂಡಿತರ್ಕಳೊಡನೆ
ವಾದಂಗೆಯ್ದು ಗೆಲ್ದು ದಶದಿಶೆಗಳೊಳೆಲ್ಲಂ ತನ್ನ ಪಾಂಡಿತ್ಯದ ಯಶಮಂ ಪಸರಿಸಿ
ತಾಯ್ತಂದೆಗಂ ಸಂತೋಸಂ ಮಾಡಿಯವರನೊಡಂಬಡಿಸಿ ಬಂದು ಗೋವರ್ಧನ ೨೦
ಭಟ್ಟಾರರ ಪಕ್ಕದೆ ಕುಮಾರ ಬ್ರಹ್ಮಚಾರಿಯಾಗಿ ಭದ್ರಬಾಹು ತಪಂಬಟ್ಟು ಕೆಲವು
ದಿವಸದಿಂದೊಳಗೆ ದ್ವಾದಶಾಂಗ ಚತುರ್ದಶಪೂರ್ವಮಪ್ಪಾಗಮಮೆಲ್ಲಮಂ ಗ್ರಂಥಾರ್ಥ
ಸ್ವರೂಪದಿಂ ಕಲ್ತು ಸಕಲ ಶಾಸ್ತ್ರ ಪಾರಾವಾರಗನಾಗಿ ಎಲ್ಲಾವೋದುಗಳುಮಂ
ನೆಜ೯ಯೋದಿ ಕಲ್ತು ೧೧ ಶ್ರುತದೊಳಪ್ಪ ಭಕ್ತಿ ಕಾರಣಮಾಗಿ ಪ್ರತಿಮಾಯೋಗಂ
ನಿಂದೊರಂ, ದೇವರ್ಕಳುಂ ಮನುಷ್ಯರ್ಕಳುಂ ಬಂದು ಪಿರಿದಪ್ಪ ಪೂಜೆಯಂ ಮಾಡಿ
ಯರ್ಚಿಸಿ ೧೨ಪೂಜಿಸಿ ಬಂದಿಸಿದೊಡೆ೧೨ಲ್ಲಾ ಋಷಿಸಮುದಾಯಮುಮಂ ಪ್ರತಿ
ಪಾಲಿಸಲ್ಕೆ ಸಮರ್ಥರಾಗಿರ್ಪನ್ನೆಗಂ ಗೋವರ್ಧನ ಭಟ್ಟಾರರ್ ಸಮಾಧಿ ಮರಣ
ದಿಂದಂ ರತ್ನತ್ರಯಮಂ ಸಾಧಿಸಿ ಮುಡಿಪಿ ದೇವಲೋಕಕ್ಕೆ ವೋದರ್

ಇತ್ತ ಭದ್ರಬಾಹು ಭಟ್ಟಾರರ್ ಚತುರ್ದಶಪೂರ್ವಧಾರಿಗಳುಂ ೧೩ಕಡೆ[ಯಾ]
ರಿಸಿ೧೩ಯಯ್ದನೆಯ ಶ್ರುತಕೇವಳಿಗಳವಧಿಜ್ಞಾನಿಗಳುಂ ಪಲವುಂ ಋದ್ಧಿಗಳಿಂ ಕೂಡಿ ೩೦

---

೧. ನೋಳಿಯೋಳಿ (ಘ, ಚ, ಛ). ೨. ಪದೇ (ಗ). ೩. + ಯ್ದನೆಯ ಶ್ರುತಕೇವಳಿಯವಧಿ ಜ್ಞಾನಿ ಪಲವು ರುದ್ಧಿಗಳಿಂದಂ ಕೂಡಿದೊಂ ದೇವರಿಂದಂ ಮನುಷ್ಯರಿಂದಂ ಅರ್ಚಿಸೆ ಪೂಜಿಸೆ ಪಡುವೊಂ ಪಿರಿದ (ಘ, ಚ, ಛ). ೪. ಳ್ಮಂ (ಘ, ಚ, ಛ). ೫. ನೋದಿಸಿ (ಘ, ಚ, ಛ). ೬. ಮನೋದಿಸಿ (ಘ, ಚ, ಛ). ೭ ರ್ಕೆ (ಕ, ಗ). ೮. ಪಗು (ಘ, ಚ, ಛ). ೧೦. ಭಟ್ಟನುಂ (ಚ, ಛ). ೧೧. + ಬಳಿಕನವರತಿ ಸ್ಥಿತಿಯಿಂ (ಘ, ಚ, ಛ). ೧೨. ದರಿಂತೆ (ಘ, ಚ, ಛ). ೧೩. ಕಂಡು ಮಾರುಷಿನ (ಖ), ಕಡೆ (ಘ,ಚ,ಛ), ಕಡಮಾರಿಸಿ (ಕ,ಗ). *ಪು. ೬೬–೬೯* (ಖ)ದಲ್ಲಿ ನಷ್ಟವಾಗಿದೆ.

ದೊರೆಲ್ಲಾ ಋಷಿಸಮುದಾಯಮುಮಂ ಪ್ರತಿಪಾಳಿಸುತ್ತಂ ಗ್ರಾಮನಗರಖೇಡ
ಖರ್ವಡಮಡಂಬಪಟ್ಟಣ ದ್ರೋಣಾಮುಖಂಗಳಂ ವಿಹಾರಿಸು[೧]ತ್ತಿರ್ಪ್ಪನ್ನೆಗಂ[೧]
ಮತ್ತಿತ್ತ ಮಗಧೆಯೆಂಬುದು ನಾಡಲ್ಲಿ ಪಾಟಳೀಪುತ್ರಮೆಂಬುದು ಪೊಲಲದನಾಳ್ವೊಂ
ನಂದನೆಂಬರಸಂ ಪಲಕಾಲಮರಸುಗೆಯ್ಯುತ್ತಿರೆ ಮತ್ತೊಂದು ದಿವಸಂ ಚಾಣಾಕ್ಯ
ನೆಂಬ ಭಟ್ಟನಂ ನಂದಂ ಪರಿಭವಿಸಿ ನೂಂಕಿಯಟ್ಟಿ ಕಳೆಯಿಸಿದೊಡಾತನುಂ
ಮುಳಿದು ನಂದನಂ ಕೆಡಿಸಿ ನಂದನ ರಾಜ್ಯಸ್ಥಾನದೊಳ್ ಪೆಱನೊರ್ವನಂ ಚಂದ್ರ
ಗುಪ್ತನೆಂಬೊನಂ ನಿಱಿಸಿದೊಡಾತನುಂ ಪಲಕಾಲಮರಸು ಗೆಯ್ದು ಕಟಿದೊಡಾತನ
ಮಗಂ ಬಿಂದುಸಾಗರನೆಂಬೊನರಸುಗೆಯ್ದು ಕಟಿದ ಬಟಿಕ್ಕಾತನ ಮಗನಶೋಕ
ನೆಂಬೊನರಸುಗೆಯ್ಯುತ್ತಿರೆ ಆತನ ಮಗಂ ಪ್ರತಾಪದಿಂ ತೇಜದಿಂದಾದಿತ್ಯನೊಳೋ
೧೦ ರನ್ನನಪ್ಪೊಂ ಕುಣಾಳನೆಂಬೊನಂತವರ್ಗಳಿಷ್ಟವಿಷಯ ಕಾಮಭೋಗಂಗಳನನುಭವಿ
ಸುತ್ತಂ ಕಾಲಂ ಸಲೆ ಮತ್ತೊಂದು ದಿವಸಮಶೋಕ ಮಹಾರಾಜಂ ಪರಚಕ್ರದ
ಮೇಗೆತ್ತಿ ಪೋಗಿ [೨]ಅಲ್ಲಿಂದಂ[೨] ಮಂತ್ರಿ ಪುರೋಹಿತ ತಳವಱಾದಿಗಳ್ಗಿಂತೆಂ
ದೋಲೆಯನಟ್ಟಿದೊನುಪಾಧ್ಯಾಯಂಗೆ ಕಟಮೆಯ ಕೂಟುಂ ತುಪ್ಪಮುಂ [೩]ತೊವೆ
ಯುಮಿನುಣಲ್ಕೊಟ್ಟು ಕುಮಾರನನೋದಿಸುಗೆಂದೋಲೆಯನಟ್ಟಿದೊಡೆ ವಾಚಕ
ನೋಲೆಯರ್ಥಮನಱಿಯದೆ ವಿಪರೀತಮಾಗಿಂತೆಂದು [೪]ಬಾಚಿಸಿದನ್[೪]

[೫] ಉಪಾಧ್ಯಾಯಂ ಶಾಲಿಂ ಕೂರಂಚ ಮುಶಿಂ ಘೃತಂ ದತ್ತ್ವಾ ಕುಮಾರಮಂಧಾಪಯೇತ್

ಎಂದಿಂತು ವಿಪರೀತಮಾಗಿ ಲೇಖಾರ್ಥಮಂ ಬಾಚಿಸಿದೊಡನಿಬರುಂ ಕೇಳ್ದು ಅಪ್ರತಿ
ಹತಶಾಸನನಪ್ಪ ನೃಪತಿಯಾಜ್ಞೆಗೆ ಭಯಸ್ಥರ್ಕಳಾಗಿ ಉಸಾಧ್ಯಾಯಂಗೆ ಕಟಮೆಯ
ಕೂಟುಂ ಮಸಿಯುಂ ತುಪ್ಪಮುಮನುಣಲ್ಕೊಟ್ಟು ಕುಣಾಳನೆಂಬ ಕುಮಾರನೆರಡುಂ
೨೦ ಕಣ್ಗಳುಮನೊಡೆದು ಕುರುಡಂ ಮಾಡಿದ ಕೆಲವು ದಿವಸದಿಂದರಸಂ ಪರಚಕ್ರಮಂ
ಸಾಧಿಸಿ ಬಂದು ಮಗಂ ಕುರುಡಾದುದಂ ಕಂಡಾದಮಾನುಮುಬ್ಬೆಗಂಬಟ್ಟು
ಸೈರಿಸಲಾಱದೆ ಕುಣಾಳನರಸಿ ಚಂದ್ರಾನನೆಯೆಂಬೊಳ್ಗೆ ಮಗಂ ಪುಟ್ಟಿದೊಡಾತಂಗೆ
[೬]ಸಂಪ್ರತಿ[೬] ಚಂದ್ರಗುಪ್ತನೆಂದು ಪೆಸರನಿಟ್ಟು ರಾಜ್ಯಾಭಿಷೇಕಂಗೆಯ್ದು ಪಟ್ಟಂಗಟ್ಟಿ
ಸಮಸ್ತ ರಾಜ್ಯ[೭]ಭಾರಮೆಲ್ಲ[೭]ಮಂ ನಿರೂಪಿಸಿ ಕುಣಾಳನುಮನೆಂದಂ ಮಗನೆ ಬೇಡು
ನೀನೆಂದೊಡಾತನುಂ ಕಾಕಿಣೀ ರತ್ನಮಂ ಬೇಡಿದೊಡಾ ರತ್ನಂ ಚಕ್ರವರ್ತಿಗಲ್ಲ
ದಿಲ್ಲೆಂದು ಮಗಂಗೆ ಮಱುಮಾತುಗೊಟ್ಟು ಸಂಸಾರ ವೈರಾಗ್ಯಮಾದಮಾನುಂ
ಪೆರ್ಚಿ ಸುವ್ರತರೆಂಬ ಭಟ್ಟಾರರ ಪಕ್ಕದೆ ಜಿನದೀಕ್ಷೆಯಂ ಕೈಕೊಂಡು ಪರತ್ರೆಯಂ
ಸಾಧಿಸಿದೊಂ ಮತ್ತಿತ್ತ ಸಂಪ್ರತಿ ಚಂದ್ರಗುಪ್ತಮಹಾರಾಜನರಸುಗೆಯ್ಯುತ್ತಿರೆ
ಸಮಾಧಿಗುಪ್ತರೆಂಬಾಚಾರ್ಯರವಧಿಜ್ಞಾನಿಗಳ್ ವಿಹಾರಿಸುತ್ತಂ ಬರ್ಪರಾ ಪಾಟಳೀ
೩೦ ಪುತ್ರಕ್ಕೆ ವಂದು ಪೊಱವೊಲಿಲ ಬಹಿರುದ್ಯಾನವನದೊಳಿರ್ದೊರಂ ಸಂಪ್ರತಿ ಚಂದ್ರ
ಗುಪ್ತಂ ಪೋಗಿ ವಂದಿಸಿ ಧರ್ಮಮಂ ಕೇಳ್ದು ತದನಂತರಂ ತನ್ನ ಭವಾಂತರಂಗಳಂ
ಬೆಸ[೮]ಗೊಂಡೊಡೆ[೯] ಭಟಾರ್ರ್ ಪೇಟಲ್ತೊಡಗಿ[೮]ದರ್

---

೧. ತ್ತಂ ಕಾಲಂಸಲೆ (ಚ). ೨. ಅಲ್ಲಿರ್ದು (ಘ, ಚ, ಛ). ೩. ತೋಯ (ಕ, ಗ). ೪. ಬಾಚಿಸಿದನ್ (ಖ, ಗ, ಘ), ಬೆಸಸಿದರ್ (ಛ). ೫. + ಶ್ಲೋಕ॥ (ಚ). ೬. ಪ್ರತಿ (ಘ, ಚ, ಛ), ಮುಂದೆಯೂ ಈ ಪ್ರತಿಗಳಲ್ಲಿ ಇದೇ ಪಾಠ. ೭. (ಘ, ಚ, ಛ) ಗಳಲ್ಲಿಲ್ಲ. ೮. ಳೆ (ಘ, ಚ, ಛ). ೯. ರಿಂತೆಂ (ಚ).

ಈ ಜಂಬೂದ್ವೀಪದ ಭರತಕ್ಷೇತ್ರದೊಳವಂತಿಯೆಂಬುದು ನಾಡಲ್ಲಿ ವೈದಿಶ
ಮೆಂಬುದು ಪೊಟಿಲದನಾಳ್ವೊಂ ಜಯವರ್ಮನೆಂಬೊನರಸನಾತನ ಮಹಾದೇವಿ
೧ಧಾರಿಣಿ೧ಯೆಂಬೊಳಂತವರ್ಗಳಿಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತಿರೆ
ಮತ್ತಾ ಪೊಟಿಲ ಸಾರೆ ೨ಪರಾಳ೨ಕೂಟಮೆಂಬೂರೊಳ್ ದೇವಿಲನೆಂ ಬೊಂ
ಶಾಕ೩ಟಿ೩ಕಂ ಪರದನಾತನ ಭಾರ್ಯೆ ಪೃಥ್ವಿಶ್ರೀಯೆಂಬೊಳಾಕೆಯ ಗರ್ಭದೊಳ್
ಪಾಪಕರ್ಮಜೀವಂ ನೆಲಸಿದೊಳ್ಡೇನುಂ೪ ನೆವಮಿಲ್ಲದೆ ಕಸವರಮೆಲ್ಲಂ ಕೆ೫ಟ್ಟತ್ತು೫
ಮತ್ತೊಂದು ದಿವಸಂ ಪಲಂಬ೬ರ್ ಶಾಕಟಿಕ೬ ಪರದರುಂಬೆರಸು ಬಂಡಿಗಳೊಳ್
ಪ೭ಟ್ಟಿ೭ಯುಂ ಧಾನ್ಯಮುಂ ತೀವಿಕೊಂಡು ಪೊಟಿಲ್ಗೆ ಮಾಱಲೆಂದು ಪೋಪ
ನ್ನೆಗಮೆಡೆಯೊಳಡವಿಯೊಳ್ ೮ಕಳ್ಳರ್೮ ಬಟ್ಟೆಗಟ್ಟಿ ೯ಮೇಲ್ವಾಯ್ದಿಱ್೯ದೊಡೆ
ದೇವಿಲಂ ಮೊದಲಾ೧೦ಗೊಡೆಯ೧೦ ಪಲಂಬರ್ ಪರದರ್ ಸತ್ತರುಟಿದರೆಲ್ಲಮೋಡಿ ೧೦
ಕೆಟ್ಟೊಡೆ ಬಂಡಮುಮೆಟ್ಟುಗಳುಂ ಮೊದಲಾಗೆಲ್ಲಮುಂ ಕಳ್ಳರ್ ಕೊಂಡುಪೋದರಾ
ಪ್ರಸ್ತಾವದೊಳ್ ಪೃಥ್ವಿಶ್ರೀ ಬೆಸಲೆಯಾಗಿ೧೧ ನಂದಿಮಿತ್ರನೆಂದಾ ಕೂಸಿಂಗೆ ಪೆಸರ
ನಿಟ್ಟು ಎರ೧೨ಟ್ಟೂಱು ತಿಂಗಳಿಂಗೆ೧೨ ತಾಯ್ ಕಟಿದೊಡೆ ೧೩ಬಂದ ನಂಟರ್
ನಡಪೆ ಬಳೆದೊಡಾ ನಂಟರುಂ ಕಟಿದುಳ್ಳರೆಲ್ಲಂ ಸತ್ತು೧೩ ಕುಲಕ್ಷಯಮಾದೊಡೂರವ
ರೆಲ್ಲಮಿಂತೆಂದರೀ ತರುವಲಿ ನಮ್ಮೂರೊಳಿರೆ ನಮಗೆ ಸಾವುಂ ಕೇಡುಮಮೋಘ
ಮಕ್ಕುಮಿವನನಟ್ಟಿ೧೪ ಕಳಿ೧೫ಯಿ೧೫ಮೆಂದೂರಿಂದನಿಬರುಮಟ್ಟಿ ಕಳೆದೊಡಾತನ್
ಕೆಲದೂರ್ಗಳುಮಂ ನಾ೧೬ಟ್ಗಳುಮಂ೧೬ ತೊಟಿಲ್ದು ಬೈಕಂದಿರಿದೆಲ್ಲಿಯಾನುಂ ಪೆತ್ತುಂ
ಪೆಱಿದೆಯುಮಿಂತು ಬಾಟುತ್ತಂ ಪದಿನೈದು ಪದಿನಾಱು ವರುಷದ ಪ್ರಾಯದಾತ
ನಾಗಿ ವೈದಿಶಮೆಂಬ ಪೊಟಿಲ್ಗಿವರ್ಪೊನ್

ಅನ್ನೆಗಂ ಕಾಷ್ಮಕೂಟನೆಂಬ ಬೆಸದವಂ ಪುಳ್ಳಿಯ ಪೊಱೆಯಂ ಪೊತ್ತು ೨೦
೧೭ಪೊಟಿಲ್ಗೆ೧೭ ವರ್ಪೊನಂ ಕಂಡಾತನೊಡನೆ ಗೊಟ್ಟಿಯೊಳ್ ಬಂದು ಪೊಱ
ವೊಟಿಲೊಳಾರವೆಯೊಳ್ ೧೮ಕಾಷ್ಮಕೂಟಂ ಸೇದೆಗೆಟ್ಟು ಪುಳ್ಳಿಯ ಪೊಱೆಯ
ನಿಟಿಪಿ ಪಟ್ಟಿರ್ದೊಡೆ ತಾನುಂ ಪಟ್ಟಿರಲೆಂದು ಬಗೆದು ತಲೆಯತ್ತಿಡಲ್ಕುಱಿಸು
ಯೇನುಮಂ ಕಾಣದೆ ತರ್ಪೊನೆಂಬ್ಬರಿಂದಂ ತಳರ್ಚಲಾಱದಂತಪ್ಪ ಪಿರಿದೊಂದು
ಸಿಲೆಯಂ ತಂದು ತಲೆಯತ್ತಿಟ್ಟು ಪಟ್ಟರ್ದುದಂ ಕಾಷ್ಮಕೂಟನಾತನ ಬಲಮುಂ
ಕಂಡು ತನ್ನ೧೯ ಮನೆಗೊಡಗೊಂಡು ಪೋಗಿಯೂಡಿ ನಿನಗೀ ಪೊಟಿಲೊಳಾರಾನುಂ
ನಂಟರೊಳರೆಯೆಂದು ಬೆಸಗೊಂಡೊಡಾರುಮಿಲ್ಲೆಂದೊಡಂತಪ್ಪೊಡೆ ೧೯ನೀನೆ
ನ್ನೊಡನಿರೆತ್ತಲುಂ ಪೋಗದಿರೆಂದು೧೯ ತಾಂಗಿ ತಾನುಮಾತನುಮಂತಿರ್ದರುಂ

---

೧. ವಾರಣಿ (ಕ, ಖ). ೨. ಪಲಾಲ (ಘ, ಚ, ಛ). ೩. ದಿಕಂ (ಕ, ಖ, ಗ). ೪. ಡೊಂದುಂ (ಘ, ಚ, ಛ.) ೫. ಟ್ಟು (ಘ, ಚ, ಛ). ೬. ರುಂ ಶಾಕದಿಕ (ಕ, ಖ, ಗ). ೭. ತ್ತಿ (ಸ-ಕ). ೩೦
೮. ಬೇಡರುಂ (ಕ, ಖ, ಗ). ೯. ಮೇಲ್ವಾಯ್ದೆಱಿಗಿ (ಕ), ಮೇಲ್ಪೊಯ್ದೆಱಿಗಿ (ಗ), ಇರುಳು ಹಾದಿಯನಿಱಿ (ಘ,ಛ), ಹಾದಿಯನಿರುಳು ತಾಗಿ (ಚ). ೧೦. ಗಿ (ಕ,ಖ,ಗ). ೧೧. + ಯಾವೂರ್ಗೆ ವಂದು (ಘ, ಚ, ಛ). ೧೨. ಡು ಮೂಱು ತಿಂಗಳೊಳಗೆ (ಸ-ಕ). ೧೩. ಬಡ ನಂಟರುಂ ಕಳಿದು (ಕ,ಖ,ಗ). ೧೪. + ಕಟ್ಟಿ (ಘ, ಚ, ಛ). ೧೫. ವ (ಘ, ಚ, ಛ). ೧೬. ಡ್ಗಳುಮಂ (ಖ), ಟ್ಗಿ ಳ್ಮಂ (ಗ,ಘ,ಚ,ಛ). ೧೭. ಪೋಗಲ್ಕೆ (ಕ, ಖ, ಗ). ೧೮. ಪುಳ್ಳಿಯಂ ಮಾಱಿ (ಕ, ಖ, ಗ). ೧೯. ನೀ ನೆತ್ತಲುಂ ಪೋಗಲ್ವೇಡೆನ್ನೊಡನಿರೆಂದು (ಘ, ಚ, ಛ).

೧ದಿವಸಕ್ಕಂ೧ ಪುಳ್ಳಿಯಂ ತರೆ ಪದಿಂಬರ್ ತರ್ಪ ಪೊಱೆಯನೊರ್ವನೆ ತರ್ಪನಂತು
ಪಲವು ದಿವಸಂ ಸಲೆ೨ ಕಾಷ್ಮಕೂಟಂ ತನ್ನ ಪೆಂಡತಿ ೩ಜಯ೩ಘಂಟೆ
ಯೆಂಬೊಳನಿಂತೆಂದು ಕಲ್ಪಿಸಿದನೀತಂಗೆ ನೀಂ ಬಸಿಱ್ತೀವೆ ಬಡ್ಡಿಸದಿರೆಣ್ಣೆಯಂ
ತಿಣ್ಣಮೆಱೆಯದಿರ್ ವಿಾಯಲ್ ಬೇಡಿದೊಡಮೆಱೆಯದಿರೆಂದು ೪ಕಲ್ಪಿಸಿ
ದೊ೪ಡಾಕೆಯುಮಾ ಪಾಂಗಿನೊಳ್ ೫ದಿವಸಕ್ಕಂ೫ ಬಡ್ಡಿಸೆ ನಂದಿಮಿತ್ರನುಂ
ಪಿರಿಯ೬ ಪುಳ್ಳಿಯ ಪೊಱೆಗಳಂ ದಿವಸಕ್ಕಂ ತಂದು ಕುಡಲವಂ ಮಾಱಿ ಕಾಷ್ಮ
ಕೂಟನೊಡೆಯೊನಾದೊನಿಂತು ದಿವಸಂಗಳ್ ಸಲೆ ಮತ್ತೊಂದು ದಿವಸಂ ಜಯ
ಘಂಟೆ ಕರುಣಿಸಿ ತಣಿಯೆ ಬಡ್ಡಿಸಿದೊಡುಂಡು ಮಱುದಿವಸಮಿರ್ವರುಂ ಪುಳ್ಳಿ೭ಗೆ
ಪೋ೭ದಲ್ಲಿ ನಂದಿಮಿತ್ರನೆಂದನಯ್ಯಾ ೮ಎನಗುಡಲಿಲ್ಲೀನುಮೊಂದು ದಮ್ಮಕ್ಕಾ
೧೦ ದೊಡಂ೮ ಸೀರೆಯಂ ೯ಕೊಂಡೀಯಿ೯ಮೆಂದೊಡಂತೆ ಗೆಯ್ವೆನೆಂದು ಮಱುಮಾತು
ಗೊಟ್ಟಿರ್ವರುಂ ೧೦ಪುಳ್ಳಿಯ ಪೊಱೆಯಂ೧೦ ಮನೆಗೆ ೧೧ತಂ೧೧ದ ಬಟ್ಟಿಕ್ಕೆ ೧೨ಕಾಷ್ಮ
ಕೂಟಂ೧೨ ಪೆಂಡತಿಯನೆಂದನೀತಂಗೆ ನೀಂ ಬಸಿಱ್ತೀವೆಯುಣಲಿಕ್ಕಿದಾ
ಎಂದೊಡೆ ಕರುಣಿಸಿ ಪರ್ವಮೆಂದು ತಣಿಯೆಯುಣಲಿಕ್ಕಿದೆನೆಂದೊಡೆ ಮುಳಿದು
ಸಾಯೆಬಡಿದು ಮನೆಯಿಂ ಪೆಂಡತಿಯನಟ್ಟಿ ಕಳಿದೊಡೆ ನಂದಿಮಿತ್ರಂ ಪೋಗಿ ಜಯ
ಘಂಟೆಯಂ ಬೆಸಗೊಂಡನ್ ನಿನ್ನನೇಕೆ ಕಾಷ್ಮಕೂಟಂ ಬಡಿದ೧೩ನಬ್ಬಾ ಎಂದು ಬೆಸ
ಗೊಂಡೊಡೆ೧೩ ನಿನಗೆ ನಿನ್ನೆ ತಣಿಯೆಯುಣಲಿಕ್ಕಿದೆನೆಂದು ಮುಳಿದು ಬಡಿದಟ್ಟಿ
ಕಳಿದೊನೆಂದೊಡಿಂತಪ್ಪ ಪಂಚಮಹಾಪಾತಕನ ಮನೆಯೊಳ್ ಮಾರಿಯಿರ್ಕೆಂದು
ಕಾಷ್ಮಕೂಟನಂ ಬಿಸುಟ್ಟು ಪೋಗಿ ಬೇಱೆ ತನಗೆ ಪುಳ್ಳಿಗಳಂ ದಿವಸಕ್ಕಂ ತಂದು
ಮಾಱಲ್ತಗುಳ್ದೊಡೆಂಟು ದಮ್ಮದ ಪುಳ್ಳಿಯಂ ತಂದೊಡಮೊಂದು ೧೪ಪಣ೧೪ಮ
೨೦ ನಪ್ಪೊಡಂ ಪೆಱದೆ ಬಸಿರ್ಕೂಟ್ಗಿಮಂಬಲಿಗಮೆಣ್ಣೆಗಂ ಕಟ್ಟಿಗಂ ಕೊಟ್ಟು ಪೋಕು
ಮಿಂತು ಬಾಟುತ್ತುಮಿರೆ

ಮತ್ತೊಂದು ದಿವಸಂ ಪುಳ್ಳಿಗೆ ಪೋಗಿ ಪುಳ್ಳಿ೧೫ಯ ಪೊಱೆಯಂ೧೫
ಪೊ೧೬ತ್ತು೧೬ ಬರ್ಪೊನನ್ನೆಗಮೆಡೆಯೊಳ್ ಶಿವಗುಪ್ತಾಚಾರ್ಯರಷ್ಟಾಂಗ ನಿಮಿತ್ತಂ
ಗಳಂ ಬಲ್ಲೊರಡವಿಗೆ ವೋಗಿ ಸಿದ್ಧಾಂತಮಂ ಪರಿವಿಡಿಗೆಯ್ದುಂದಿನ ದಿವಸಮಲ್ಲಿಯೆ
ದೇವರಂ ವಂದಿಸಿ ಪಕ್ಷೋಪವಾಸದ ಪಾರಣೆಗೆಂದು ಪೊಟಲ್ಗೆ ಚರಿಗೆವುಗತಂ
೧೭ದೊಡೆ೧೭ ನಂದಿಮಿತ್ರಂ ಕಂಡಾಶ್ಚರ್ಯಭೂತನಾಗಿ ನೀಡುಂ ನೋಡಿಯಿವ
ರೆಲ್ಲಿಗೆ ವೋದಪ್ಪರೋ ಎಂದು ಬಟ್ಟಿವಟ್ಟಿಯನೆ ವಂದು ಪೊಱವೊಟಿಲ ಬಸದಿಯ

---

೧. ನಿಚ್ಚ ನಿಚ್ಚಂ (ಘ, ಚ, ಛ). ೨. ಮಂತರ (ಕ, ಖ, ಗ). ೩. ಯಮು (ಘ, ಚ, ಛ); ಮುಂದಕ್ಕೂ ಇದೇ ಈ ಪ್ರತಿಗಳ ಪಾಠ. ೪. ಪೇಳ್ದೊ (ಘ, ಚ). ೫. (ಘ, ಚ, ಛ) ಗಳಲ್ಲಿಲ್ಲ.
೨೦ ೬. + ವಪ್ಪ (ಘ, ಚ, ಛ). ೭. ಯತರವೋ (ಘ, ಚ, ಛ). ೮. ಎನುಗುಡಲಿಲ್ಲೀನುಮೊಂದು ದಮ್ಮಕ್ಕಪ್ಪಡಂ (ಘ), ಎನಗೊಂದು (ಚ), ಎನುಗುಡಲೊಂದು ದಮ್ಮಕ್ಕಪ್ಪಡಂ (ಛ). ೯. ಕುಡಿ (ಕ, ಗ). ೧೦. (ಘ, ಚ, ಛ) ಗಳಲ್ಲಿಲ್ಲ. ೧೧. ವಂ (ಘ, ಚ, ಛ). ೧೨. (ಕ, ಖ, ಗ) ಗಳಲ್ಲಿಲ್ಲ. ೧೩. ಟ್ಟ ಕಳಿದನೆಂದೊಡೆ (ಘ, ಚ, ಛ). ೧೪. ದಮ್ಮ (ಘ, ಚ, ಛ). ೧೫. ಯಂತಲೆವೊಱೆ (ಘ, ಚ, ಛ). ೧೬. ಳ್ತು (ಕ, ಖ, ಗ). ೧೭. ದರಂ (ಘ, ಚ, ಛ).

ಪ್ರಾಕಾರದೊಳಗೆ ಪುಳ್ಳಿಯ ಪೊಱೆಗಿಯನಿಕ್ಕಿ ನೋಲ್ಪನನ್ನೆಗಮಿವರನೆಂದವರಂ
ಬಟಿವಟಿಯನೆ ಬರ್ಪನ್ನೆಗಮಾ[೧] ದಿವಸಮರಸಂ ತಿವಗುಪ್ತ ಭಟ್ಟಾರಕ
ಗ್ಗಾ[೨]ಂ ಪಾರಣೆಯಂ ಮಾಡುವೆಂ ಪೆಱರಾರುಂ ನಿಱಿಸಲ್‌ಸಲ್ಲೆಂದು ಪೊಟಲೊಳ
ಗೆಲ್ಲಂ [೩]ಗೋಸನೆ[೪]ಯಂ [೫]ತೊಟಲ್ಚಿ[೫]ದೊಡಂಜಿಯಾರುಂ ನಿಱಿಸುವರಿಲ್ಲದೆ
ಭಟಾರರುಂ ಕೆಱುಮನೆ ಪೆರ್ಮನೆಯೆನ್ನ[೬]ದುಣಲ್ತಕ್ಕ[೬] ಮನೆಗಳಂ ಚರಿಗೆವುಗುತ್ತಂ
ಬರ್ಪೊರರಮನೆಯಂ ಪೊಕ್ಕಾಗಳ್ ಕಂಡರಸನುಂ ಮಹಾದೇವಿಯುಂ [೫]ಸುವರ್ಣ[೫]
ಪೂರ್ಣ ಕಳಶಮುಂ ಕನ್ನಡಿಯುಂ ಪೂವುಮಕ್ಕಿಯುಂ ಮಾದುಫಲಮುಂ ಮೊದ
ಲಾ[೭]ಗೊಡೆಯನೇಕಾರ್ಚನೆಯಿಂದಿದಿರಂ[೮] ಬಂದು ನಿಱಿಸಿ ಬಲಗೊಂಡುಬಂದು
ಭಟಾರರ ಕಾ[೯]ಲಂ[೯] ಮಹಾದೇವಿ ನೀ[೯]ರ್ವೊಯ್ಯೆ[೯] ಅರಸಂ ತಾನೆ [೯]ಪ್ರಕ್ಷಾಳಿಸಿ[೯]
ಬಟಿಕ್ಕೊಡವೋದ ಬೋಟಿದಲೆಯ ದೇಸಿಗನ ಕಾಲಂ ಬ್ರಹ್ಮಯ್ಯಾ ನೀಡಿಂ ೧೦
ನಿಮ್ಮ ಕಾಲಂ ೧೦[೧೦]ತೊಳಿ೧೦[೧೦]ವೆಮೆಂದು ಮಹಾದೇವಿ ತಾನೆ ಕಾಲಂ ಕರ್ಚಿ ಭಟ್ಟಾರ
